

# ಅಖಿಲ ಭಾರತ ಪತ್ರಿಕೆ

ಮೇ 2022

# ಪ್ರಜ್ಞಾಪೂರ್ಣ ವಿಕಾಸವೇ ಯೋಗ

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ರೇಖಿಸುತ ಪೂರ್ಣ ವಿಶ್ವವನು ಸ್ವಯಂ–ಸಮಾವೇಶದೆಡೆ ತಾನು,
ಉನ್ಮನವು ಸಾಗಿ ದರ್ಶಿಸುತ, ಅವಿತು ಕುಳಿತಿರುವ ಲೋಕಗಳನು,
ಪವನವದು ಹಿಗ್ಗಿ ಮಾಲೆಗಳ ಸುಗ್ಗಿ ಆಕರ್ಷ ಗರ್ಭ–ರೂಪು
ಇಡಾ–ಪಿಂಗಳದಿ ತೀವ್ರ ಸಂಚಲನ, ಕಂಪನದಿ ಸೂಸಿ ತಂಪು

ಅಪರಿಚಿತವಾದ ವಾಗ್ರೂಪದಲ್ಲಿ ಸಂತ್ಯವದು ಮಿಳಿತಗೊಂಡು
ಸುಪ್ತವಾಗಿದ್ದ ಆತ್ಮದಾ ಗುಪ್ತ ಪಥದಿಂದ ಉದಿತಗೊಂಡು
ವಿರಾಟ್–ವಿಶ್ವಗಳ ಪಾತಳಿಯ ತಳದಲಿಮದುವು ಸಲಿಲವಾಗಿ
ಅಂತರಿಕ್ಷದಾ ಸಾಂತ ಮೌನದಲಿ ಸರ್ವಜ್ಞ ಮಾತ್ರ ಭಾಗಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 29)**

**ಅಖಿಲ ಭಾರತ ಪತ್ರಿಕೆ**

**ಮೇ 2022**

ಸಂಪುಟ: 32 ಸಂಚಿಕೆ: 05


# ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## “ಪ್ರಜ್ಞಾಪೂರ್ಣ ವಿಕಾಸವೇ ಯೋಗ”

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಯೋಗವೆಂದರೆ ಏನು?** 8
ಅನು: ನಾಗಜ್ಯೋತಿ ಮಾನ್ವಿ

**ಹಠಯೋಗ** 13
ಅನು: ಡಾ॥ ಮಹಾದೇವ ಸಕ್ರಿ

**ರಾಜಯೋಗ** 15
ಅನು: ಡಾ॥ ಮಹಾದೇವ ಸಕ್ರಿ

**ಜ್ಞಾನಯೋಗ; ಜ್ಞಾನ ಪಥ** 17
ಅನು: ಡಾ॥ ಮಹಾದೇವ ಸಕ್ರಿ

**ಭಕ್ತಿಯೋಗ; ಭಕ್ತಿ ಮಾರ್ಗ** 19
ಅನು: ಶ್ರೀ ವೀರಭದ್ರಪ್ಪ. ಕೆ

**ಕರ್ಮಯೋಗ; ಕ್ರಿಯಾಪೂರ್ಣ** 23
ಅನು: ಡಾ॥ ಬಿ.ಆರ್. ಭೀಡ್

**ತಂತ್ರ ಯೋಗ** 26
ಅನು: ಶ್ರೀ ಪುಟ್ಟು ಕುಲಕರ್ಣಿ

**ಪೂರ್ಣಯೋಗ** 27
ಅನು: ಶ್ರೀ ಎಂ.ಎಸ್. ನಾಗರವಳ್ಳಿ

**ಶ್ರೀ ಅರವಿಂದರ ಕಾವ್ಯ ‘ಅಹಾನಾ’** 30
ಅನು: ಶ್ರೀ ಪುಟ್ಟು ಕುಲಕರ್ಣಿ

**ಯುವಚೇತನಗಳಿಗೆ “ಶ್ರೀ ಅರವಿಂದರು”** 44
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ‘ಗೀತಾ ಪ್ರಬಂಧಗಳು’** 50
ಅನು: ಜಾನ್ವಿ

**ವಾರ್ತಾಪತ್ರ** 71

## ಸಂಪಾದಕೀಯ

### ಪ್ರಜ್ಞಾಪೂರ್ಣ ವಿಕಾಸವೇ ಯೋಗ

ಲೌಕಿಕದ ಬದುಕಿನಲ್ಲಿ ತಲ್ಲಣಗಳು ಸಹಜ; ಇವು ಮಾನವನಿಂದಲೇ ನಿರ್ಮಿತಿಗೊಳ್ಳುತ್ತವೆಯೋ ಅಥವಾ ನಿಯತಿಯ ಅನುಸಾರ ವಿಕಸನದ ಸಲುವಾಗಿ ಘಟಿಸಲೇಬೇಕಾದ ಮಾನಕಗಳೋ ಎನ್ನುವದು ಇನ್ನೂ ನಿರ್ಧರಿತವಾಗಿಲ್ಲ. ಆದರೆ ಮಾನವನು ಮುಗ್ಧತೆಯಲ್ಲಿಯೋ ಅಥವಾ ಅಜ್ಞಾನದಲ್ಲಿಯೋ ಅಥವಾ ಅಹಂಕಾರದಲ್ಲಿಯೋ, ಪ್ರಕೃತಿಯ ಸಂರಚನೆಯ ಮೂಲಸೂತ್ರವನ್ನು ಕಡೆಗಣಿಸಿ, ಎಲ್ಲವೂ ತನ್ನಿಂದಲೇ ಘಟಿಸುತ್ತಿದೆ ಎನ್ನುವ ಭ್ರಮೆಯಲ್ಲಿ ಬದುಕು ಸಾಗಿಸುತ್ತಾನೆ. ಇಂತಹ ಸಂದರ್ಭಗಳಲ್ಲಿ ಸಹಜವಾಗಿ ವಿಪ್ಲವಗಳು ಹಾಗೂ ತಲ್ಲಣಗಳು ಉದ್ಭವಿಸುತ್ತವೆ. ಇಂತಹ ವಾತಾವರಣಕ್ಕೆ ಸಿಲುಕಿದ ವರ್ತಮಾನವು ಅಲ್ಲೋಲ–ಕಲ್ಲೋಲಗೊಳ್ಳುವದಲ್ಲದೇ, ಭವಿಷ್ಯದ ಮಾರ್ಗವೂ ಸಹಿತ ಕಾಣದಂತಾಗುತ್ತದೆ. ಈ ಆಘಾತಕಾರೀ ವ್ಯವಸ್ಥೆಯನ್ನು ಮತ್ತೆ ಸೂಕ್ತಗೊಳಿಸಿ, ನಿಯತಿ–ನಿರ್ಧರಿತ ವಿಕಾಸನವನ್ನು ರೂಪಿಸಲು, ಸಮುದಾಯವನ್ನು ಸಂರಕ್ಷಿಸಲು, ಮತ್ತು ಇದರಿಂದ ರೂಪಣೆಗೊಂಡ "ಶಕ್ತಿ"ಯನ್ನು ಆಧರಿಸಿಕೊಂಡೇ ಪೀಳಿಗೆಯೂ ಸಾಗಲು ಅನುಕೂಲವಾಗುವಂತೆ ವಾತಾವರಣವನ್ನು ನಿರ್ಮಿಸಿಕೊಳ್ಳುತ್ತದೆ. ಯಾರು ಆರ್ತವಾಗಿ ಇದಕ್ಕಾಗಿ ಪ್ರಾರ್ಥಿಸುತ್ತಾರೆಯೋ, ಅವರವರ ಭಾವಕ್ಕೆ ತಕ್ಕಂತೆಯೇ ನಿರ್ಮಿತಿಗೊಂಡ ಪಥಗಳೇ "ಯೋಗ ಪರಂಪರೆ"ಯಾಗಿದೆ.

ಯೋಗವೆಂದರೆ ಸಂಯೋಗಗೊಳ್ಳುವದು ಎಂದರ್ಥವಿದೆ. ಒಂದಾಗು ಎಂತಲೂ ಅರ್ಥವಿದೆ. ವಿಶ್ವಶಕ್ತಿಯಿಂದ–ಕಾರಣಾಂತರದಿಂದ – ಭಿನ್ನವಾಗಿ, ರೂಪಧಾರಣೆ ಮಾಡಿಕೊಂಡು ಬಂದಾಗ, ಆ ವಿಶ್ವಶಕ್ತಿಯು, ಈ ರೂಪಧಾರಣೆಯ ವ್ಯವಸ್ಥೆಯಲ್ಲಿ ಸೀಮಿತಗೊಳ್ಳುವದರಿಂದ, ಅದನ್ನು ಮತ್ತೆ ಪಡೆಯುವ ಅಭೀಪ್ಸೆಯು ಉದಿಸಿದಾಗ, ಅದರೆಡೆ ಸಾಗುವ ಪಥವೇ ಯೋಗದ ಪಥವಾಗಿದೆ. ವೈವಿಧ್ಯತೆಯ ಪ್ರಕೃತಿಯ ಗುಣವಿಶೇಷದಿಂದಾಗಿ, ಈ ಪಥಗಳೂ ಸಹಿತ ವೈವಿಧ್ಯಮಯವಾಗಿಯೇ ಅನುಷ್ಠಾನಗೊಂಡಿವೆ. ಸಂಪೂರ್ಣ ಶರಣಾಗತಿಯನ್ನು ಹೊಂದಿ ಭಕ್ತಿಯ ಪರಾಕಾಷ್ಠೆಯಲ್ಲಿ ವಿಶ್ವಸತ್ಯದ ಸ್ಪಂದನಗಳನ್ನು ಪಡೆಯುವದು ಒಂದು ಮಾರ್ಗವಾಗಿದೆ; ಇಲ್ಲಿ ಮಾನವನ ಹೃದಯ (ಮನಸ್ಸು) ಸಂಪೂರ್ಣವಾಗಿ ಪ್ರಕೃತಿಯ ಸರ್ವ ಶ್ರೇಷ್ಠತೆಯನ್ನು ಆರಾಧಿಸಿಕೊಂಡೇ ಯಶಸ್ವಿಯಾಗುತ್ತದೆ. ಮಾನವನ ಬದುಕು

ರೂಪಿಸಿದ, ಆನ್ವೇಷಣೆಯಲ್ಲಿ ಆಯಾಮ ಗಳಿಸಿದ ಕೆಲಸಗಳು, "ಕರ್ಮ"ದ ಹಿನ್ನೆಲೆಯಲ್ಲಿ, ಪೂರ್ವನಿರ್ಧರಿತವಾಗಿಯೇ ಇರುವದು ಎನ್ನುವ ಆಧಾರದಲ್ಲಿ ರೂಪಿತಗೊಂಡ 'ಕರ್ಮಯೋಗ' ಮಾನವನ ಬದುಕಿಗೆ ನಿತ್ಯ ನೂತನತೆಯನ್ನು, ಸಾರ್ಥಕತೆಯನ್ನು ತಂದಿತು; ಬೌದ್ಧಿಕ ವಿಕಸನದ ಅಲೆಗಳಲ್ಲಿ ರೂಪಿಗೊಂಡ ಈ ಜ್ಞಾನದ ಕಿರಣಗಳ ಹಿಂದೆ ಇರುವ ನಿಗೂಢ ಸತ್ಯವನ್ನು ದರ್ಶಿಸಿದ ಮನಸ್ಸು, ಅದನ್ನೇ – ಜ್ಞಾನವನೇ ಪ್ರಧಾನವಾಗಿಸಿಕೊಂಡು ರೂಪಣೆಗೊಂಡ 'ಜ್ಞಾನಯೋಗ'ವು ಮನುಷ್ಯನನ್ನು ಪ್ರಾಣಿ ಪ್ರಪಂಚದಿಂದ ಮೇಲೆತ್ತಿ, ಕುತೂಹಲಿಯನ್ನಾಗಿಸಿದೆ.

ಈ ಜ್ಞಾನಯೋಗದ ಆಧಾರದಲ್ಲಿ ಅನುಷ್ಠಾನಗೊಳ್ಳಲೇಬೇಕಾದ ಕರ್ಮಗಳನ್ನು ರೂಪಿಸಲು, ಈ ಮಧ್ಯದ ಅವಧಿಯಲ್ಲಿ ತಂತ್ರಯೋಗ ರೂಪಿತಗೊಂಡಿತು. ತಾನು ಪಡೆದ ಶಕ್ತಿಯನ್ನು, ತನ್ನ ಜೀವಿತಾವಧಿಯಲ್ಲಿಯೇ ಪ್ರದರ್ಶಿಸುವ ಸಾಹಸದಲ್ಲಿ ರೂಪಿತಗೊಂಡಿರುವ "ಹಠಯೋಗ"ವು ಜನ ಮಾನಸದಲ್ಲಿ ಭಯಮಿಶ್ರಿತ ಭಕ್ತಿಯ ರೂಪದಲ್ಲಿ ಕಾಣಿಸುತ್ತಿದೆ. ಈ ಎಲ್ಲ ಆಯಾಮಗಳ ವಿಕಾಸವು, ಮಾನವನ ಪ್ರಕೃತಿ ಸಹಜ ವೈವಿಧ್ಯತೆಯ ಕಾರಣದಿಂದಾಗಿ, ಆಯಾ ಭೌಗೋಳಿಕ ವಾತಾವರಣದ ಪ್ರಭಾವದಿಂದಾಗಿ, ಮತ್ತೆ ರೂಪಾಂತರಗೊಳ್ಳುತ್ತ – ಆಯಾಮವನ್ನು ಹೆಚ್ಚಿಸಿಕೊಳ್ಳುತ್ತ – "ರಾಜಯೋಗದ" ಹಂತಕ್ಕೂ ಬಂದಿದೆ.

ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಹಾಗೂ ತಂತ್ರಯೋಗಗಳ ಬಗೆಗೆ ಸಾವಿರಾರು ವರ್ಷಗಳ ಪರಂಪರೆ ಇದೆ. ಆದರೆ ಆಯಾ ಪಥವನ್ನು ರೂಪಿಸಿದ ವ್ಯಕ್ತಿಗಳು ಹೊಂದಿದ್ದ ಮೂಲ ಧ್ಯೇಯವು ಕಾಲದ ಪ್ರಭಾವದಲ್ಲಿ ಶಿಥಿಲವಾಗುವಂತೆ ಕಂಡರೂ, ಅಂತಃಸತ್ವದ ಘನತೆಯಿಂದಾಗಿ, ಈಗಲೂ ಜಗತ್ತಿನಾದ್ಯಂತ ಬದುಕಿನ ಸೂತ್ರಗಳಾಗಿ ಸಹಾಯಕವಾಗಿವೆ. ಆದರೆ ಆಯಾ ಯೋಗದ ಪರಿಕಲ್ಪನೆಯನ್ನು ನೀಡಿದ ಮೂಲ ವ್ಯಕ್ತಿಯ ನಂತರದ ಸ್ಥಿತಿಯ ವ್ಯತ್ಯಯಗಳಿಗೆ ಕಾರಣಗಳನ್ನು ಶ್ರೀ ಅರವಿಂದರು ನಿಖರವಾಗಿ ಗುರುತಿಸಿ, "ಧಾರ್ಮಿಕ, ಸಂಸ್ಥೆಗಳ ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ (ಆತ್ಮಗತ) ದೃಷ್ಟಿಕೋನಗಳು ಧಾರ್ಮಿಕ ಸಂಸ್ಥೆಗಳ ವಿಶ್ಲೇಷಣೆಯನ್ನು ನಾವು ಕೈಕೊಂಡು, ಜೊತೆಗೆ ಅವುಗಳ ಮೂಲ ತಳಹದಿಯನ್ನು ಗಮನಿಸಿದಾಗ, ಬಹುತೇಕವಾಗಿ, ಅಲ್ಲೊಬ್ಬ ಪ್ರಭಾವಳಿಯಿಂದ ಬೆಳಗುತ್ತಿರುವ ಧರ್ಮ ಸಂಸ್ಥಾಪಕನ ಮತ್ತು ಅವನ ದೈವಿಕ ಅನುಭವಗಳ ಹಾಗೂ ಆ ಅನುಭವಗಳ ಮೂಲಕವಾಗಿಯೇ ನಿರ್ಮಿತಿಗೊಳ್ಳುತ್ತಿದ್ದ ಜ್ಞಾನ ಮಾರ್ಗಗಳು ಸಹಜವಾಗಿ ಸಂವಹನಗೊಳ್ಳುತ್ತ ಜನ ಮಾನಸದಲ್ಲಿ,

ಅದರಲ್ಲೂ ಆ ವ್ಯಕ್ತಿಯೊಡನೆ ನೇರ ಸಂಪರ್ಕಕ್ಕೆ ಬಂದವರಿಗೆ ಸಂವಹನಗೊಳ್ಳುತ್ತಿದ್ದವು. ಈ ಹಂತದಲ್ಲಿ ವಸ್ತುನಿಷ್ಠತೆ, ಆಂತರ್ಯದ ಅನುಭವ, ಆ ವ್ಯಕ್ತಿಯ ಸಹಜವಾದ ಅಂತಃಪ್ರೇರಣೆ ಹಾಗೂ ಪ್ರಕಟಗೊಳ್ಳುತ್ತಿದ್ದ ಅಭಿವ್ಯಕ್ತಿಗಳಲ್ಲಿ ಏಕೀರ್ಭವಿಸಿರುತಿದ್ದವು. ಇದರಿಂದಾಗಿ ಈ ವ್ಯಕ್ತಿಯೊಡನೆ ನೇರವಾಗಿ ಸಂಪರ್ಕಕ್ಕೆ ಬಂದ ಪ್ರತಿಯೋರ್ವ ಅನುಯಾಯಿಗೂ ಸುಲಭವಾಗಿ ಸಂವಹನಗೊಳ್ಳುತ್ತಿದ್ದವು. ಜೊತೆಜೊತೆಗೆ ಅವರ ಸುತ್ತಲೂ ಇದ್ದ ಲೋಕಕ್ಕೂ ತಿಳಿಯುತ್ತಿತ್ತು. ಅಲ್ಲಿ ಜೀವಂತಿಕೆ ಇತ್ತು; ಅದು ಶಕ್ತಿಪೂರಿತವಾಗಿತ್ತು. ಆದರೆ ಆ ಧರ್ಮಸಂಸ್ಥಾಪಕ ವ್ಯಕ್ತಿಯು ನಿರ್ಗಮಿಸಿದ ನಂತರದಲ್ಲಿ ಮತ್ತು ಅವನ ಜೊತೆಗೆ ನೇರವಾಗಿ ಕಾರ್ಯ ನಿರ್ವಹಿಸುತ್ತಿದ್ದ ವ್ಯಕ್ತಿಗಳ ನಿರ್ಗಮನದ ನಂತರದಲ್ಲಿ, ಅವರ ಸ್ಥಾನದಲ್ಲಿ ಉದಿಸಿದ ಧಾರ್ಮಿಕ ಪಂಥಗಳು, ಸಂಸ್ಥೆಗಳು, ರಿವಾಜುಗಳು, ಸಂಪ್ರದಾಯಗಳು, ಆಚರಣೆಗಳು ಮತ್ತು ಪಂಥಗಳೂ ಪ್ರಾರಂಭಗೊಂಡವು. ಇದೇ ರೀತಿಯಾಗಿ ನಿರ್ಮಿತಿಗೊಂಡ ಧಾರ್ಮಿಕ ಸಂಸ್ಥೆಗಳ ಬೆಳವಣಿಗೆಯೇ ಮುಂಚೂಣಿಗೆ ಬಂದಿತು. ಆದರೆ ಈ ತೆರನಾದ ಅವಧಿಯಲ್ಲಿ ಅಭಿವೃದ್ಧಿಗೊಂಡ ಮತ್ತು ಆಯಾ ಸಂದರ್ಭದ ಸಾಂಪ್ರದಾಯಿಕವಾದ ರೂಪಣೆಗಳು ಮತ್ತು ಅನುಭವಗಳು ಕೇವಲ ಹೊರಾವರಣದ ಆಚರಣೆಯ ಭಾರದಲ್ಲಿಯೇ ಕುಸಿಯತೊಡಗಿದವು." ಎಂದಿದ್ದಾರೆ.

ಮಾನವನ ವಿಕಾಸವು ಇನ್ನೂ ಪ್ರಗತಿಯ ಪಥದಲ್ಲಿಯೇ ಇದೆ. ಅದರ ನಿದರ್ಶನವೆನ್ನುವಂತೆ, ಕೇವಲ ಭೂಬದುಕಿಗೆ ಅಂಟಿಕೊಂಡು ರೂಪಿತವಾಗಿದ್ದ, ಅನುಷ್ಠಾಗೊಳ್ಳುತ್ತಿರುವ ಯೋಗದ ಪರಂಪರೆಗೆ ಇದೀಗ ವೈಶ್ವಿಕ ಆಯಾಮದಲ್ಲಿ ರೂಪಣೆಗೊಳ್ಳುತ್ತಿದೆ. ಮಾನವನ ಊರ್ಧ್ವಮುಖೀ ಚಿಂತನಗಳು, ಸಂಶೋಧನೆಗಳು ಮಾನವನ ಜ್ಞಾನದ ಕ್ಷಿತಿಜವನ್ನು ಅನಂತಕ್ಕೆ ಕರೆದೊಯ್ಯುತ್ತಿವೆ. ಯೋಗದ ಮೂಲಕ ಸಿದ್ಧಿಗೊಳ್ಳುವ ಮನೋನಿಗ್ರಹದ ನಂತರದಲ್ಲಿ ಚಿತ್ತವು ಹೇಗೆ ಚೈತನ್ಯವಾಗುತ್ತದೆ ಹಾಗೂ ಇದು ಆ ವಿಶ್ವಚೈತನ್ಯದ – "ಋತ ಚೇತನದ" ಅಂಶವಾಗಿದೆ ಎನ್ನುವ ಅನ್ವೇಷಣೆಯಲ್ಲಿ ಇಂದಿನ ಯೋಗ ಪರಂಪರೆ ಸಾಗುತ್ತಿದೆ. ಈ ನೂತನ ಪಥದ ಬಗೆಗೆ ಶ್ರೀ ಅರವಿಂದರು "ಪೂರ್ಣ ಯೋಗ"ದ ಮೂಲಕ ಈ ಅನೂಹ್ಯ, ವಿರಾಟ್ ಸ್ವರೂಪದ ಅನುಭಾವಗಳನ್ನು ಪಡೆದುಕೊಳ್ಳುವದರ ಮೂಲಕ, ಹೇಗೆ ವಿಶ್ವ ಮಾನವನಾಗಬಹುದು ಎನ್ನುವದನ್ನು ತೋರಿಸಿದ್ದಾರೆ. ವಿಜ್ಞಾನದ ಪ್ರಗತಿಯಲ್ಲಿ ಏನೇ ಅನ್ವೇಷಿಸಲ್ಪಟ್ಟರೂ, ಅಭಿವೃದ್ಧಿಯ ಹೆಸರಿನಲ್ಲಿ ಮಿಂಚಲ್ಪಟ್ಟರೂ, ಅದು ಕ್ಷಣಿಕ ಎನ್ನುವದನ್ನು ಸ್ವತಃ ವಿಜ್ಞಾನವೇ ಒಪ್ಪಿಕೊಳ್ಳುತ್ತಿದೆ.

ಶ್ರೀ ಅರವಿಂದರು ಪೂರ್ಣಯೋಗದ ಮೂಲಕ ಮಾನವ ಕುಲದಲ್ಲಿ ಸಮನ್ವಯತೆಯನ್ನು ರೂಪಿಸುವದಕ್ಕಾಗಿ ಈ ಯೋಗ ಸಮನ್ವಯವನ್ನು ರೂಪಿಸಿದ್ದಾರೆ. ಇಂತಹ ಸಮನ್ವಯತೆಗಳು ಇತಿಹಾಸದಲ್ಲಿ ಆಗಾಗ, ಸಾಮಾಜಿಕ ಬದುಕಿನಲ್ಲಿ ಆಗುತ್ತಿದ್ದ ವಿಚಲನವನ್ನು ತಡೆಯಲು ಅನುಷ್ಠಾನಗೊಂಡಿವೆ. ಶ್ರೀ ಶಂಕರಾಚಾರ್ಯರು ಶೈವ, ಶಾಕ್ತ, ಗಾಣಾಪತ್ಯ, ಕುಮಾರ, ವಿಷ್ಣು ಮತ್ತು ಸೌರ ಪಂಥಗಳನ್ನು ಸಮನ್ವಯಗೊಳಿಸಿ "ಷಣ್ಮತ ಸ್ಥಾಪನಾಚಾರ್ಯ"ರೆಂದು ಆರಾಧಿಸಲ್ಪಡುತ್ತಿದ್ದಾರೆ. ಇವರ ಕೊಡುಗೆ ಬಹುತೇಕವಾಗಿ ಬೌದ್ಧಿಕ ಹಂತದಲ್ಲಿಯೇ ಇದೆ. ಇದರ ಪ್ರಭಾವದಲ್ಲಿಯೇ 'ಕಾಶ್ಮೀರ ಶೈವ ಪಂಥ'ವೂ ಸಹಿತ 'ಶಾಕ್ತ, ಅಘೋರ, ಭೈರವ, ಕಾಪಾಲಿಕ, ಕಾಳಾಮುಖ ಮತ್ತು ವೀರಶೈವ' ಹಂತದಲ್ಲಿ ಭಾರತೀಯ ದೈನಂದಿನ ಬದುಕಿನ ಆಯಾಮಗಳನ್ನು ಹಾಗೂ ಅವುಗಳ ಸ್ವರೂಪವನ್ನು ರೂಪಿಸಿದ್ದಾರೆ. ಇವೆರಡರ ಸಂಯೋಗದ ಅನುಷ್ಠಾನಗಳಲ್ಲಿ ರೂಪು ತಾಳಿದ ಜ್ಞಾನದ, ಆರಾಧನೆಯ, ಅನುಷ್ಠಾನದ ಪಥಗಳಲ್ಲಿ ಹಠಯೋಗ, ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ ಮತ್ತು ರಾಜಯೋಗಗಳೂ ಆಯಾಮ ನಿರ್ಮಿಸಿವೆ.

ಶ್ರೀ ಶಂಕರಾಚಾರ್ಯರಿಗೂ ಮತ್ತು ಕಾಶ್ಮೀರ ಶೈವ ಪಂಥಕ್ಕೂ ಕನಿಷ್ಠ 7–8 ಶತಮಾನಗಳ ಅಂತರವಿದೆ. ಕಾಶ್ಮೀರ ಶೈವ ಪಂಥದ ವಿಕಾಸವು 12ನೇ ಶತಮಾನದವರೆಗೂ ಮುಂದುವರೆದು 'ವೀರಶೈವ ಹಂತದಲ್ಲಿ' ಪೂರ್ಣಗೊಂಡಿದೆ. ಈ ವೀರಶೈವ ಹಂತವು ದಕ್ಷಿಣ ಭಾರತದ ಅಸ್ಮಿತೆಯೂ ಆಗಿದೆ.

ನಿಯತಿಯ ಪ್ರಕಾರವಾಗಿಯೇ ಮತ್ತೆ 800 ವರ್ಷಗಳ ನಂತರ ಇಂತಹದೇ ಒಂದು ಸಮನ್ವಯತೆಯನ್ನು ವಿಕಾಸವು ಬಯಸಿತ್ತು. ಅದನ್ನು ಈಡೇರಿಸುವ ಸಲುವಾಗಿಯೇ ಶ್ರೀ ಅರವಿಂದರ ದೃಷ್ಟಾಂತಗಳಿವೆ. ಅಲ್ಲಿ ಆರು ಹಂತಗಳಲ್ಲಿ ಇದ್ದದ್ದು, ಇಲ್ಲಿ ಕೇವಲ ನಾಲ್ಕು ಹಂತಗಳಲ್ಲಿ ಸಮನ್ವಯಗೊಳಿಸುವ ಪಥವನ್ನು ಶ್ರೀ ಅರವಿಂದರು ತೋರಿದ್ದಾರೆ. ಇದು ಯೋಗದ ಹಿನ್ನೆಲೆಯಲ್ಲಿ 'ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ ಮತ್ತು ರಾಜಯೋಗ'ದ ಹಂತಗಳಲ್ಲಿ ವಿಕಾಸವಾಗಿರುವ ಅಂಶಗಳನ್ನು ಸಮನ್ವಯಗೊಳಿಸಿಕೊಂಡು "ಪೂರ್ಣಯೋಗ"ವಾಗುವದನ್ನು ಸಂಕೇತಿಸುತ್ತಿದ್ದಾರೆ. ಇವೆಲ್ಲ ಸಂಗತಿಗಳಿಗಿಂತ ಅತ್ಯಂತ ಪ್ರಧಾನ ವಿಷಯದಲ್ಲಿ "ಮಹಾಮಾಯಾ, ಮಹಾಲಕ್ಷ್ಮೀ, ಮಹಾಕಾಳಿ ಮತ್ತು ಮಹಾಸರಸ್ವತಿ" ಎನ್ನುವ ಆಯಾಮದಲ್ಲಿ ಶ್ರೀ ಅರವಿಂದರ ಪಥವಿದೆ. ಈ ಸ್ತ್ರೀ ಪ್ರಾಧಾನ್ಯತೆಯ ವಿಶೇಷತೆ,

ಈ ಹಿಂದೆಯೇ ಅಗಸ್ತ್ಯ ಮಹರ್ಷಿಯಿಂದ 'ಸೂತ್ರಗೊಳಿಸಲ್ಪಟ್ಟಿದೆ' ಅಗಸ್ತ್ಯನ 'ಶ್ರೀ ಲಲಿತಾ ಸಹಸ್ರನಾಮ'ದ ಹಿನ್ನೆಲೆಯಲ್ಲಿ, ಶ್ರೀ ಅರವಿಂದರ 'ಸಾವಿತ್ರಿ'ಯನ್ನು ಗಮನಿಸಬೇಕಿದೆ. ಅದೇ ರೀತಿಯಲ್ಲಿ ಆಧುನಿಕ ವಿಜ್ಞಾನದ ಖಭೌತ ಶಾಸ್ತ್ರ, ಮನೋವಿಜ್ಞಾನದ ಹಿನ್ನೆಲೆಯೂ ಇಲ್ಲಿ ಅತ್ಯಾವಶ್ಯವಾಗಿದೆ.

ಇನ್ನು ಪ್ರಚಲಿತ ಬದುಕಿನ ವ್ಯವಸ್ಥೆಯಲ್ಲಿಯೂ ಹಿಂದೂ, ಕ್ರೈಸ್ತ, ಮುಸ್ಲಿಂ ಮತ್ತು ಬೌದ್ಧ ಪರಂಪರೆಗಳ ಸಮನ್ವಯದ ಬದುಕಿನ ಟಂಕಶಾಲೆಯಾಗಿ ಭಾರತ ರೂಪುಗೊಳ್ಳುತ್ತಿದೆ. ಈ ನಾಲ್ಕನ್ನೂ ಅವುಗಳ ಅಸ್ಮಿತೆಯಲ್ಲಿಯೇ ಸಮನ್ವಯ–ಗೊಳಿಸಬೇಕೇ? ಅಥವಾ 'ಪೂರ್ಣಯೋಗದ' ಹಿನ್ನೆಲೆಯಲ್ಲಿ ಮತ್ತೊಂದು ನವೀನ ವೈಶ್ವಿಕ ಆಯಾಮದ ಸ್ವರೂಪವು ಉದಿತವಾಗುತ್ತಿದೆಯೋ? ಇದಕ್ಕೆ ಪೂರಕವಾಗಿ ವೈಜ್ಞಾನಿಕ ವಲಯದಲ್ಲಿ ನಡೆದಿರುವ ವೇಗೋತ್ಕರ್ಷದ ಪ್ರಗತಿಯು, ಮಾನವ ಕುಲವನ್ನು ಸಂಪೂರ್ಣ ವೈಜ್ಞಾನಿಕ ಆಯಾಮದಲ್ಲಿಯೇ, ಅದರಲ್ಲೂ ಮನೋವೈಜ್ಞಾನಿಕ ಹಂತದ ಚೇತನಾ ವಿಕಾಸದ ಹಂತದಲ್ಲಿ ಇರುವದನ್ನು ಅವರು ಸಂಕೇತಿಸುತ್ತಿದ್ದಾರೆ.

ಇಲ್ಲಿ ಮುಖ್ಯವಾಗಿ, ಶ್ರೀ ಅರವಿಂದರ ಕೊಡುಗೆ ಇವೆಲ್ಲವನ್ನೂ ಆಧರಿಸಿಕೊಂಡೇ ಇರುವದರಿಂದ, ಅದರಲ್ಲೂ ಕಾಶ್ಮೀರ ಶೈವ ಪಂಥದ ಗ್ರಂಥಗಳಾದ 'ಭೈರವ ತಂತ್ರ, ಪ್ರತ್ಯಭಿಜ್ಞಾ ಹೃದಯ, ಹಾಗೂ ಅಭಿನವ ಗುಪ್ತನ ಎಲ್ಲ ಗ್ರಂಥಗಳ ಬಗೆಗೆ ನಾವು ಅಧ್ಯಯನ ಮಾಡಲೇಬೇಕಾಗುತ್ತದೆ. ಭಾರತದಲ್ಲಿ ಇಲ್ಲಿಯವರೆಗೂ ಅಸ್ತಿತ್ವದಲ್ಲಿರುವ ಉನ್ನತ ಶಿಕ್ಷಣ ಪದ್ಧತಿಯಲ್ಲಿ ನಡೆದ ವಿಚಲನಾ ಕ್ರಿಯೆಯು, ಈ ಅಧ್ಯಯನದ ಹಂತದಲ್ಲಿ ಒಂದು ಶೂನ್ಯವನ್ನು ಸೃಷ್ಟಿಸಿದೆ. ಇಂದು ಕಾಶ್ಮೀರ ಶೈವ ಪಂಥದ ಗ್ರಂಥಗಳ ಅಧ್ಯಯನಕ್ಕೆ ಮಾರ್ಗದರ್ಶಕರು ಸಿಗುವದು ದುರ್ಲಭವಾಗಿದೆ. ಅದೇ ರೀತಿಯಲ್ಲಿ, ಶಾಕ್ತ ಪಂಥದ ಗ್ರಂಥಗಳನ್ನೂ ಸಹಿತ ವ್ಯವಸ್ಥಿತವಾಗಿಯೇ ಅಧ್ಯಯನದಿಂದ ದೂರವೇ ಇಡಲಾಗಿದೆ.

ಈ ಎಲ್ಲ ಸವಾಲುಗಳ ಸುನಾಮಿಯಲ್ಲಿ ಶ್ರೀ ಅರವಿಂದರ ಅಭಿವ್ಯಕ್ತಿಗಳನ್ನು ಅನುಸಂಧಾನ ಮಾಡಿಕೊಳ್ಳುವ ಧ್ವನಿಗಳು ಅಲ್ಲಲ್ಲಿ ಇದ್ದರೂ ಕ್ಷೀಣವಾಗಿಯೇ ಇವೆ. ವಿಕಾಸದ ಸೂತ್ರಗಳೆಂದೇ ಕರೆಯಲ್ಪಡುವ ವೇದ ಮತ್ತು ಉಪನಿಷತ್ತುಗಳಿಗೂ ಕೂಡ ನವೀನ ಆಯಾಮದ ಸ್ವರೂಪವನ್ನು ಶ್ರೀ ಅರವಿಂದರು ರೂಪಿಸಿದ್ದಾರೆ. ಅದಕ್ಕೆ ಮುಖ್ಯವಾಗಿ, ಈ ಎಲ್ಲ ವಿಷಯಗಳು ಹೊಂದಿರುವ "ಭಾಷಾ ವ್ಯವಸ್ಥೆಯ"

ಕುರಿತು ಮೊದಲು ನಾವು ಅರಿತುಕೊಳ್ಳಲೇಬೇಕಾಗಿದೆ. ಭಾರತೀಯ ಮನೋಚೇತನಕ್ಕೆ ಮತ್ತು ಹೃದಯಕ್ಕೆ ನಾದಸ್ವರೂಪದಲ್ಲಿ ಸ್ಪಂದಗೊಳ್ಳುತ್ತಿರುವ ಈ 'ಶಬ್ದಬ್ರಹ್ಮ'ವು ಪಂಚ ಭೂತಗಳಲ್ಲಿ ಒಂದಾದ 'ಆಕಾಶ ತತ್ತ್ವ' ಎನ್ನುವ ಬಗೆಗೆ ಯಾವುದೇ ಸಂಶಯವೇ ಇಲ್ಲ. ಆದರೆ, ಪಾಶ್ಚಾತ್ಯ ಭಾಷಾ ವ್ಯವಸ್ಥೆಯ ಚಿಂತದಲ್ಲಿ, ಕೇವಲ ನಾಲ್ಕೇ ನಾಲ್ಕು ತತ್ತ್ವಗಳು ಇವೆ. ಅದರಲ್ಲೂ ಇಂಗ್ಲೀಷಿನಲ್ಲಿಯೂ ಸಹಿತ ಈ ರೀತಿಯ ಆಕಾಶ ತತ್ತ್ವವನ್ನು ರೂಪಿಸಿದ ಶ್ರೇಯಸ್ಸು ಶ್ರೀ ಅರವಿಂದರಿಗೇ ಸಲ್ಲುತ್ತದೆ.

ಇದೀಗ ಶ್ರೀ ಅರವಿಂದರ ಜೀವನದ 150ನೇ ವರ್ಷದ ಅವಧಿಯಲ್ಲಿ, ನಾವೆಲ್ಲ ಈ ದಿಕ್ಕಿನಲ್ಲಿ ಸಾಗಬೇಕೆಂದುಕೊಳ್ಳುತ್ತಿರುವಾಗ ಇರುವ ಪಥದ ಸ್ಥಿತಿ. ಇದು ಯಾರೋ ಓರ್ವ ವ್ಯಕ್ತಿಯಿಂದ ಮಾತ್ರವೇ ಸಾಧ್ಯವೆನ್ನುವದು ಕಲ್ಪನಾತೀತ. ಅಲ್ಲಲ್ಲಿ ಕ್ಷೀಣಾವಾಗಿದ್ದರೂ ಸಹಿತ ಸ್ಪಂದಗೊಳ್ಳುತ್ತಿರುವ ಧ್ವನಿಗಳು ಮೇಳೈಸಿಕೊಳ್ಳುವ ಸಲುವಾಗಿ, ಅವಕಾಶವೂ ನಿರ್ಮಾಣ ಮಾಡಿಕೊಡುತ್ತಿದೆ. ಇನ್ನುಳಿದಿರುವದು, ಆ ಪಥದಲ್ಲಿ ಸಾಗುವ ಅಭೀಪ್ಸೆ ಮಾತ್ರ. ಇವುಗಳನ್ನು ಆಧರಿಸಿಕೊಂಡ ಚರ್ಚೆ, ಅಧ್ಯಯನ, ಚಿಂತನೆ, ಜಿಜ್ಞಾಸೆ ಪ್ರಾರಂಭಗೊಳ್ಳಲಿ ಎಂದು ಆಶಿಸೋಣ. ತರ್ಕದ ಪಥದಲ್ಲಿ ಜಿಜ್ಞಾಸೆಯ ಮೂಲಕವೇ ಜ್ಞಾನವು ಗಮಿಸಲೇಬೇಕಾಗುತ್ತದೆ, ಆದರೆ ಇಲ್ಲಿ ತರ್ಕವೇ ಗಮ್ಯವಲ್ಲ ಎನ್ನುವದು ಮುಖ್ಯ ಸಂಗತಿ. ಏಕೆಂದರೆ ಗಮ್ಯವು ಇನ್ನೂ ಅನೂಹ್ಯವಾಗಿಯೇ ಇದೆ. ಹಾಗೆಂದು ಅಜ್ಞಾತವಾಗಿಯೇ ಉಳಿಯುತ್ತದೆ ಎಂತೇನು ಅಲ್ಲ. ಈ ತರ್ಕಸಮ್ಮತ ಪಥದಲ್ಲಿ ನಮ್ಮ ಯಾನ ಮುಂದುವರೆಸೋಣವೇ?

ಇದನ್ನೇ ಶ್ರೀ ಅರವಿಂದರು 'ಸಾವಿತ್ರಿ'ಯಲ್ಲಿ –

ದೇವಗಣಗಳಾ ಸಂತಾಪದಲ್ಲಿ ಈ ಭೂಮಿ ಪೂರ್ಣಗೊಳಲು
ಕಾಲದಂಕುಶದಿ ಅವರು ಮಾರ್ಗದಲಿ, ಕರ್ಮದಲಿ ಸತತವಿರಲು,
ಪರಿಶ್ರಮಿಸುತಿಹರು ಶಾಶ್ವತದ ಧ್ಯೇಯದಭಿಲಾಷೆಯಂತೆ ಸಲಲು
ಮೃಣ್ಮಯದ ರೂಹುಗಳಿಗೀಗ ದಿವ್ಯ–ಚಿನ್ಮಯದ ಜೀವ ಕೊಡಲು
(ದಳ 6 ರೇಣು 2 ಪುಟ 444) ಪಥ ನಿರ್ಮಿಸಿದ್ದಾರೆ.

ಈ ಹಿನ್ನೆಲೆಯಲ್ಲಿ 'ಯೋಗ ಪರಂಪರೆ' ಎಲ್ಲ ಆಯಾಮಗಳ ಕುರಿತು ಪಕ್ಷಿನೋಟದಲ್ಲಿ ಈ ಸಂಚಿಕೆಯನ್ನು ರೂಪಿಸಲಾಗಿದೆ. (ಪಿಪಿಕೆ)

# ಯೋಗ ಎಂದರೇನು?

**– ಅನುವಾದ: ನಾಗಜ್ಯೋತಿ ಮಾನ್ವಿ**

## ಜೀವನದ ಮತ್ತು ಯೋಗ

ಸರಿಯಾದ ದೃಷ್ಟಿಕೋನದಲ್ಲಿ, ಯೋಗ ಮತ್ತು ಜೀವನವೆರಡೂ ಪ್ರಜ್ಞಾಪೂರ್ವಕವಾಗಿಯಾಗಲೀ ಅಥವಾ ಅರೆಪ್ರಜ್ಞಾಪೂರ್ವಕ ರೀತಿಯಲ್ಲಿ ಒಂದು ಯೋಗವೇ ಆಗಿದೆ. ನಮ್ಮಲ್ಲಿ ಅಡಗಿರುವ ರಹಸ್ಯ ಸಾಮರ್ಥ್ಯಗಳನ್ನು ಸೂಕ್ತವಾದ ವಿಧಾನಗಳ ಪ್ರಯತ್ನದಿಂದ ಹೊರಹಾಕಲು, ನಮ್ಮ ಸ್ವ–ಪರಿಪೂರ್ಣದೆಡೆಗೆ ನಡೆಯುವುದು ಇಲ್ಲಿ ಮುಖ್ಯ ಸಂಗತಿಯಾಗಿದೆ. ಇಲ್ಲಿ ಈ ಪ್ರಯತ್ನದಿಂದೊದಗುವ ಅತ್ಯುನ್ನತ ಜಯದ ಸ್ಥಿತಿ – ವೈಯಕ್ತಿಕ ಪ್ರಜ್ಞೆಯನ್ನು ವಿಶ್ವಾತ್ಮಕ ಮತ್ತು ವಿಶ್ವಾತೀತ ಅಸ್ತಿತ್ವದೊಡನೆ ಐಕ್ಯಗೊಳಿಸುವುದೇ ಆಗಿದೆ. ಅದನ್ನು ನಾವು ಭಾಗಶಃ ವ್ಯಕ್ತಪಡಿಸಿರುವುದನ್ನು ವ್ಯಕ್ತಿ ಮತ್ತು ವಿಶ್ವದಲ್ಲಿ ಕಾಣಬಹುದು, ಆದರೆ ಎಲ್ಲಾ ಜೀವನ, ಹಾಗೂ ಅದರ ಗೋಚರಿಸುವಿಕೆಯ ಆಚೆ ನೋಡಿದಾಗ, ಇದೊಂದು ಪ್ರಕೃತಿಯ ಮಹತ್ತರ ಯೋಗ, ಪ್ರಜ್ಞೆಯಲ್ಲಿ ಮತ್ತು ಅವಚೇತನದಲ್ಲಿ ತನ್ನ ಪರಿಪೂರ್ಣತೆಯನ್ನು ಅರಿತುಕೊಳ್ಳಲು ಅವಳು ಪ್ರಯತ್ನಿಸುತ್ತಿದ್ದಾಳೆ. ಜೊತೆಜೊತೆಗೆ ಆಕೆಯ ಇನ್ನೂ ಸಾಕ್ಷಾತ್ಕರಿಸಿಕೊಳ್ಳದ, ನಿರಂತರ ಪ್ರಗತಿಯಾಗುತ್ತಿರುವ ಅಭೀಃಯೊಂದಿಗೆ ಮತ್ತು ತನ್ನದೇ ಆದ ದೈವೀ ನಿಜಸ್ಥಿತಿಯೊಂದಿಗೆ, ಸ್ವತಃ ತಾನೇ ಐಕ್ಯಳಾಗಲು ಪ್ರಯತ್ನಿಸುತ್ತಿದ್ದಾಳೆ. ಆಕೆಯ ಚಿಂತಕನಾಗಿರುವ ಮನುಷ್ಯನಲ್ಲಿ, ಅವಳು ಈ 'ಭೂಮಿಯ' ಮೇಲೆ ಮೊದಲ ಬಾರಿಗೆ ಸ್ವಯಂ–ಪ್ರಜ್ಞೆಯ ವಿಧಾನವನ್ನು ಮತ್ತು ಆ ಸಂಕಲ್ಪದಿಂದ ಬಂದ ಕ್ರಿಯೆಗಳ ಮೂಲಕ, ಈ ಮಹದುದ್ದೇಶವನ್ನು ವೇಗವಾಗಿ ಮತ್ತು ಬಲವಾಗಿ ಸಾಧಿಸಲು ಉದ್ದೇಶಿಸಿದ್ದಾಳೆ. ಸ್ವಾಮಿ ವಿವೇಕಾನಂದರು ಹೇಳಿದಂತೆ, "ಯೋಗವೆಂದರೆ ಒಬ್ಬರ ವಿಕಾಸವನ್ನು ದೈಹಿಕ ಅಸ್ತಿತ್ವದ ಒಂದೇ ಜೀವನಕ್ಕೆ ಅಥವಾ ಕೆಲವೇ ವರ್ಷಗಳಿಗೆ ಅಥವಾ ಕೆಲವೇ ತಿಂಗಳುಗಳಿಗೂ ಸಹ ಕುಗ್ಗಿಸುವ ಸಾಧನವಾಗಿ ಪರಿಗಣಿಸಬಹುದು."

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/6–7**

## ಯೋಗದ ಉದ್ದೇಶ

ನಮ್ಮ ಯೋಗದ ಉದ್ದೇಶವು ಸ್ವ–ಪರಿಪೂರ್ಣತೆಯೇ ಆಗಿದೆ, ಸ್ವ–ನಿರ್ಮಾಣವಲ್ಲ, ಯೋಗಿಯ ಮುಂದೆ ಎರಡು ಮಾರ್ಗಗಳಿವೆ, – ಲೌಕಿಕ

ಜಗತ್ತಿನಿಂದ (ವಿಶ್ವದಿಂದ) ಹಿಂದೆ ಸರಿದುಕೊಳ್ಳುವುದು ಮತ್ತು 'ವಿಶ್ವ'ದಲ್ಲಿ ಪರಿಪೂರ್ಣತೆ ಹೊಂದುವುದು; ಮೊದಲ ಮಾರ್ಗವು ವೈರಾಗ್ಯದಿಂದ ಬರುತ್ತದೆ, ಎರಡನೆಯದು ತಪಸ್ಸಿನ ಫಲವಾಗಿದೆ; 'ಅಸ್ತಿತ್ವದಲ್ಲಿರುವ ದೇವರನ್ನು' ನಾವು ಕಳೆದುಕೊಂಡಾಗ ಮೊದಲ ಮಾರ್ಗವು ನಮ್ಮನ್ನು ಸ್ವೀಕರಿಸುತ್ತದೆ. ನಾವು ಅಸ್ತಿತ್ವದಲ್ಲಿ ದೇವರನ್ನು ಪೂರೈಸಿದಾಗ ಎರಡನೆಯ ಮಾರ್ಗವನ್ನು ಸಾಧಿಸಬಹುದು, ಪರಿಪೂರ್ಣತೆಯ ಮಾರ್ಗ ನಮ್ಮದಾಗಿರಲಿ, ಪರಿತ್ಯಾಗದ್ದಲ್ಲ; ಯುದ್ಧದಲ್ಲಿನ ವಿಜಯ ನಮ್ಮ ಗುರಿಯಾಗಿರಲಿ, ಎಲ್ಲಾ ಸಂಘರ್ಷದಿಂದ ತಪ್ಪಿಸಿಕೊಳ್ಳುವುದಲ್ಲ.

ಬುದ್ಧ ಮತ್ತು ಶಂಕರರು ಜಗತ್ತನ್ನು ಸುಳ್ಳು ಮತ್ತು ಶೋಚನೀಯ ಎಂದು ಭಾವಿಸಿದ್ದರು; ಆದ್ದರಿಂದ ಜಗತ್ತಿನಿಂದ ತಪ್ಪಿಸಿಕೊಳ್ಳುವುದು ಅವರಿಗೆ ಏಕೈಕ ಬುದ್ಧಿವಂತಿಕೆಯಾಗಿತ್ತು. ಆದರೆ ಈ ಜಗತ್ತು ಬ್ರಹ್ಮ, ಜಗತ್ತು ದೇವರು, ಜಗತ್ತು ಸತ್ಯಮಯ, ಜಗತ್ತು ಆನಂದವೇ ಆಗಿದೆ; ಇದು ಮಾನಸಿಕ ಅಹಂಕಾರದಿಂದ ಜಗತ್ತನ್ನು ನಾವು ತಪ್ಪಾಗಿ ಗ್ರಹಿಸಿಕೊಂಡಿರುವುದಾಗಿದೆ. ಅದೊಂದು ಹುಸಿತನ ಮತ್ತು ಜಗತ್ತಿನಲ್ಲಿ ದೇವರೊಂದಿಗಿನ ತಪ್ಪು ಸಂಬಂಧವಾಗಿದೆ – ಅದೊಂದು ವಿಪತ್ತು. ಬೇರಾವುದೇ ಅಸತ್ಯತೆ ಮತ್ತು ದುಃಖಕ್ಕೆ ಬೇರಾವುದೇ ಕಾರಣಗಳಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/96–97**

## ದೈವೀ ಪರಿಪೂರ್ಣತೆಯೆಡೆಗಿನ ಆರೋಹಣ

ಯೋಗದಿಂದ ನಾವು ಅಸತ್ಯದಿಂದ ಬಲದೆಡೆಗೆ, ನೋವು ಮತ್ತು ದುಃಖದಿಂದ ಆನಂದದೆಡೆಗೆ, ಬಂಧನದಿಂದ ಮುಕ್ತತ್ವದ ಕಡೆಗೆ, ಸಾವಿನಿಂದ ಅಮರತ್ವದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ, ಅಪರಿಪೂರ್ಣತೆಯಿಂದ ಪರಿಪೂರ್ಣತೆಯೆಡೆಗೆ, ಸ್ವ–ವಿಭಜನೆಯಿಂದ ಐಕ್ಯತೆಯೆಡೆಗೆ, 'ಮಾಯೆಯಿಂದ' ಪರಮಾತ್ಮನೆಡೆಗೆ ಪರಿವರ್ತಗೊಳ್ಳಲು ಉದಯಿಸಬಹುದಾಗಿದೆ. ಕೇವಲ ವಿಶೇಷ ಮತ್ತು ಸೀಮಿತ ಅನುಕೂಲಗಳಿಗಾಗಿ ಯೋಗವನ್ನು ಬಳಸುವುದು ಯೋಗ್ಯವಾದ ಕಾರ್ಯವೆನಿಸುವದಿಲ್ಲ. ದೇವರನ್ನು ಸಂಪೂರ್ಣವಾಗಿ ಸಾಕ್ಷಾತ್ಕರ ಮಾಡಿಕೊಳ್ಳುವುದೇ ಪೂರ್ಣಯೋಗದ ಗುರಿ; 'ದೈವೀ ಪರಿಪೂರ್ಣತೆಯ' ಸಾಧಕನು ಪೂರ್ಣ ಯೋಗಿಯಾಗಿರುತ್ತಾನೆ.

ನಮ್ಮ ಗುರಿಯು – ದೇವರು ತನ್ನ ಅಸ್ತಿತ್ವದಲ್ಲಿರುವ ಪರಿಪೂರ್ಣತೆ ಮತ್ತು ಪರಿಪೂರ್ಣ ಆನಂದ 'ಅವನ ಪರಿಶುದ್ಧತೆ'ಯಂತಹ ಪರಿಶುದ್ಧತೆ, 'ಅವನ ಆನಂದ'ದಂತೆಯೇ ಆನಂದಮಯವಾಗಿರಲೇಬೇಕು, ಮತ್ತು ಪೂರ್ಣಯೋಗಕ್ಕೆ ನಮ್ಮಷ್ಟಕ್ಕೆ ನಾವೇ ಸಿದ್ಧರಾದಾಗ, ಅದೇ ರೀತಿಯ ದೈವೀ ಪರಿಪೂರ್ಣತೆಯನ್ನು ಎಲ್ಲಾ ಮಾನವ ಜನಾಂಗಕ್ಕೆ ತರುವುದಕ್ಕಾಗಿರುವ ಪಥವಾಗಿದೆ. ಪ್ರಸ್ತುತದಲ್ಲಿ ನಾವು ನಮ್ಮ ಗುರಿಯಿಂದ ದೂರವಿದ್ದರೂ ಪರವಾಗಿಲ್ಲ, ನಾವು ಪ್ರಯತ್ನಕ್ಕೆ ಮಾತ್ರ ಸಂಪೂರ್ಣ ಹೃದಯದಿಂದ ನಮ್ಮನ್ನು ಕೊಡುವವರೆಗೆ ಮತ್ತು ಅದರಲ್ಲಿ ಸತತವಾಗಿ ಜೀವಿಸುವ ಮೂಲಕ, ಈ ಹಾದಿಯಲ್ಲಿ ಎರಡು ಅಂಗುಲಗಳಾದರೂ ಇದಕ್ಕಾಗಿ ಮುನ್ನಡೆ ರೂಪಿತಗೊಳ್ಳಬಹುದು; ಅದು ಹೋರಾಟದಿಂದ ಮಾನವೀಯತೆಯನ್ನು ಮುನ್ನಡೆಸಲು ಸಹಾಯ ಮಾಡುತ್ತದೆ. ಮತ್ತು ಈಗಿರುವ ನಸುಬೆಳಕಿನಿಂದ 'ದೇವರು' ನಮಗಾಗಿ ಉದ್ದೇಶಿಸಿರುವ ಪ್ರಕಾಶಮಾನವಾದ ಆನಂದದೆಡೆಗೆ ಕರೆದೊಯ್ಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/98**

## ದ್ವಂದ್ವಭಾವವನ್ನು ಐಕ್ಯತೆಯಿಂದ ಬದಲಿಸಿ

ಸಂಕ್ಷಿಪ್ತವಾಗಿ, ನಾವು ದ್ವಂದ್ವಭಾವವನ್ನು ಐಕ್ಯತೆಯಿಂದ ಬದಲಿಸಬೇಕಾಗಿದೆ, ಅಹಂಕಾರವನ್ನು ದೈವೀ ಪ್ರಜ್ಞೆಯಿಂದ, ಅಜ್ಞಾನವನ್ನು ದೈವೀ ಸುಜ್ಞಾನದಿಂದ, ಯೋಚನೆಯನ್ನು ದೈವೀ ಜ್ಞಾನದಿಂದ, ದುರ್ಬಲತೆ, ಹೋರಾಟ ಮತ್ತು ಪ್ರಯತ್ನವನ್ನು ಸ್ವಯಂ–ತೃಪ್ತ ದೈವೀ ಬಲದಿಂದ, ಮತ್ತು ನೋವು ಮತ್ತು ಅಸತ್ಯದ ಸುಖವನ್ನು ದೈವೀ ಆನಂದದಿಂದ ಬದಲಾಯಿಸಬೇಕಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/101**

## ಪ್ರಜ್ಞೆಯ ಬದಲಾವಣೆ

ಯೋಗವು ಒಂದು ಸಾಧನವಾಗಿದೆ. ಇದರಿಂದ ಆಂತರಿಕ ಶಿಸ್ತಿನ ಮೂಲಕ ವಸ್ತುಗಳ ಹಿಂದಿರುವ 'ಸತ್ಯ'ದೊಂದಿಗೆ ಐಕ್ಯವಾಗಬಹುದು. ಇದು ನಮ್ಮನ್ನು ಬಾಹ್ಯ ಮತ್ತು ಮೇಲ್ನೋಟದ ಪ್ರಜ್ಞೆಯಿಂದ, ಆಂತರಿಕ ಮತ್ತು ನಿಜವಾದ ಪ್ರಜ್ಞೆಯೆಡೆಗೆ ನಡೆಸುತ್ತದೆ. ಯೋಗ ಪ್ರಜ್ಞೆಯ ಬಹಿರಂಗದ ಮೇಲ್ನೋಟವು ಜಗತ್ತಿನ ಜ್ಞಾನವನ್ನು ತಿರಸ್ಕರಿಸುವುದಿಲ್ಲ. ಆದರೆ ಇದು, ಇದನ್ನು ಅಂತರಂಗದ

ದೃಷ್ಟಿಯಿಂದ ನೋಡುತ್ತದೆ, ಏಕೆಂದರೆ ಮೇಲ್ನೋಟವು ಅನುಭವವಲ್ಲ, ತನ್ನೆಲ್ಲಾ ಮೌಲ್ಯಗಳನ್ನು ಅಂತರಂಗದ ಆಳವಾದ ಶ್ರೇಷ್ಠವಾದ ನಿಜವಾದ ಪ್ರಜ್ಞೆಯ ಬೆಳಕಿನಲ್ಲಿ ಬದಲಾಯಿಸುತ್ತದೆ ಮತ್ತು ಸರಿಯಾಗಿ ಹೊಂದಿಸುತ್ತದೆ, ಮತ್ತು ಜೀವಿಗಳ ಅಜ್ಞಾನವನ್ನು ದೈವೀ 'ಸಂಕಲ್ಪ' ಮತ್ತು ಜ್ಞಾನದ ಆಳ್ವಿಕೆಗೆ ಬದಲಾಯಿಸುವ ಮೂಲಕ ಇದನ್ನು ನಿಜದ 'ನಿಯಮ'ಕ್ಕೆ ಅನ್ವಯಿಸುತ್ತದೆ.

ಯೋಗ ಪ್ರಕ್ರಿಯೆಯ ಇಡೀ ಅರ್ಥವು ಪ್ರಜ್ಞೆಯ ಬದಲಾವಣೆಯೇ ಆಗಿದೆ.

ಯೋಗವೆಂದರೆ ವಿಜ್ಞಾನ, ಪ್ರಕ್ರಿಯೆ, ಪ್ರಯತ್ನ ಮತ್ತು ಕ್ರಿಯೆಯಾಗಿದೆ. ಇದರಿಂದ ಮನುಷ್ಯನು ತನ್ನ ಸೀಮಿತ ಸಾಮಾನ್ಯ ಮಾನಸಿಕ ಪ್ರಜ್ಞೆಯಿಂದ ಶ್ರೇಷ್ಠವಾದ ಆಧ್ಯಾತ್ಮಿಕ ಪ್ರಜ್ಞೆಯೆಡೆಗೆ ಸಾಗಲು ಪ್ರಯತ್ನಿಸುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/327**

## ಅಂತರಂಗದ ವಿಶಾಲವಾದ ಪ್ರಜ್ಞೆಯ ಕೀಲಿ ಕೈ

ಯಾವುದೇ ಚೈತ್ಯ ಪುರುಷನ ಶಿಸ್ತಿನ ಮೂಲಕ ನಾವು ಭಾಗಶಃ ಅಥವಾ ಪೂರ್ಣವಾಗಿ ಪ್ರಜ್ಞೆಯ ಆಧ್ಯಾತ್ಮಿಕ ಸ್ಥಿತಿಯೆಡೆಗೆ ಸಾಗಬಹುದಾಗಿದೆ, ಯಾವುದೇ ಸ್ವಾಭಾವಿಕ ಅಥವಾ ವ್ಯವಸ್ಥಿತ ಮಾರ್ಗದಿಂದ ಆಂತರಿಕ 'ನಿಜ'ದೆಡೆಗೆ ಅಥವಾ ಸರ್ವೋಚ್ಚ 'ನೈಜ'ತೆಯ ಐಕ್ಯತೆಯ ಯಾವುದೇ ಸ್ಥಿತಿಗೆ ಅಥವಾ ದೈವತ್ವಕ್ಕೆ ಸಾಮೀಪ್ಯವಾಗಬಹುದು. ವಿಶಾಲ ಅಥವಾ ಆಳವಾದ ಪ್ರಜ್ಞೆಯೊಳಗೆ ಯಾವುದೇ ಸಾಮಾನ್ಯ ಪ್ರಜ್ಞೆಗಿಂತಲೂ ಉನ್ನತವಾದ ಪ್ರಜ್ಞೆಯಲ್ಲಿ ಪ್ರವೇಶ ಪಡೆಯಬಹುದು, ಇವೆಲ್ಲವುಗಳು ಯೋಗದ ವ್ಯಾಪ್ತಿಯಲ್ಲಿ ಸಹಜವಾಗಿ ಬರುತ್ತವೆ. ಯೋಗವು ನಮ್ಮನ್ನು ಮೇಲ್ನೋಟದಿಂದ ಪ್ರಜ್ಞೆಯ ಆಳಕ್ಕೆ ಕರೆದೊಯ್ಯುತ್ತದೆ ಅಥವಾ ಅದು ನಮ್ಮನ್ನು ತನ್ನ ನಿಜವಾದ ಕೇಂದ್ರಕ್ಕೆ ಸೇರಿಸುತ್ತದೆ; ನಮ್ಮ ಪ್ರಜ್ಞಾಯುತ ಅಸ್ತಿತ್ವದಲ್ಲಿ ಅಡಗಿರುವ ಅತ್ಯುನ್ನತಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಅದು 'ಆತ್ಮ'ನ ರಹಸ್ಯಗಳನ್ನು ಮತ್ತು ದೈವತ್ವದ ರಹಸ್ಯವನ್ನು ನಮಗೆ ತೋರಿಸುತ್ತದೆ. ಅದು ನಮಗೆ ಜ್ಞಾನವನ್ನು ಮತ್ತು ದರ್ಶನವನ್ನು, ಅಂತರಂಗದಲ್ಲಿ ನೆಲೆಸಿರುವವನ ಸಾನಿಧ್ಯ ಮತ್ತು 'ವಿಶ್ವ' ಮತ್ತು 'ವಿಶ್ವಾತೀತ ನೈಜತೆ'ಯನ್ನು ನೀಡುತ್ತದೆ. ಅದೇ ಅದರ ಸರ್ವೋಚ್ಚ ಉದ್ದೇಶವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/329**

**ಭಾಗಶಃ ಮತ್ತು ಸಂಪೂರ್ಣ ಯೋಗ**

ಯೋಗವೆಂದರೆ ಐಕ್ಯತೆ. ಯೋಗದ ಇಡೀ ಉದ್ದೇಶವೇ ಮಾನವನ ಆತ್ಮವು ಪರಾತ್ಪರ 'ಅಸ್ತಿತ್ವ'ದೊಂದಿಗೆ ಐಕ್ಯವಾಗುವುದಾಗಿದೆ. ಮಾನವೀಯತೆಯ ಪ್ರಸ್ತುತ ಪ್ರಕೃತಿಯು ಶಾಶ್ವತದೊಂದಿಗೆ, ಪರಾತ್ಪರ ಅಥವಾ ದೈವೀ ಪ್ರಕೃತಿಯೊಂದಿಗೆ ಐಕ್ಯವಾಗುವುದಾಗಿದೆ.

ಐಕ್ಯತೆಯು ಎಷ್ಟು ಉನ್ನತವಾಗಿರುತ್ತದೆಯೋ ಯೋಗವು ಅಷ್ಟು ಉನ್ನತವಾಗಿರುತ್ತದೆ; ಐಕ್ಯತೆಯು ಎಷ್ಟು ಸಂಪೂರ್ಣವಾಗಿರುತ್ತದೆಯೋ ಯೋಗವು ಅಷ್ಟು ಸಂಪೂರ್ಣವಾಗಿರುತ್ತದೆ.

ಸಂಪೂರ್ಣ ಯೋಗವು ಯಾವುದೆಂದರೆ, ಅದು ದೇವರನ್ನು ಜಗತ್ತಿನಲ್ಲಿ ಕಾಣುತ್ತದೆ. ಹಾಗೂ ಎಲ್ಲಾ ಜೀವಿಗಳೊಡನೆ ಏಕತೆಯನ್ನು ಮತ್ತು ಮಾನವರೊಡನೆ ಒಗ್ಗಟ್ಟು, ಜೀವನ ಮತ್ತು ಅಸ್ತಿತ್ವವನ್ನು ಪರಮಾತ್ಮನ ಪ್ರಜ್ಞೆಯೊಂದಿಗೆ ಪೂರಕಗೊಳಿಸುವುದು ಹಾಗೂ ಮನುಷ್ಯನನ್ನು ಅಷ್ಟೇ ಅಲ್ಲದೇ ಇಡೀ ಮಾನವ ಜನಾಂಗವನ್ನೇ ಪರಿಪೂರ್ಣದೆಡೆಗೆ ಕರೆದೊಯ್ಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/334–35 – ಶ್ರೀ ಅರವಿಂದರು**

**ಆದರ್ಶ**

ಯೋಗಿಯೆಂದರೆ, ತನ್ನೆಲ್ಲಾ ಶಕ್ತಿಯನ್ನು ಹುದುಗಿಸಿಟ್ಟುಕೊಂಡು ಜಗತ್ತಿನಿಂದ ಹಿಂದೆ ಸರಿದು ಕೂಡುವವನಲ್ಲ, ಆದರೆ ಸಕಲ ಜೀವಾತ್ಮಗಳಿಗೆ ಲೇಸನ್ನು ಮಾಡುವುದರಲ್ಲಿ ಸದಾ ತೊಡಗಿಕೊಳ್ಳುತ್ತಾನೆ. ಇದನ್ನು ಅಂದರೆ ದೈವೀ ಶಕ್ತಿಯನ್ನು ಜಗದ ಮೇಲೆ ಅವನು ಧಾರೆ ಎರೆಯಬಹುದು ಅಥವಾ ತಾನೇ ಮಾನವ ಜನಾಂಗದ ಮುಂದೆ ನಿಂತು, ಅದರ ನಡೆಯ ಮತ್ತು ಹೋರಾಟದ ನಾಯಕನಾಗಿ – ಆದರೆ ತನ್ನ ವ್ಯಕ್ತಿತ್ವವನ್ನು ಮೀರಿ, – ಯಾವ ಕರ್ಮಗಳಿಗೂ ಬಂಧಿತನಾಗದೇ ಇರಬಹುದಾಗಿದೆ.

**– ಶ್ರೀ ಅರವಿಂದರು**

# ಹಠಯೋಗ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಹಠಯೋಗದ ಹಿಂದಿರುವ ಮೂಲತತ್ವ

ಹಠಯೋಗವು ಜೀವ ಮತ್ತು ದೇಹವನ್ನು ಗೆಲ್ಲುವ ಗುರಿಯನ್ನು ಹೊಂದಿದೆ. ನಾವು ನೋಡಿದಂತೆ, ಅನ್ನಮಯ ಕೋಶ ಮತ್ತು ಪ್ರಾಣ ಸಾಧನಗಳ ಸಂಯೋಜನೆಯಿಂದ ಸ್ಥೂಲ ದೇಹವು ನಿಯೋಜಿಸಲ್ಪಡುತ್ತದೆ. ಸ್ಥೂಲ ದೇಹದ ಸಮತೋಲನವು ಮಾನವ ಜೀವಿಯಲ್ಲಿಯ ಎಲ್ಲ ಪ್ರಕೃತಿಯ ಚಟುವಟಿಕೆಗಳ ಅಡಿಪಾಯವಾಗಿದೆ. ಪ್ರಕೃತಿಯಿಂದ ಸ್ಥಾಪಿತವಾದ ಸಮತೋಲನವು ಸಾಮಾನ್ಯ ಸ್ವಾರ್ಥ ಜೀವನಕ್ಕೆ ಪರ್ಯಾಪ್ತವಾಗಿದೆ. ಹಠಯೋಗಿಯ ಉದ್ದೇಶಕ್ಕೆ ಇದು ಪರ್ಯಾಪ್ತವಲ್ಲ. ಈ ಸಮತೋಲನವನ್ನು ಮಾನವ ಜೀವನದ ಅವಧಿಯಲ್ಲಿ ಭೌತಿಕ ಯಂತ್ರವನ್ನು ಓಡಿಸಲು ಅವಶ್ಯವಾದ ಪ್ರಾಣಿಕ ಅಥವಾ ಚಲನಶೀಲ ಬಲದ ಮೇಲೆ ಮತ್ತು ಅದರಿಂದ ಬೇಡಿಕೆಯಿಟ್ಟ ವಿವಿಧ ಕೆಲಸಗಳನ್ನು ಈ ಯೋಜನೆಯನ್ನು ವಿರೋಧಿಸುತ್ತಿರುವ ಮತ್ತು ವಿಶ್ವ–ಪರಿಸರದಿಂದ ಷರತ್ತು ವಿಧಿಸಲ್ಪಟ್ಟ ವ್ಯಕ್ತಿಗತ ಜೀವನದಿಂದ ಹೆಚ್ಚು ಕಡಿಮೆ ಸಮರ್ಥವಾಗಿ ನಿಭಾಯಿಸಲು ಬೇಕಾದ ಬಲದ ಮೇಲೆ ಲೆಕ್ಕ ಮಾಡಲಾಗುತ್ತದೆ. ಆದ್ದರಿಂದ, ಹಠಯೋಗವು ಪ್ರಕೃತಿಯನ್ನು ಸರಿಪಡಿಸಿ ಇನ್ನೊಂದು ಸಮತೋಲನವನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. ಇದರಿಂದ, ತನ್ನ ಮೊತ್ತದಲ್ಲಿ ಅಥವಾ ತೀವ್ರತೆಯಲ್ಲಿ ಅನಂತವಾದ ಪ್ರಾಣದ ಚಲನಶೀಲ ಶಕ್ತಿಯ ಹೆಚ್ಚುತ್ತಿರುವ ಒಳನುಗ್ಗುವಿಕೆಯನ್ನು ತಡೆದುಕೊಳ್ಳಲು ಈ ಭೌತಿಕ ಯೋಜನೆಯು ಸಮರ್ಥವಾಗುತ್ತದೆ. ಪ್ರಕೃತಿಯಲ್ಲಿ, ಸಮತೋಲನವು ಸೀಮಿತ ಪ್ರಮಾಣದ ಪ್ರತ್ಯೇಕಿಕರಣದ ಮತ್ತು ಪ್ರಾಣದ ಮೇಲೆ ಆಧರಿಸಿದೆ. ಅದಕ್ಕಿಂತ ಹೆಚ್ಚಾಗಿ, ವೈಯಕ್ತಿಕ ಮತ್ತು ಆನುವಂಶಿಕ ಅಭ್ಯಾಸದಿಂದ ವ್ಯಕ್ತಿಯು ಸಹಿಸಿಕೊಳ್ಳಲು, ಉಪಯೋಗಿಸಲು, ಅಥವಾ ನಿಯಂತ್ರಿಸಲು ಅಸಮರ್ಥನಾಗಿದ್ದಾನೆ.

ಹಠಯೋಗದಲ್ಲಿ, ವೈಯಕ್ತಿಕ ಚೈತನ್ಯದ ವಿಶ್ವೀಕರಣಕ್ಕೆ ದೇಹದೊಳಗೆ ಪ್ರವೇಶ ಕೊಡುವುದರಿಂದ, ಒಳಗೊಂಡಿರುವುದರಿಂದ, ವಿಶ್ವಶಕ್ತಿಯು ಅತಿ ಕಡಿಮೆ ನಿಗದಿತವಾಗಿ ಮತ್ತು ಸೀಮಿತವಾಗಿ ಉಪಯೋಗಿಸುವುದರಿಂದ ಮತ್ತು ನಿಯಂತ್ರಿಸುವುದರಿಂದ ಸಮತೋಲನವು ಬಾಗಿಲನ್ನು ತೆರೆಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/33–34**

## ಹಠಯೋಗದ ಉದ್ದೇಶ

ಶುದ್ಧ ಹಠಯೋಗವು ದೇಹದ ಮುಖಾಂತರ ಆತ್ಮ ಸಮಾಧಾನ ಹೊಂದುವ ಸಾಧನ. ಅದರ ಪ್ರಕ್ರಿಯೆಗಳು ಕಠಿಣ, ದೈತ್ಯ, ಸಂಕೀರ್ಣ ಜಟಿಲವಾಗಿವೆ. ಅವು ಆಸನದಲ್ಲಿ, ಪ್ರಾಣಾಯಾಮದಲ್ಲಿ ಮತ್ತು ದೇಹದ ಶುದ್ಧೀಕರಣದಲ್ಲಿ ಕೇಂದ್ರಿತವಾಗಿವೆ. ಆಧುನಿಕ ಅಥವಾ ಮಿಶ್ರಿತವಾದ ಆಸನಗಳ ಸಂಖ್ಯೆಯು ಸೀಮಿತ, ಆದರೂ ಸಹ ಅವುಗಳು ಅನೇಕ ಮತ್ತು ಯಾತನಾಮಯ; ಪುರಾತನ ಅಥವಾ ಶುದ್ಧ ಹಠಯೋಗದಲ್ಲಿ ಅವುಗಳು ಅಸಂಖ್ಯವಾಗಿದ್ದವು ಮತ್ತು ಹಳೆಯ ಹಠಯೋಗಿಗಳು ಅವುಗಳೆಲ್ಲವನ್ನೂ ಅಭ್ಯಸಿಸುತ್ತಿದ್ದರು. ಆಸನವೆಂದರೆ ದೇಹದ ಒಂದು ನಿರ್ದಿಷ್ಟ, ಪರಿಪೂರ್ಣ ಭಂಗಿ. ಮನುಷ್ಯನು ಎಷ್ಟೇ ಆಯಾಸಗೊಂಡರೂ ಅಥವಾ ಮೇಲ್ನೋಟಕ್ಕೆ ಅಸಾಧ್ಯವೆನಿಸಿದ್ದರೂ ಒಂದೇ ಭಂಗಿಯಲ್ಲಿ ನಿಲ್ಲಬಹುದಾದರೆ, ಅನಿರ್ದಿಷ್ಟ ಅವಧಿಯವರೆಗೆ ದೇಹವನ್ನು ನೆನಪಿಟ್ಟುಕೊಳ್ಳಲು ಆಯಾಸದಿಂದ ಒತ್ತಡ ಹೇರದಿದ್ದರೂ ಆ ಭಂಗಿ ಪರಿಪೂರ್ಣವಾಗಿರುತ್ತದೆ. ಅದನ್ನೇ ತಾಂತ್ರಿಕ ಭಾಷೆಯಲ್ಲಿ "ನಿಗ್ರಹಿಸಿದ/ ಜಯಿಸಿದ" ಎಂದು ಹೇಳಬಹುದು. ಆಸನದ ಮೊದಲ ಉದ್ದೇಶ ದೇಹವನ್ನು ಜಯಿಸುವುದು, – ದೇಹವು ದಿವ್ಯವಾಗುವುದಕ್ಕಿಂತ ಮೊದಲು ಅದನ್ನು ಜಯಿಸಲೇಬೇಕು, – ಅದರ ಮೇಲೆ ಯಾವುದೇ ಕಟ್ಟಳೆ ಹೇರಲು ಶಕ್ತವಾಗಬೇಕು ಮತ್ತು ಅದರಿಂದ ಕಟ್ಟಳೆಗೆ ಎಂದೂ ಒಳಪಡಬಾರದು. ಎರಡನೆಯ ಉದ್ದೇಶ ನಾಲ್ಕು ಭೌತಿಕ ಸಿದ್ಧಿಗಳನ್ನು (ಲಘಿಮಾ, ಅಣಿಮಾ, ಗರಿಮಾ, ಮಹಿಮಾ) ಅಭಿವೃದ್ಧಿಪಡಿಸಿಕೊಂಡು ಭೌತಿಕ ಸ್ವಭಾವವನ್ನು ಜಯಿಸುವುದು. ಪರಿಪೂರ್ಣ ಲಘಿಮಾದಿಂದ ಮನುಷ್ಯನು ಗಾಳಿಯಲ್ಲಿ ತೇಲಬಹುದು ಮತ್ತು ಗಾಳಿಯು ತನ್ನ ಸ್ವಾಭಾವಿಕ ತತ್ವವೆಂಬಂತೆ ಗಾಳಿಯಲ್ಲಿ ನಡೆದಾಡಬಹುದು; ಪರಿಪೂರ್ಣ ಅಣಿಮಾದಿಂದ ಅವನು ಸೂಕ್ಷ್ಮ ಶರೀರದ ಸ್ವಭಾವವನ್ನು ಅಗ್ನಿಯು ದಹಿಸದ, ಆಯುಧಗಳು ಘಾಸಿಮಾಡದ, ವಾಯುವಿನ ಬೇಡಿಕೆಯನ್ನು ಹತ್ತಿಕ್ಕಲಾಗದ, ನೀರು ಮುಳುಗಿಸದ ಸ್ಥೂಲ ಶರೀರದಲ್ಲಿ ತರಬಹುದು; ಪರಿಪೂರ್ಣ ಗರಿಮಾದಿಂದ ಹಿಮಪಾತದ ಆಘಾತವು ಸೋಲಿಸದ ಕಠಿಣವಾದ ಸ್ಥಿರತೆಯನ್ನು ಅವನು ಬೆಳೆಸಿಕೊಳ್ಳಬಹುದು; ಪರಿಪೂರ್ಣವಾದ ಮಹಿಮಾದಿಂದ ದೃಢಕಾಯವನ್ನು ಬೆಳೆಸದೆ ಹರ್ಕ್ಯುಲಿಸ್‌ನ ಸಾಹಸ ಕಾರ್ಯಗಳನ್ನು ಮೀರಿಸಬಹುದು. ಈ ಸಾಮರ್ಥ್ಯಗಳು ತಮ್ಮ ಪೂರ್ಣತೆಯಲ್ಲಿ ಮನುಷ್ಯರಲ್ಲಿ ಕಾಣಿಸಿಕೊಳ್ಳುವುದಿಲ್ಲ, ಆದರೆ ಅವುಗಳು ಎಲ್ಲ ನಿಪುಣ ಹಠಯೋಗಿಗಳಿಗೆ

ಕೊಂಚ ಪ್ರಮಾಣದಲ್ಲಿ ಸೇರಿವೆ. ಯೋಗದಲ್ಲಿ ಆಳವಾಗಿ ಮುಳುಗಿದವರು ಅಥವಾ ಸಿದ್ಧಿಗಳ ಸ್ವಂತ ಅನುಭವ ಹೊಂದಿದವರು ಅವುಗಳ ಇರುವಿಕೆಯನ್ನು ಎಂದಿಗೂ ಸಂಶಯಿಸುವುದಿಲ್ಲ. ಹಠಯೋಗದ ಮೂರನೆಯ ಉದ್ದೇಶವು, ದೇಹದಲ್ಲಿ ತಪಃ ಅಥವಾ ವೀರ್ಯ ಅಥವಾ ಯೋಗದ ಅಗ್ನಿ ಎಂದು ಕರೆಯುವ ಯೋಗಶಕ್ತಿಯನ್ನು ವಿಕಸಿಸಿವುದು. ಹಠಯೋಗದ ನಾಲ್ಕನೆಯ ಉದ್ದೇಶವು ಶಕ್ತಿಯುತನಾಗುವುದು (ಊರ್ಧ್ವರೇತಃ) ಅಂದರೆ ಎಲ್ಲ ಓಜಸ್ವಿ ಶಕ್ತಿಯನ್ನು ದೇಹದಲ್ಲಿ, ಮೆದುಳಿನಲ್ಲಿ ಸೆಳೆದುಕೊಳ್ಳುವುದು ಮತ್ತು ಅದನ್ನು ಶುದ್ಧೀಕರಿಸಿ, ವಿದ್ಯುತ್ ಶಕ್ತಿಯಾಗಿ ಪರಿವರ್ತಿಸಿ ದೇಹಕ್ಕೆ ಬೇಕಾದಷ್ಟನ್ನು ಹಿಂತಿರುಗಿಸುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 1/504–05**

## ರಾಜಯೋಗ

**– ಅನುವಾದ: ಶ್ರೀ ಎಂ.ಎಸ್. ನಾಗರಹಳ್ಳಿ**

ದೇಹ–ಪ್ರಾಣಗಳು ಹಠಯೋಗಕ್ಕೆ ಅವಶ್ಯಕವಾಗಿರುವಂತೆಯೇ 'ಮನಸ್ಸು' ರಾಜಯೋಗಕ್ಕೆ ಇದೆ. ಆಸನ–ಪ್ರಾಣಾಯಾಮಗಳು ರಾಜಯೋಗದಲ್ಲಿ ಗೌಣ ಸ್ಥಾನವನ್ನು ಹೊಂದಿವೆ. ದೇಹಧಾರಿಯಾದ ಜೀವನು ಮಾನಸಿಕ ಜೀವಿಯಾಗಿದ್ದರೂ ಆತನ ಮನಸ್ಸು ಭೌತ ಹಾಗೂ ಪ್ರಾಣಗಳಿಗೆ ಆಧೀನವಾಗಿರುವದು. ಆಧುನಿಕ ವಿಜ್ಞಾನವು ಆತ್ಮದ ಅಸ್ತಿತ್ವವನ್ನೇ ಅಲ್ಲಗಳೆಯುತ್ತಿದೆ. ಮನಸ್ಸು, ದೇಹ, ಪ್ರಾಣಗಳನ್ನು ನಿಯಂತ್ರಿಸಬಲ್ಲುದೆಂಬ ಮಾತು ಕೇವಲ ಹುಚ್ಚುತನದ್ದು ಎಂದು ಹೇಳಲಾಗಿದೆ. ಆದರೆ ಯೋಗವು ಈ ತಪ್ಪನ್ನು ಮಾಡುವದಿಲ್ಲ. ಭೌತ ಜಡ ದೇಹದ ಹಿಂದೆ ಸೂಕ್ಷ್ಮ ಮಾನಸಿಕ ದೇಹವಿರುವದು. ಈ ಸೂಕ್ಷ್ಮ ದೇಹವು ಮರಣದ ನಂತರವೂ ಮುಂದುವರಿಯುತ್ತದೆ. ಇದರಲ್ಲಿ ಸೂಕ್ಷ್ಮ ಪ್ರಾಣದ ಸಂಚಾರವಿರುತ್ತದೆ. ಈ ಸಂಚಾರವು ಸೂಕ್ಷ್ಮ ದೇಹದ ಷಟ್ಚಕ್ರಗಳಲ್ಲಿ ನಡೆಯುತ್ತದೆ. ಈ ಚಕ್ರಗಳು ಮೂಲಾಧಾರದಿಂದ ಮೊದಲುಗೊಂಡು ಬ್ರಹ್ಮರಂಧ್ರದವರೆಗೆ ಏರಿಕೆಯ ಕ್ರಮದಲ್ಲಿರುತ್ತವೆ. ಭೌತ ದೇಹದಲ್ಲಿ ಈ ಚಕ್ರಗಳು ನಿಷ್ಕ್ರಿಯವಾಗಿರುತ್ತವೆ. ಇದರಿಂದಾಗಿ ಜೀವನು ದೇಹದ ಗುಲಾಂನಂತೆ ಕಂಡುಬರುತ್ತಾನೆ. ಆದರೆ ಕುಂಡಲಿನಿ ಶಕ್ತಿಯು ಯಾವಾಗಲೂ ಸುಪ್ತಾವಸ್ಥೆಯಲ್ಲಿ ಎಲ್ಲ ದೇಹಗಳಲ್ಲಿಯೂ ಇದ್ದೇ ಇರುತ್ತದೆ. ಪ್ರಾಣಾಯಾಮದಿಂದ ಈ ಶಕ್ತಿಯು ಜಾಗೃತಗೊಳ್ಳುವದು.

ನಮ್ಮ ಸತ್ವದ ನಿಜ ಶಕ್ತಿಯು ನಮ್ಮ ಪ್ರಾಣಿಕ ವ್ಯವಸ್ಥೆಯ ಆಳದಲ್ಲಿ ಸುಪ್ತವಾಗಿರುತ್ತದೆ. ಈ ಶಕ್ತಿಯು ಪ್ರಾಣಾಯಾಮದ ಮೂಲಕ, ದೇಹದಲ್ಲಿಯ ಎಲ್ಲ ಚಕ್ರಗಳೂ ಜಾಗೃತವಾಗಿ, ಅಂತರಾತ್ಮನ ಪ್ರಕಟಣೆಗೆ ಪ್ರಭಾವವು ಕಾರ್ಯ ಪ್ರವೃತ್ತವಾಗುತ್ತದೆ. ಈ ಯೋಗಿಗೆ ಉಚ್ಚ ಆಧ್ಯಾತ್ಮಿಕ ಸ್ತರಗಳ ಅರಿವು ಉಂಟಾಗುವದು. ಈಗ ಆತ್ಮನ ಅಗಾಧ ಸಾಮರ್ಥ್ಯಗಳು ಪ್ರಕಟಗೊಳ್ಳುವವು, ಜೊತೆಗೆ ಜೀವಾತ್ಮ ಪರಮಾತ್ಮರ ಸಾಕ್ಷಾತ್ಕಾರವಾಗುತ್ತದೆ. ಇಲ್ಲಿ ಮಂತ್ರೋಚ್ಚಾರಣೆಯು ಸಹಾಯಕವಾಗಿರುತ್ತದೆ.

ರಾಜಯೋಗವು ಮುಖ್ಯವಾಗಿ ಮಾನಸಿಕ ಸಾಧನೆಯಾಗಿದೆ. ಆದುದರಿಂದ ಇಲ್ಲಿ ಆಸನ ಪ್ರಾಣಾಯಾಮಗಳು ತಾತ್ಕಾಲಿಕ ಗೌಣ ಪ್ರಾಧಾನ್ಯವನ್ನು ಹೊಂದಿವೆ. ರಾಜಯೋಗವು ಪರಿಶುದ್ಧಿಗೆ ಪ್ರಾಧಾನ್ಯತೆಯನ್ನು ಕೊಡುತ್ತದೆ. ಇದಕ್ಕಾಗಿ ಅದು ಯಮ–ನಿಯಮಗಳನ್ನು ಆಶ್ರಿಯಿಸಿರುವದು. ರಾಜಯೊಗವು ಏಕಾಗ್ರತೆಯ ಅನಿವಾರ್ಯತೆಯನ್ನು ಗಮನಿಸುತ್ತದೆ. ಪರಿಪೂರ್ಣ ಪರಿಶುದ್ಧಿಯು ಪರಮ ಶಾಂತಿಯನ್ನೂ, ಒಮ್ಮುಖದ ಏಕಾಗ್ರತೆಯನ್ನು ರೂಪಿಸುತ್ತದೆ. ಯೋಗಿಯು ಬಾಹ್ಯ ಸ್ಪರ್ಶಗಳಲ್ಲಿರುವ ಆಸಕ್ತಿಯನ್ನು ತ್ಯಜಿಸಬೇಕು. ಆತನು ಗಮ್ಯವಸ್ತುವಿನಲ್ಲಿ ಏಕಾಗ್ರತೆಯನ್ನು ಸಾಧಿಸಿಕೊಳ್ಳಬೇಕು. ಅವನ ಪ್ರಜ್ಞೆಯು ಅಂತರ್ಮುಖಿಯಾಗಿರಬೇಕು. ಅವನು ಮಂತ್ರದ ಸಹಾಯವನ್ನು ತೆಗೆದುಕೊಳ್ಳಬೇಕಾಗುವದು. ಆತನ ಮನಸ್ಸು ಸದಾ ಮೌನವಾಗಿರಬೇಕು. ಹೀಗಾಗಿ ರಾಜಯೋಗವು ಚಿತ್ತವೃತ್ತಿ ನಿರೋಧಕ್ಕೆ ಪ್ರಾಧಾನ್ಯತೆಯನ್ನು ಕೊಡುವದು. ಸಮಾಧಿ ಸ್ಥಿತಿಯು ಈ ರಾಜಯೋಗದ ಮುಖ್ಯ ಸ್ಥಾಯಿಯಾಗಿದೆ.

ಆದರೆ ರಾಜಯೋಗ, ಹಠಯೋಗಗಳು ಪೂರ್ಣಯೋಗದ ಸಾಧನೆಯಲ್ಲಿ, ತಾತ್ಕಾಲಿಕವಾಗಿ, ಆನುಷಂಗಿಕವಾಗಿ, ಕೆಲವೊಮ್ಮೆ ಗೌಣ ದೃಷ್ಟಿಯಿಂದ ಬಳಸಲ್ಪಡುವದು. ಆದರೆ ಇವೆಲ್ಲವುಗಳ ಮೂಲ ಉದ್ದೇಶಗಳನ್ನು 'ಪೂರ್ಣಯೋಗವು' ಒಳಗೊಳ್ಳ–ಬೇಕಾಗಿದೆ. ಈ ಉದ್ದೇಶಗಳನ್ನು ಬೇರೆ ವಿಧಾನದಿಂದಲೂ ಈಡೇರಿಸಿಕೊಳ್ಳಬಹುದು. ಪೂರ್ಣಯೋಗದ ವಿಧಾನಗಳು ಮುಖ್ಯವಾಗಿ ಆಧ್ಯಾತ್ಮಿಕ ವಿಧಾನಗಳಾಗಿರಬೇಕು. ಭೌತಿಕ ವಿಧಾನಗಳು ನಿಮ್ಮ ಸ್ತರಗಳಿಗೆ ಸಂಬಂಧಿಸಿರುತ್ತವೆ.

**ಯೋಗ ಸಮನ್ವಯ ಪುಟ; 545–46** **– ಶ್ರೀ ಅರವಿಂದರು**

---

ಹಠಯೋಗದಿಂದ ರಾಜಯೋಗದವರೆಗೆ ವಿವರಗಳಿಗಾಗಿ ಸೆಪ್ಟೆಂಬರ್ 2021 ರ ಸಂಚಿಕೆಯನ್ನು ಗಮನಿಸಿ. [ಸಂ]

# ಜ್ಞಾನಯೋಗ; ಜ್ಞಾನ ಪಥ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಜ್ಞಾನ ಮಾರ್ಗದ ಮೂಲಕ ಸ್ವಯಂ ಸಾಕ್ಷಾತ್ಕಾರ

ಜ್ಞಾನ ಮಾರ್ಗವು ವಿಶಿಷ್ಟ ಮತ್ತು ಸರ್ವೋಚ್ಚ ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವ ಉದ್ದೇಶ ಹೊಂದಿದೆ. ಅದು ಬೌದ್ಧಿಕ ಪ್ರತಿಫಲನದ ವಿಧಾನದೊಂದಿಗೆ ಸರಿಯಾದ ತಾರತಮ್ಯ(ವಿವೇಕ)ದೆಡೆಗೆ ಮುಂದುವರೆಯುತ್ತದೆ. ಇದು ನಮ್ಮ ಸ್ಪಷ್ಟ ಅಥವಾ ಅಸಾಧಾರಣ ಜೀವಿಗಳ(ಪುರುಷನ) ವಿಭಿನ್ನ ಆಂಶಗಳನ್ನು ವೀಕ್ಷಿಸುತ್ತದೆ ಮತ್ತು ಪ್ರತ್ಯೇಕಿಸುತ್ತದೆ ಮತ್ತು ಅವುಗಳಲ್ಲಿ ಪ್ರತಿಯೊಂದರೊಂದಿಗಿನ ಗುರುತಿಸುವಿಕೆಯನ್ನು ತಿರಸ್ಕರಿಸುತ್ತ ಪ್ರಕೃತಿಯ ಘಟಕಗಳು, ಅಸಾಧಾರಣ ಸ್ವಭಾವದ ಘಟಕಗಳು, ಮಾಯೆಯ ಸೃಷ್ಟಿ, ಅದ್ಭುತ ಪ್ರಜ್ಞೆ ಎಂಬ ಒಂದು ಸಾಮಾನ್ಯ ಪಥದಲ್ಲಿ (ನಿಯಮದಲ್ಲಿ) ಅವುಗಳ ಹೊರಗಿಡುವಿಕೆಯನ್ನು ಮತ್ತು ಪ್ರತ್ಯೇಕಿಸುವಿಕೆಯನ್ನು ತಲುಪುತ್ತದೆ. ಆದ್ದರಿಂದ ಅದು ರೂಪಾಂತರಗೊಳ್ಳದ ಅಥವಾ ನಾಶವಾಗದ, ಯಾವುದೇ ವಿದ್ಯಮಾನ ಅಥವಾ ವಿದ್ಯಮಾನದ ಸಂಯೋಜನೆಯಿಂದ ನಿರ್ಧರಿಸಲಾಗದ ಶುದ್ಧ ಮತ್ತು ವಿಶಿಷ್ಟವಾದ ಆತ್ಮನೊಂದಿಗೆ ತನ್ನ ಸರಿಯಾದ ಗುರುತನ್ನು ತಲುಪಲು ಸಾಧ್ಯವಾಗುತ್ತದೆ. ಈ ಹಂತದಿಂದ, ಸಾಮಾನ್ಯವಾಗಿ ಅನುಸರಿಸಲ್ಪಡುವ ಮಾರ್ಗವು ಪ್ರಜ್ಞೆಯಿಂದ ಅಪೂರ್ವ ಪ್ರಪಂಚಗಳನ್ನು ಒಂದು ಭ್ರಮೆ ಎಂದು ತಿರಸ್ಕರಿಸಲು ಮತ್ತು ಪರಮಾತ್ಮನಲ್ಲಿ ವೈಯಕ್ತಿಕ ಆತ್ಮವನ್ನು ಹಿಂದಿರುಗಿಸದೆ ಅಂತಿಮ ಮುಳುಗುವಿಕೆಗೆ ಕಾರಣವಾಗುತ್ತದೆ.

ಆದರೆ ಈ ವಿಶೇಷ ಗುರಿಯು ಜ್ಞಾನ ಮಾರ್ಗದ ಏಕೈಕ ಅಥವಾ ಅನಿವಾರ್ಯ ಫಲಿತಾಂಶವಲ್ಲ. ಇದನ್ನು ಹೆಚ್ಚಾಗಿ ಕಡಿಮೆ ವೈಯಕ್ತಿಕ ಗುರಿಯೊಂದಿಗೆ ಅನುಸರಿಸುವುದರಿಂದ, ಜ್ಞಾನದ ವಿಧಾನವು ಅನುಭವ ದರ್ಶನಕ್ಕಿಂತ ಕಮ್ಮಿಯಿಲ್ಲದ ದೈವೀಕತೆಗಾಗಿ ಬ್ರಹ್ಮಾಂಡದ ಅಸ್ತಿತ್ವವನ್ನು ಸಕ್ರಿಯವಾಗಿ ವಶಪಡಿಸಿಕೊಳ್ಳಲು ಕಾರಣವಾಗಬಹುದು. ಈ ನಿರ್ಗಮನದ ಅಂಶವೆಂದರೆ ಒಬ್ಬರ ಸ್ವಂತ ಅಸ್ತಿತ್ವದಲ್ಲಿ ಮಾತ್ರವಲ್ಲದೆ ಎಲ್ಲ ಜೀವಿಗಳಲ್ಲಿಯೂ ಸರ್ವೋಚ್ಚ ಆತ್ಮದ ಸಾಕ್ಷಾತ್ಕಾರ, ಮತ್ತು ಅಂತಿಮವಾಗಿ, ಪ್ರಪಂಚದ ಅದ್ಭುತ ಅಂಶಗಳನ್ನು ದೈವಿಕ ಪ್ರಜ್ಞೆಯ ನಾಟಕವೆಂದು ಮತ್ತು ತನ್ನ ನಿಜವಾದ ಸ್ವ-ಪ್ರಕೃತಿಗೆ ಸಂಪೂರ್ಣವಾಗಿ ಯಾವುದೋ ಭಿನ್ನವಾದುದಲ್ಲವೆಂಬುದನ್ನೂ ಸಹ ಅರಿತುಕೊಳ್ಳುವುದು. ಮತ್ತು

ಈ ಸಾಕ್ಷಾತ್ಕಾರದ ಆಧಾರದ ಮೇಲೆ ಇನ್ನೂ ಹೆಚ್ಚಿನ ವಿಸ್ತರಣೆ ಸಾಧ್ಯ. ಎಲ್ಲ ರೀತಿಯ ಜ್ಞಾನವನ್ನು (ಎಷ್ಟೇ ಪ್ರಾಪಂಚಿಕವಾಗಿದ್ದರೂ), ಸ್ವತಃದಲ್ಲಿ ಮತ್ತು ಅದರ ಸ್ವರೂಪಗಳ ಮತ್ತು ಚಿಹ್ನೆಗಳ ಆಟದ ಮೂಲಕ ಜ್ಞಾನದ ಅದ್ವಿತೀಯ ಉದ್ದೇಶದ ಗ್ರಹಿಕೆಗೆ ಬಳಸಿಕೊಳ್ಳಲು ದೈವಿಕ ಪ್ರಜ್ಞೆಯ ಚಟುವಟಿಕೆಗಳಾಗಿ ಪರಿವರ್ತಿಸುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/38**

## ಸಾಂಪ್ರದಾಯಿಕ ಮತ್ತು ಸಮಗ್ರ ಜ್ಞಾನದ ಮಾರ್ಗ

ಜ್ಞಾನದ ಸಾಂಪ್ರದಾಯಿಕ ಮಾರ್ಗವು ವರ್ಜನೆಯಿಂದ ಮುಂದೆ ಸಾಗುತ್ತದೆ, ಮತ್ತು ನಿಶ್ಚಲ ಆತ್ಮನಲ್ಲಿ ಅಥವಾ ಉನ್ನತ ಶೂನ್ಯದಲ್ಲಿ ಅಥವಾ ಅನಿಯತ ಘನದಲ್ಲಿ ವಿಲೀನಗೊಳ್ಳುವ ಸಲುವಾಗಿ ದೇಹವನ್ನು, ಜೀವನವನ್ನು, ಇಂದ್ರಿಯಗಳನ್ನು, ಹೃದಯವನ್ನು, ನಿಖರ ಚಿಂತನೆಯನ್ನು ಸತತವಾಗಿ ತಿರಸ್ಕರಿಸುತ್ತದೆ. ಸಮಗ್ರ ಜ್ಞಾನದ ಮಾರ್ಗವು ನಾವು ಒಂದು ಅವಿಭಾಜ್ಯ ಸ್ವ–ನೆರವೇರಿಕೆಗೆ ಬರಲು ಉದ್ದೇಶಿಸಿದ್ದೇವೆ ಎಂದು ಭಾವಿಸುತ್ತದೆ ಮತ್ತು ವರ್ಜಿಸಬೇಕಾದದ್ದು ನಮ್ಮ ಸ್ವಂತ ಸುಪ್ತಾವಸ್ಥೆ, ಅಜ್ಞಾನ ಮತ್ತು ಅಜ್ಞಾನದ ಫಲಿತಾಂಶಗಳನ್ನು ಮಾತ್ರ.ಅಹಂ ಎಂದು ಬಿಂಬಿಸುವ ಜೀವಿಯ ಸುಳ್ಳನ್ನು ವರ್ಜಿಸು; ಆಗ ನಮ್ಮ ನಿಜವಾದ ಪುರುಷನು ನಮ್ಮಲ್ಲಿ ಪ್ರಕಟವಾಗಬಹುದು. ಕೇವಲ ಪ್ರಾಣಿಕ ಕಡುಬಯಕೆ ಮತ್ತು ನಮ್ಮ ದೈಹಿಕ ಅಸ್ತಿತ್ವದ ಯಾಂತ್ರಿಕ ಸುತ್ತಿನಂತೆ ಕಾಣುವ ಜೀವನದ ಮಿಥ್ಯೆಯನ್ನು ವರ್ಜಿಸಿ; ಪರಮಾತ್ಮನ ಶಕ್ತಿಯಲ್ಲಿ ನಮ್ಮ ನಿಜವಾದ ಜೀವನ ಮತ್ತು ಅನಂತ ಸಂತೋಷವು ಪ್ರಕಟವಾಗುತ್ತದೆ. ವಸ್ತು ಪ್ರದರ್ಶನಗಳಿಗೆ ಮತ್ತು ಉಭಯ ಸಂವೇದನೆಗಳಿಗೆ ಅಧೀನರಾಗಿ ಇಂದ್ರಿಯಗಳ ಮಿಥ್ಯೆಯನ್ನು ವರ್ಜಿಸಿ; ಇವುಗಳ ಮುಖಾಂತರ ವಿಷಯಗಳಲ್ಲಿನ ದೈವಕ್ಕೆ ತೆರೆದುಕೊಳ್ಳಬಹುದಾದ ಮತ್ತು ಅದಕ್ಕೆ ದೈವಿಕವಾಗಿ ಉತ್ತರಿಸಬಹುದಾದ ಹೆಚ್ಚಿನ ವಿವೇಚನೆ ನಮ್ಮಲ್ಲಿದೆ. ಹೃದಯದ ಮಿಥ್ಯೆಯನ್ನು ಅದರ ಪ್ರಕ್ಷುಬ್ಧ ಭಾವೋದ್ರೇಕಗಳಿಂದ ಮತ್ತು ಆಸೆಗಳಿಂದ ಮತ್ತು ಅದರ ದ್ವಂದ್ವ ಭಾವನೆಗಳಿಂದ ವರ್ಜಿಸಿ; ನಮ್ಮಲ್ಲಿನ ಆಳವಾದ ಹೃದಯವೊಂದು ಎಲ್ಲಾ ಜೀವಿಗಳ ಮೇಲಿನ ದೈವಿಕ ಪ್ರೀತಿಯೊಂದಿಗೆ ಮತ್ತು ಅದರ ಅನಂತ ಉತ್ಸಾಹ ಮತ್ತು ಅನಂತ ಪ್ರತಿಕ್ರಿಯೆಗಳಿಗೆ ಹಂಬಲಿಸುತ್ತ ತೆರೆದುಕೊಳ್ಳಬಹುದು. ಆಲೋಚನೆಯ ಮಿಥ್ಯೆಯನ್ನು ಅದರ ಅಪೂರ್ಣ ಮಾನಸಿಕ ರಚನೆಗಳು, ಅದರ

ಅಹಂಕಾರದ ಪ್ರತಿಪಾದನೆಗಳು ಮತ್ತು ನಿರಾಕರಣೆಗಳು, ಅದರ ಸೀಮಿತ ಹಾಗೂ ಅನನ್ಯ ಏಕಾಗ್ರತೆಯೊಂದಿಗೆ ವರ್ಜಿಸಿ; ದೇವರ ನಿಜವಾದ ಸತ್ಯ ಮತ್ತು ಆತ್ಮ ಮತ್ತು ಪ್ರಕೃತಿ ಮತ್ತು ಬ್ರಹ್ಮಾಂಡಕ್ಕೆ ತೆರೆದುಕೊಳ್ಳಬಹುದಾದ ಜ್ಞಾನದ ಹೆಚ್ಚಿನ ಸಾಮರ್ಥ್ಯವೊಂದು ಹಿಂದುಗಡೆ ಇದೆ. ಒಂದು ಸಮಗ್ರ ಆತ್ಮ ಸಮಾಧಾನ, – ಒಂದು ಸಂಪೂರ್ಣ, ಹೃದಯದ ಅನುಭವಗಳಿಗೆ ಒಂದು ಶಿಖರ, ಅದರ ಪ್ರೀತಿಯ, ಸಂತೋಷದ, ಭಕ್ತಿಯ ಹಾಗೂ ಆರಾಧನೆಯ ಪ್ರವೃತ್ತಿಗಾಗಿ; ಒಂದು ಸಂಪೂರ್ಣ, ಇಂದ್ರಿಯಗಳಿಗೆ ಒಂದು ಶಿಖರ, ದೈವಿಕ ಸೌಂದರ್ಯದ ಮತ್ತು ವಸ್ತುಗಳ ರೂಪಗಳಲ್ಲಿ ಒಳ್ಳೆಯ ಹಾಗೂ ಆನಂದದ ಅನ್ವೇಷಣೆ; ಒಂದು ಸಂಪೂರ್ಣ, ಆಲೋಚನೆಗೆ, ಸತ್ಯ ಮತ್ತು ಬೆಳಕು ಮತ್ತು ದೈವಿಕ ಬುದ್ಧಿವಂತಿಕೆ ಹಾಗೂ ಜ್ಞಾನದ ನಂತರದ ಹಸಿವಿಗಾಗಿ ತನ್ನದೇ ಆದ ಮಿತಿಗಳನ್ನು ಮೀರಿದ ಒಂದು ಶಿಖರ. ಅವರಿಂದಲೇ ಸಾಕಷ್ಟು ಬೇರೆಯಲ್ಲದ ಏನೋ ಒಂದು ಅವೆಲ್ಲವನ್ನೂ ಬಿಸಾಡಿದ ನಮ್ಮ ಪ್ರಕೃತಿಯಲ್ಲಿನ ಈ ವಿಷಯಗಳ ಕೊನೆ ಇದಾಗಿದೆ, ಆದರೆ ಏನೋ ಒಂದು ಅತ್ಯುನ್ನತವಾದುದರಲ್ಲಿ ಅವರು ಒಮ್ಮೆಗೆ ತಮ್ಮನ್ನೇ ತಾವು ಮೀರಿ ಮತ್ತು ತಮ್ಮ ಸ್ವಂತ ಪರಿಪೂರ್ಣತೆಗಳನ್ನು ಹಾಗೂ ಅನಂತತೆಗಳನ್ನು, ಅವರ ಸಾಮರಸ್ಯಗಳನ್ನು ಅಳತೆಗೆ ಮೀರಿ ಕಂಡುಕೊಳ್ಳುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/291–92**

## ಭಕ್ತಿಯೋಗ: ಭಕ್ತಿ ಮಾರ್ಗ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

### ಭಕ್ತಿಯ ತತ್ವ

ಭಕ್ತಿಯ ಮಾರ್ಗವು ಸರ್ವೋನ್ನತ ಪ್ರೇಮ ಮತ್ತು ಆನಂದವನ್ನು ಅನುಭವಿಸುವ ಗುರಿಯನ್ನು ಹೊಂದಿದೆ, ಜೊತೆಗೆ ಸರ್ವೋನ್ನತ ಭಗವಂತನು ತನ್ನ ವ್ಯಕ್ತಿತ್ವದಲ್ಲಿ ದೈವೀ ಪ್ರೇಮ ಮತ್ತು ವಿಶ್ವವನ್ನು ಅನುಭವಿಸುವವನು ಎನ್ನುವ ಸಾಮಾನ್ಯ ಪರಿಕಲ್ಪನೆಯನ್ನು ಉಪಯೋಗಿಸುತ್ತದೆ. ಆಗ ಪ್ರಪಂಚವು ದೈವದಾಟವಾಗಿ ನಮ್ಮ ಮನುಷ್ಯ ಜೀವನ ಕೊನೆಯ ರಂಗಸ್ಥಳದಂತೆ, ಭಿನ್ನ ಹಂತದಲ್ಲಿ ಸ್ವಯಂ–ಮರೆಮಾಚುವಿಕೆ, ಸ್ವಯಂ–ಬಹಿರಂಗಪಡುವಿಕೆ

ಎಂದರಿವಾಗುತ್ತದೆ. ಭಕ್ತಿ ಯೋಗದ ತತ್ವವು, ಮಾನವ ಜೀವನದ ಸಾಮಾನ್ಯ ಸಂಬಂಧಗಳನ್ನು ಉಪಯೋಗಿಸಿ ಅದರಲ್ಲಿ ಭಾವನೆಗಳನ್ನು ತುಂಬುತ್ತದೆ, ಅದನ್ನು ಅಸ್ಥಿರ ಜಗತ್ತಿನ ಸಂಬಂಧಗಳಿಗೆ ಬಳಸದೆ ಸರ್ವಪ್ರೇಮಿಯ, ಸರ್ವಸುಂದರ, ಮತ್ತು ಸರ್ವಾನಂದದ ಸಂತೋಷಕ್ಕೆ ಮಾತ್ರ ಅನ್ವಯಿಸುತ್ತದೆ. ದೈವೀ ಸಂಬಂಧವನ್ನು ಬೆಳೆಸಲು ಮತ್ತು ತೀವ್ರತೆಯನ್ನು ಹೆಚ್ಚಿಸಲು ಪ್ರಾರ್ಥನೆ ಮತ್ತು ಧ್ಯಾನವನ್ನು ಬಳಸಿಕೊಳ್ಳುತ್ತದೆ. ಮತ್ತು ಈ ಯೋಗವು ಎಲ್ಲಾ ಭಾವನೆಗಳ ಸಂಬಂಧಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುತ್ತದೆ. ಹಾಗಾಗಿ ವೈರತ್ವ ಮತ್ತು ಭಗವಂತನಿಗೆ ವಿರುದ್ದವಾಗಿರುವುದನ್ನು ಕೂಡ ತೀವ್ರತೆ, ವ್ಯಾಕುಲತೆ ಮತ್ತು ವಿಕೃತವಾದ ಪ್ರೇಮದ ಪ್ರಕಾರಗಳು ಕೂಡ ಸಾಕ್ಷಾತ್ಕಾರ ಮತ್ತು ಮುಕ್ತಿಗೆ ಸಂಭವನೀಯ ವಿಧಾನ ಎಂದು ಪರಿಗಣಿಸಲಾಗುತ್ತದೆ ಈ ಮಾರ್ಗ ಕೂಡ, ಸಾಧಾರಣವಾಗಿ ಆಚರಿಸಿದಾಗ, ಜಗತ್ತಿನ ಅಸ್ತಿತ್ವದಿಂದ ದೂರ, ಅದ್ವೈತದ ತರವಲ್ಲದ, ವಿಶ್ವಾತೀತವಾದ, ವಿಶ್ವದಾಚೆಗೆ ಕೊಂಡೊಯ್ದು ಮುಳುಗಿಸಿಬಿಡುತ್ತದೆ. ಆದರೆ, ಇಲ್ಲಿ ಕೂಡ, ಪ್ರತ್ಯೇಕವಾದ ಪರಿಣಾಮ ಅನಿವಾರ್ಯವೇನಲ್ಲ. ಈ ಯೋಗವು ತನ್ನಷ್ಟಕ್ಕೆ ತಾನೇ ಇದು ಪರಮಾತ್ಮ ಮತ್ತು ವೈಯಕ್ತಿಕ ಜೀವಿಯ ಮಧ್ಯದಲ್ಲಿ ಮಾತ್ರ ಇರುವ ದೈವೀ ಪ್ರೇಮದ ಆಟವಲ್ಲಾ ಎಂದು ಮೊದಲ ತಿದ್ದುಪಡಿಯಲ್ಲೇ ಸಾರುತ್ತದೆ. ಅಲ್ಲದೆ ಸಾಮಾನ್ಯ ಸಂವೇದನೆ ಮತ್ತು ಭಕ್ತರ ಮಧ್ಯೆ ಪರಸ್ಪರ ಪ್ರಾರ್ಥನೆಯ ಮೂಲಕ ತಮ್ಮೊಳಗೆ ಕೂಡಿಕೊಂಡು ಒಂದೇ ರೀತಿಯಾದ ಪರಮ ಪ್ರೇಮ ಮತ್ತು ಆನಂದವನ್ನು ಸಾಕ್ಷಾತ್ಕರಿಸುತ್ತ ವಿಸ್ತರಿಸುತ್ತದೆ. ಇದು ಇನ್ನೂ ಹೆಚ್ಚಿನ ಸಾರ್ವತ್ರಿಕ ತಿದ್ದುಪಡಿ ಮಾಡಿಕೊಳ್ಳುತ್ತಾ ಎಲ್ಲಾ ಜೀವಿಗಳಲ್ಲಿ ದೈವೀ ಪ್ರೇಮದ ಗುರಿಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತದೆ. ಬರಿ ಮನುಷ್ಯರಲ್ಲಿ ಮಾತ್ರವಲ್ಲದೆ ಪ್ರಾಣಿಗಳಲ್ಲಿ ಮತ್ತು ಸುಲಭವಾಗಿ ಎಲ್ಲಾ ಪ್ರಕಾರದ ಜೀವಿಗಳಲ್ಲಿ ವಿಸ್ತರಿಸುತ್ತದೆ.

*

ಆದಾಗ್ಯೂ, ನಿಜವಾಗಿ, ಹೆಚ್ಚಿನ ನಿಕಟ ಭಕ್ತಿಯೋಗವು ತನ್ನಷ್ಟಕ್ಕೆ ತಾನೆ ನಾಲ್ಕು ಪ್ರಕಾರಗಳಲ್ಲಿ ಟಿಸಿಲೊಡೆಯೊತ್ತದೆ, ಭಗವಂತನೆಡೆಗೆ ತಿರುಗಬೇಕೆಂಬ ಆತ್ಮದ ಆಸೆ ಮತ್ತು ಅವನೆಡೆಗಿನ ಭಾವನೆಗಳಿಂದ ಬಳಲುವಿಕೆ, ಪ್ರೇಮದ ನೋವು ಮತ್ತು ದೈವದಿಂದ ಪ್ರೇಮವನ್ನು ಹಿಂದಿರಿಗುಸುವಿಕೆ, ಪ್ರೇಮ ಪಡೆದಾಗಿನ ಆನಂದ ಮತ್ತು ಆನಂದದ ಮತ್ತು ದೈವೀ ಪ್ರೇಮಿಯ ಶಾಶ್ವತ ಸಂಲಗ್ನವೇ ಹೃದಯಕ್ಕೆ ದಿವ್ಯ

ಆನಂದವಾಗಿದ್ದು, ಈ ಕೆಲವು ವಿಷಯಗಳು ಒಂದೊಂದು ಸಲ ತುಂಬಾ ಸರಳ ಮತ್ತು ತುಂಬಾ ಗಾಢವಾದ ವಿಧಾನಗಳು ಅಥವಾ ವಿಶ್ಲೇಷಣೆಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/39, 570**

**ಆರಾಧನೆ**

ಆರಾಧನೆಯಲ್ಲಿ ಭಾವುಕರಾಗಿ, ದೇವರ ಕಡೆ ತಿರುಗುವಿಕೆಯಾಗಿ, ಆರಾಧನೆಯಾಗಿ ಮೊದಲ ರೂಪ ತಾಳುತ್ತದೆ. ಸಾಮಾನ್ಯವಾದ ಧರ್ಮದಲ್ಲಿ ಆ ಆರಾಧನೆಯು ಬಹಿರಂಗ ಪೂಜೆಯ ರೂಪ ಧರಿಸುತ್ತದೆ. ಮತ್ತು ಅದು ಪುನ: ಅತ್ಯಂತ ಬಹಿರಂಗವಾದ ಔಪಚಾರಿಕವಾದ ಪೂಜೆಯಾಗಿ ಬೆಳೆಯುತ್ತದೆ. ಈ ಅಂಶವು ಸಾಮಾನ್ಯವಾಗಿ ಅವಶ್ಯಕತೆಯಿದೆ. ಏಕೆಂದರೆ ಹೆಚ್ಚಾಗಿ ಮನುಷ್ಯರು ಭೌತಿಕವಾದ ಮನಸ್ಸಿನಲ್ಲಿ ಜೀವಿಸುತ್ತಾರೆ, ಭೌತಿಕವಾದ ಚಿಹ್ನೆಯ ಶಕ್ತಿಯಿಲ್ಲದಿದ್ದರೆ ಏನನ್ನೂ ಅರಿಯಲಾರರು ಮತ್ತು ಭೌತಿಕ ಶಕ್ತಿಯ ಕ್ರಿಯೆಯನ್ನಲ್ಲದೆ ಬೇರೆನನ್ನು ಸಂವೇದಿಸಲಾರರು. ಇಲ್ಲಿ ನಾವು ತಾಂತ್ರಿಕ ಶ್ರೇಣಿಯ ಸಾಧನವನ್ನು ಅನ್ವಯಿಸಬಹುದು. ಅದು ಹೇಗೆ ಪಶು ಸಮುದಾಯ, ಪ್ರಾಣಿ ಅಥವಾ ಭೌತಿಕ ಜೀವಿ, ಕೆಳ ಹಂತದಲ್ಲಿನ ಶಿಸ್ತು ಮತ್ತು ಅದು ಹೇಗೆ ಶುದ್ದವಾದ ಅಥವಾ ಪ್ರಧಾನವಾದ ಬಹಿರಂಗ ಆರಾಧನೆಗೆ ಮೊದಲು ಹೆಜ್ಜೆಯಾಗಿ ಕೆಳಹಂತದ ಹಾದಿಯಾಗುತ್ತದೆ ಎನ್ನುವದನ್ನು ಕಾಣಬಹುದು. ಆರಾಧನೆ, ಆಳವಾದ ಭಕ್ತಿಯೋಗವಾಗಿ ಮಾರ್ಪಡುವ ಮುನ್ನ, ಪ್ರೇಮದ ಹೂವಿನ ಒಂದೊಂದು ದಳಗಳು, ಅದರ ಗೌರವಾರ್ಪಣೆಯಾಗಿ ಮತ್ತು ತನ್ನ ಸೂರ್ಯನೆಡೆಗೆ ಸ್ವಯಂ ಮೆಲ್ಪಟ್ಟಕ್ಕೇರುವುದು, ಯಾವ ದೈವವನ್ನು ಆರಾಧಿಸಬೇಕಾಗಿದಿಯೋ, ಅದನ್ನು ಆಳವಾಗಿ ಮತ್ತು ಸಮರ್ಪಣೆಗೊಳಿಸುತ್ತ ಅದರತ್ತ ಹೆಚ್ಚಿಸುತ್ತ ಕರೆದುಕೊಂಡು ಹೋಗುತ್ತದೆ. ಈ ಸಮರ್ಪಣೆಯ ಒಂದು ಅಂಶ ಸ್ವಯಂ ಶುದ್ದಗೊಳಿಸುವಿಕೆಯೇ ಆಗಿರಬೇಕು. ಏಕೆಂದರೆ ದೈವಕ್ಕೆ ಹೊಂದಿಕೊಳ್ಳುವುದು ಅಥವಾ ನಮ್ಮ ಅಂತರಂಗದ ಗುಡಿಯೊಳಗೆ ದೈವದ ಪ್ರವೇಶಕ್ಕಾಗಿ, ಅಥವಾ ಹೃದಯದ ಗುಡಿಯೊಳಗೆ, ಅವನ ಸ್ವಯಂ ಅರಿವಾಗಲಿಕ್ಕೆ, ಈ ಶುದ್ದಿಕರಣವು ಸ್ವಭಾವದಲ್ಲಿ ನೈತಿಕವಾಗಿರಬೇಕು. ಆದರೆ ಯೋಗದ ಹಂತ ತಲುಪಿದಾಗ ಕೂಡ, ಒಂದು ಸಾಂಪ್ರದಾಯಿಕ ಧರ್ಮದ ದೇವರ ಬಗ್ಗೆ ಅರಿವು ಮೂಡಿಸುವ ನಿಯಮಕ್ಕೆ ವಿಧೇಯವಾಗಿರುವಿಕೆ,

ಹಾಗೂ ಯಾವುದು ದೈವ ತನ್ನೊಳಗೋ ಅಥವಾ ದೈವ ನಮ್ಮೊಳಗೋ ಎನ್ನುವ ಪರಿಕಲ್ಪನೆಯೊಂದಿಗೆ ಸಂಘರ್ಷ ಮಾಡುತ್ತದೆ ಅದನ್ನು ಹೊರ ಹಾಕುತ್ತದೆ. ಮೊದಲನೆಯದರಲ್ಲಿ ಅಂತರಂಗದಲ್ಲಿ ದೇವರ ಇರುವಿಕೆಯನ್ನು ಸಂವೇದಿಸುತ್ತಾ ಹೊರಗಿನ ಕ್ರಿಯೆಯಲ್ಲಿ ದೇವರ ಅಣುಕು ಮಾಡುತ್ತದೆ, ಮುಂದುವರೆದು ನಮ್ಮ ಸ್ವಭಾವದಲ್ಲಿ ಅವನ ರೀತಿಯಾಗಿ ಬೆಳೆಯುತ್ತದೆ. ಅಂತರಂಗದ ಆರಾಧನೆ ಔಪಚಾರಿಕ ಪೂಜೆಯಾಗಿ, ಹೊರಗಿನ ನೈತಿಕ ಜೀವನ ದೈವೀ ರೀತಿಯಾಗಿ ಬೆಳೆಯುತ್ತದೆ. ಅದು ಈ ರೀತಿ ಮುಕ್ತವಾಗಿ ಸಾದೃಶ್ಯಮುಕ್ತಿಯಾಗಿ ಕೊನೆಗೊಳ್ಳುತ್ತದೆ, ನಮ್ಮನ್ನು ನಿಮ್ಮ ಪ್ರಕೃತಿಯಿಂದ ಬಿಡುಗಡೆ ಗೊಳಿಸುತ್ತದೆ ಮತ್ತು ಪ್ರಕೃತಿಯಾಗಿ ಬದಲಾಗುತ್ತದೆ.

**ಸಮರ್ಪಣೆ**

ನಮ್ಮ ಸತ್ತೆಯ ಎಲ್ಲಾ ಭಾಗಗಳನ್ನು ಸಂಪೂರ್ಣವಾಗಿ ದೈವಕ್ಕೆ ಮೀಸಲಿಡುವುದರಿಂದ ಸಮರ್ಪಣೆಯು ಪೂರ್ಣವಾಗುವುದು; ಆದುದರಿಂದ ನಮ್ಮ ಆಲೋಚನೆಗಳನ್ನು ಮತ್ತು ಕೆಲಸಗಳನ್ನು ಸಹಿತ ಇಲ್ಲಿ ಯೋಗವು ಕರ್ಮಯೋಗ ಮತ್ತು ಜ್ಞಾನಯೋಗದ ಅಂಶಗಳನ್ನು ಸಾರವಾಗಿ ತೆಗೆದುಕೊಳ್ಳುತ್ತದೆ, ಆದರೆ ತನ್ನದೆ ಆದ ವಿಧಾನದಲ್ಲಿ ಮತ್ತು ತನ್ನದೇ ಆದ ವಿಚಿತ್ರ ಚೈತನ್ಯದೊಂದಿಗೆ. ಇದು ಜೀವನ ಮತ್ತು ಕರ್ಮಗಳನ್ನು ದೈವಕ್ಕೆ ಸಮರ್ಪಿಸುವುದು, ಆದರೆ ದೈವೀ ಸಂಕಲ್ಪಕ್ಕೆ ನಮ್ಮ ಸಂಕಲ್ಪವನ್ನು ಶೃತಿಗೊಳಿಸುವುದಕ್ಕಿಂತ ಹೆಚ್ಚಾಗಿ ನಮ್ಮ ಪ್ರೇಮವನ್ನು ಸಮರ್ಪಿಸಬೇಕು, ಭಕ್ತನು ತನ್ನ ಜೀವನವನ್ನು ಮತ್ತು ತಾನು ಏನು ಇದ್ದಾನೋ ಮತ್ತು ತನ್ನಲ್ಲಿ ಏನಿದೆಯೋ ಮತ್ತು ಎಲ್ಲವನ್ನು ದೇವರಿಗಾಗಿ ಸಮರ್ಪಣೆ ಮಾಡುತ್ತಾನೆ. ಈ ಶರಣಾಗತಿ ಸನ್ಯಾಸಿ ರೂಪ ತಾಳಬಹುದು. ಯಾವಾಗ ಅವನು ಸಾಮಾನ್ಯ ಮನುಷ್ಯ–ಜೀವನವನ್ನು ಬಿಟ್ಟು, ತನ್ನ ದಿನಗಳನ್ನೆಲ್ಲಾ ಪ್ರಾರ್ಥನೆ, ಮತ್ತು ಗುಣಗಾನ ಮತ್ತು ಪೂಜೆಗಾಗಿ ಮೀಸಲಿಡುತ್ತಾನೆ ಅಥವಾ ಭಾವಾವೇಶದ ಧ್ಯಾನಮಾಡುತ್ತಾ ತನ್ನ ಸ್ವಂತ ಸ್ವತ್ತುಗಳನ್ನು ಬಿಟ್ಟುಕೊಟ್ಟು ಬಿಕ್ಕು ಅಥವಾ ಭಿಕ್ಷುಕನಾಗಿ ದೇವರನ್ನು ಮಾತ್ರ ಹೊಂದಿರುತ್ತಾನೆ, ಜೀವನದಲ್ಲಿ ಎಲ್ಲಾ ಕ್ರಿಯೆಗಳನ್ನು ಬಿಟ್ಟು ಬರೀ ದೇವರ ಕೂಡ ಮತ್ತು ಬೇರೆ ಭಕ್ತರೊಂದಿಗೆ ಮಾತ್ರ ಸಂವಾದಿಸುತ್ತಾನೆ ಅಥವಾ ಬಹಳ ಅಂದರೆ ಸನ್ಯಾಸತ್ವ ಜೀವನದ

ಕೋಟೆಯೊಳಗಿನಿಂದ ಮಾತ್ರ ಮಾನವ ಸೇವೆ ಒದಗಿಸುತ್ತಾ, ಅದು ದೈವೀ ಸ್ವಭಾವದ ಪ್ರೇಮ ದಯೆ ಮತ್ತು ಒಳ್ಳೆಯತನ ಹೊರಹಾಕುತ್ತಿರುತ್ತದೆ. ಆದರೆ ಮತ್ತೊಂದು ವಿಶಾಲವಾದ ಸ್ವಯಂ ಸಮರ್ಪಣೆ ಇದೆ, ಯಾವುದೇ ಪೂರ್ಣಯೋಗಕ್ಕೆ ಸರಿಯಾಗಿ ಯಾವುದು ಪೂರ್ಣ ಜೀವನವನ್ನು ಒಪ್ಪಿಕೊಂಡು ಮತ್ತು ಜಗತ್ತು ಸಂಪೂರ್ಣತೆಯಲ್ಲಿ ಭಗವಂತನ ಲೀಲೆ, ಎಂದುಕೊಂಡು ತನ್ನತನ್ನವೆಲ್ಲವನ್ನೂ ಅವನಿಗೆ ಒಪ್ಪಿಸುವುದು; ತನ್ನಲ್ಲಿರುವ ಎಲ್ಲವೂ ಅವನಿಗೆ ಸೇರಿದ್ದು ಮಾತ್ರ ಎಂದು ಮತ್ತು ತಮಗಾಗಿ ಅಲ್ಲವೆಂದು ಮತ್ತು ಮಾಡುವ ಎಲ್ಲಾ ಕರ್ಮಗಳನ್ನು ಅವನಿಗೆ ಸಮರ್ಪಿಸುವುದು. ಈ ರೀತಿ ಮಾಡುವುದರಿಂದ ಅಂತರಂಗ ಮತ್ತು ಬಹಿರಂಗ ಜೀವನದಲ್ಲಿ ಸಂಪೂರ್ಣ ಕ್ರಿಯಾಶೀಲ ಸಮರ್ಪಣೆ ಮತ್ತು ಬದಲಾಗದ ಸ್ವಯಂಕೊಟ್ಟು–ಕೊಳ್ಳುವಿಕೆಯನ್ನು ತರುತ್ತದೆ. ದೈವಕ್ಕೆ ಆಲೋಚನೆಗಳನ್ನು ಸಮರ್ಪಿಸುವುದು. ಮನಸ್ಸನ್ನು ಆರಾಧನೆಯ ವಸ್ತುವಿನ ಮೇಲೆ ಕೇಂದ್ರಿಕರಿಸುವುದು ಪ್ರಾರಂಭದ ಹಂತದ ಪ್ರಯತ್ನವಾಗಿದೆ. ಅಶಾಂತವಾದ ಮನುಷ್ಯನ ಮನಸ್ಸು ಬೇರೆ ವಸ್ತುಗಳ ಮೇಲೆ ಸ್ವಾಭಾವಿಕವಾಗಿ ನೆಲೆಗೊಂಡಿರುತ್ತದೆ ಮತ್ತು ಮೇಲ್ಮುಖವಾಗಿ ನಿರ್ದೇಶಿಸಿದರೂ. ನಿರಂತರವಾಗಿ ಜಗತ್ತಿನಿಂದ ದೂರ ಹೋಗುತ್ತದೆ – ಆದಕಾರಣ ಕೊನೆಗೆ ಹವ್ಯಾಸದಿಂದ ಅವನನ್ನೆ ಚಿಂತಿಸುತ್ತಾ ಮತ್ತು ಬೇರೆಲ್ಲವನ್ನೂ ದೂರವಿಡುತ್ತಾ, ಮತ್ತು ಅವನ ಸಂಬಂಧವನ್ನು ಮಾತ್ರ ಚಿಂತಿಸುತ್ತದೆ. ಇದನ್ನು ಕೆಲವೊಂದು ಸಲ ಭೌತಿಕ ಪ್ರತಿಮೆಯ ಸಹಾಯದಿಂದ ಮಾಡುತ್ತದೆ.

## ಕರ್ಮಯೋಗ; ಕ್ರಿಯಾಪೂರ್ಣ

**– ಅನುವಾದ: ಡಾ॥ ಬಿ.ಆರ್. ಭೀಡ್, ರಾಯಚೂರು**

**ಪರಮಾತ್ಮನ ಸಂಕಲ್ಪಕ್ಕೆ ಶರಣು**

ಮಾನವನ ಪ್ರತಿಯೊಂದು ಕೆಲಸವನ್ನು, ಚಟುವಟಿಕೆಯನ್ನು ಪರಮಾತ್ಮನ ಸಂಕಲ್ಪಕ್ಕೆ ಸಮರ್ಪಿಸುವುದೇ ಕರ್ಮಯೋಗದ ಉದ್ದೇಶವಾಗಿದೆ. ನಾವು ಮಾಡುವ ಕೆಲಸಗಳ ಹಿಂದಿರುವ ಸ್ವಾರ್ಥ ಮತ್ತು ಪ್ರತಿಫಲದ ಬಯಕೆ ಎರಡನ್ನೂ ತ್ಯಾಗ ಮಾಡುವುದರೊಂದಿಗೆ ಈ ಯೋಗ ಆರಂಭವಾಗುತ್ತದೆ. ಇದರಿಂದ ನಮ್ಮ

ಮನಸ್ಸು ಮತ್ತು ಸಂಕಲ್ಪ ಪರಿಶುದ್ಧವಾಗುತ್ತದೆ. ಮತ್ತು ವಿಶ್ವಂಭರ ಶಕ್ತಿಯೇ ನಮ್ಮ ಮೂಲಕ ಕೆಲಸ ಮಾಡುತ್ತದೆ ಎಂಬ ಸತ್ಯ ಗೊತ್ತಾಗುತ್ತದೆ. ವ್ಯಕ್ತಿಯು ಒಂದು ಉಪಕರಣ ಮಾತ್ರ. ವಿಶ್ವಂಭರ ಶಕ್ತಿಯ ಪ್ರಭುವೇ ನಿಜವಾದ ಎಲ್ಲದರ ಒಡೆಯ ಮತ್ತು ನಿರ್ದೇಶಕ. ವೈಯಕ್ತಿಕವಾಗಿ ವ್ಯಕ್ತಿಯು ಕೇವಲ ಮುಖವಾಡ ಇದ್ದಂತೆ; ಅವನು ವೈಯಕ್ತಿಕವಾಗಿ ಪ್ರಜ್ಞೆಯ ಕೇಂದ್ರವಾಗಿದ್ದು ಕೆಲಸ ಮತ್ತು ದೃಶ್ಯ ಪ್ರಪಂಚದ ಸಂಬಂಧಗಳ ನಿರ್ವಾಹಕನಾಗಿದ್ದಾನೆ. ನಾವು ಮಾಡಬೇಕಾದ ಕೆಲಸಗಳ ಆಯ್ಕೆಯನ್ನು ಹೆಚ್ಚು ಹೆಚ್ಚಾಗಿ ಪರಮಾತ್ಮನ ಸಂಕಲ್ಪಕ್ಕೆ, ವಿಶ್ವಶಕ್ತಿಗೆ ಬಿಟ್ಟುಬಿಡಬೇಕು; ಮಾಡುವ ವಿಧಾನವನ್ನು ಕೂಡ ಅದಕ್ಕೇ ಸಮರ್ಪಿಸಬೇಕು. ಎಲ್ಲವನ್ನೂ, ಕೊನೆಗೆ ಎಲ್ಲ ಕೆಲಸಗಳ ಪ್ರತಿಫಲವನ್ನು ಕೂಡ ಪರಮಾತ್ಮನಿಗೆ, ಪರಾಶಕ್ತಿಗೆ ಅರ್ಪಿಸಿ ಬಿಡಬೇಕು. ಇದರಿಂದ ವ್ಯಕ್ತಿಯ ಆತ್ಮಕ್ಕೆ ತೋರಿಕೆಯ ದೃಶ್ಯ ಪ್ರಪಂಚದ ವಿವಿಧ ಚಟುವಟಿಕೆಗಳಿಂದ ಪಾರಾಗುತ್ತದೆ, ಅವುಗಳಿಂದ ಬಂಧನಕ್ಕೊಳಗಾಗುವುದಿಲ್ಲ. ಉಳಿದ ದಾರಿಗಳಂತೆ ಕರ್ಮಯೋಗವನ್ನು ಕೂಡ ಪ್ರಪಂಚದ ಎಲ್ಲ ಬಂಧನಗಳಿಂದ ವ್ಯಕ್ತಿಯನ್ನು ದೂರಗೊಳಿಸಿ ಪರಮಾತ್ಮನ ಜೊತೆ ಒಂದಾಗಿಸುವ ಉದ್ದೇಶದಿಂದಲೇ ರೂಪಿಸಲಾಗಿದೆ. ಆದರೆ ಇಲ್ಲಿ ಸಹ ಅತ್ಯಂತಿಕ ಪರಿಣಾಮ ಅನಿವಾರ್ಯವೇನಲ್ಲ; ಈ ಯೋಗದ ಉದ್ದೇಶ ಕೂಡ, ಉಳಿದವುಗಳಷ್ಟೇ ತೀವ್ರವಾಗಿ, ಎಲ್ಲದರಲ್ಲಿ ಪರಮಾತ್ಮನನ್ನೇ ಕಾಣುವುದು, ಎಲ್ಲಾ ಆಗುಹೋಗುಗಳಲ್ಲಿ ಘಟನೆಗಳಲ್ಲಿ, ಸಂಗತಿಗಳಲ್ಲಿ, ಚಟುವಟಿಕೆಗಳಲ್ಲಿ ಅವನನ್ನೇ ಕಾಣುವುದಾಗಿದೆ. ಆದರೆ ವಿಶ್ವದ ಕಾರ್ಯಗಳಲ್ಲಿ, ಎಲ್ಲಾ ಕಾರ್ಯಗಳಲ್ಲಿ ಆತ್ಮವು ಸ್ವಾರ್ಥವನ್ನು ಬಿಟ್ಟು ಭಾಗವಹಿಸುವುದು ಸಹ ಮುಖ್ಯವಾಗಿದೆ. ಈ ರೀತಿ ಕರ್ಮಯೋಗವನ್ನು ಸಾಧನೆ ಮಾಡಿದಾಗ ಮಾನವನ ಸಂಕಲ್ಪ ಮತ್ತು ಚಟುವಟಿಕೆಗಳು ದೈವೀ ಸ್ತರಕ್ಕೆ ಏರುವುವು. ಅವನ ವಿಶ್ವಾತ್ಮಕ ಕಾರ್ಯ, ಪ್ರಯತ್ನಗಳು, ಮುಕ್ತಿ–ಬಲ–ಪರಿಪೂರ್ಣತೆಗಾಗಿ ಮಾಡುವ ಎಲ್ಲ ಕೆಲಸಗಳು ಸಮರ್ಥನೀಯವಾಗುವುವು, ಆಧ್ಯಾತ್ಮೀಕರಣಗೊಳ್ಳುವುವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/39–40**

### ಗೀತೆಯಲ್ಲಿ ಹೇಳಿದ ಕರ್ಮಯೋಗದ ರೂಪರೇಷಗಳು

ಗೀತೆಯಲ್ಲಿ ಹೇಳಿದ ಕರ್ಮಯೋಗದ ರೂಪರೇಷಗಳೇನು? ಅದರ ಪ್ರಮುಖ ತತ್ತ್ವ ಹಾಗೂ ಆಧ್ಯಾತ್ಮಿಕ ಸಾಧನೆಯನ್ನು ಸಾರಾಂಶ ರೂಪದಲ್ಲಿ ಹೇಳುವುದಾದರೆ,

ಪ್ರಜ್ಞೆಯ ಎರಡು ಅತ್ಯಂತ ಉನ್ನತ ಹಾಗೂ ಅತ್ಯಂತ ವಿಶಾಲ ಶಕ್ತಿಗಳಾದ ಅಥವಾ ಸ್ಥಿತಿಗಳಾದ ಸಮತೆಯನ್ನು ಮತ್ತು ಏಕತೆಯನ್ನು ಒಂದುಗೂಡಿಸುವ ಕ್ರಿಯೆಯಾಗಿದೆ. ಈ ಕ್ರಿಯೆಯ ತಿರುಳೇನೆಂದರೆ, ನಮ್ಮ ಅಂತಃಸತ್ತೆಯಲ್ಲಿ ಹಾಗೂ ಅಂತಃಶ್ಚೈತನ್ಯದಲ್ಲಿ ಒಪ್ಪಿಕೊಂಡಿರುವಂತೆ ಬಾಹ್ಯ ಜೀವನದಲ್ಲಿ ಕೂಡ ಪರಮಾತ್ಮನನ್ನು ಯಾವುದೇ ಹಿಂಜರಿಕೆ ಇಲ್ಲದೆ ಒಪ್ಪಿಕೊಳ್ಳಬೇಕು. ವೈಯಕ್ತಿಕ ಆಶೆಗಳನ್ನು ಅಂತರಿಕವಾಗಿ ತ್ಯಾಗ ಮಾಡುವುದರಿಂದ ಸಮತ್ವ ಸಿದ್ಧಿಸುತ್ತದೆ, ಪರಮಾತ್ಮನಿಗೆ ನಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು ಸಾಧ್ಯವಾಗುತ್ತದೆ, ನಮ್ಮೊಳಗೆ ಭೇದವನ್ನು ಕಲ್ಪಿಸುವ ಅಹಂನಿಂದ ಪಾರಾಗಲು ಸಹಾಯ ಮಾಡುವುದು ಮತ್ತು ಇದರಿಂದ ನಮ್ಮೊಳಗೆ ಏಕತೆ ಮೂಡುವುದು. ಆದರೆ ಈ ರೀತಿಯ ಏಕತೆಯು ಕ್ರಿಯಾತ್ಮಕವಾದ ಶಕ್ತಿಯಲ್ಲಿ ಇರಬೇಕೇ ಹೊರತು ಕೇವಲ ನಿಶ್ಚಲ ಶಾಂತಿಯಲ್ಲಿ ಅಥವಾ ನಿಷ್ಕ್ರಿಯ ಆನಂದದಲ್ಲಿ ಎಲ್ಲವನ್ನೂ ವಿಭಕ್ತಗೊಳಿಸುವ, ಸೀಮಿತಗೊಳಿಸುವ ಅಹಂಕ್ಕಿಂತ ಹಿರಿದಾದ ಉನ್ನತವಾದ ತತ್ವಕ್ಕೆ ನಾವು ಸಂಪೂರ್ಣವಾಗಿ ಶರಣಾದಾಗ, ಪ್ರಕೃತಿಯ ಎಲ್ಲ ಶಕ್ತಿಗಳ ನಡುವೆ ಇದ್ದರೂ, ಕೆಲಸ ಕಾರ್ಯ ಕರ್ಮಗಳ ನಡುವೆ ಇದ್ದರೂ, ನಮ್ಮ ಆತ್ಮವು ಎಲ್ಲ ಬಂಧನದಿಂದ ಮುಕ್ತವಾಗಿರಬಲ್ಲದು ಎಂದು ಪ್ರಮಾಣ ಪೂರ್ವಕವಾಗಿ ಭರವಸೆ ನೀಡುತ್ತದೆ. ಗೀತೆಯು ನಿಶ್ಚಲ ಉದಾಸೀನತೆಯ ಮೇಲೆ ಆಧಾರಿತವಾಗಿರುವ ಸಂಪೂರ್ಣ, ಸಮಗ್ರ, ಕ್ರಿಯಾಶೀಲ ಚಟುವಟಿಕೆಯನ್ನು ಬೋಧಿಸುತ್ತದೆ. ಅವಿಚರಿತವಾದ, ಸ್ಥಾಯಿಯಾದ ಶಾಂತಿಯ ಆಧಾರದ ಮೇಲೆ ಮಾಡುವ ಅತ್ಯಂತ ಉನ್ನತ ಕಾರ್ಯವನ್ನು ಬೋಧಿಸುವುದೇ ಗೀತೆಯ ರಹಸ್ಯ ಪರಮಶ್ರೇಷ್ಠ ಆಂತರಿಕ ನೀರವತೆಯಿಂದ ಮುಕ್ತ ಪ್ರಕಟಣೆಯನ್ನು ಸಾಧಿಸುವುದೇ ಅದರ ರಹಸ್ಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/95**

**ನಿಷ್ಕಾಮ ಕರ್ಮ**

ಕಾರ್ಯಗಳ ಕ್ಷೇತ್ರವಾದ ಈ ಜಗದಲ್ಲಿ ಆಶೆಯು ಅನೇಕ ರೂಪಗಳನ್ನು ತಾಳುತ್ತದೆ. ಆದರೆ ಅವುಗಳಲ್ಲಿ ಅತ್ಯಂತ ಪ್ರಬಲವಾದುದೆಂದರೆ, ನಾವು ಮಾಡಿದ ಕೆಲಸಗಳಿಗೆ ಪ್ರತಿಫಲವನ್ನು ಬಯಸುವ ಪ್ರಾಣಿಕದ ಹಪಾಹಪಿ. ನಾವು ಬಯಸುವ ಪ್ರತಿಫಲವು ಆತಂರಿಕ ಸಂತೋಷವಾಗಿರಬಹುದು, ಅಥವಾ ನಮ್ಮ ಅಹಂ ಭಾವನೆಗಳ ತೃಪ್ತಿಯಾಗಿರಬಹುದು ಅಥವಾ ನಾವು ಗೆದ್ದೆವೆಂಬ ಕೇವಲ ಗರ್ವ,

ನಮ್ಮ ಉನ್ನತ ಆಕಾಂಕ್ಷೆ, ಭರವಸೆಗಳ ಸಾರ್ಥಕತೆ ಹೀಗೆ ಬೇರೆ ಬೇರೆ ರೂಪಗಳಲ್ಲಿರಬಹುದು. ಅಥವಾ ಬಾಹ್ಯ ಅಥವಾ ಭೌತಿಕ ಪ್ರತಿಫಲ, ಹಣದ ಅಥವಾ ದ್ರವ್ಯ ರೂಪದ ಪ್ರತಿಫಲ – ಅಂದರೆ ಸಂಪತ್ತು, ಅಧಿಕಾರ, ಅಂತಸ್ತು, ಗೆಲುವು ಹೀಗೆ ಏನೇನೋ ಭೌತಿಕ ಪ್ರತಿಫಲಾಪೇಕ್ಷೆ ಆಗಿರಲೂಬಹುದು. ಹೀಗೆ ಅವು ಆಂತರಿಕ ಅಥವಾ ಭೌತಿಕ ಏನೇ ಆಗಿರಲಿ ಆ ಆಮಿಷಗಳು ನಮ್ಮ ಅಹಂನ್ನು ಗಟ್ಟಿಯಾಗಿ ಹಿಡಿದುಬಿಡುತ್ತವೆ. ಇಂಥ ತೃಪ್ತಿಗಳು ನಮಗೆ ಭ್ರಮೆಯನ್ನು ಕೂಡ ಉಂಟು ಮಾಡುತ್ತವೆ. ಅವು ನಮಗೆ ಗೆದ್ದೆವೆಂಬ ಹಮ್ಮು, ಸ್ವಾತಂತ್ರ್ಯದ ಭರವಸೆ ಇತ್ಯಾದಿಗಳನ್ನು ಆಮಿಷಗಳಾಗಿ ಒಡ್ಡುತ್ತ, ಕೆಲಸಲ ಅವು ನಮ್ಮಿಂದ ಮಾಡಿಸುತ್ತವೆ. ಸಾಮಾನ್ಯವಾಗಿ ಇಡೀ ಜಗತ್ತೇ ಇಂಥ ಕುರುಡು ಬಯಕೆಗಳಿಂದ ಪ್ರೇರಿತವಾಗಿರುತ್ತದೆ. ಆದ್ದರಿಂದ ಗೀತೆಯು ಕರ್ಮ ಯೋಗದ ಮೊದಲ ಸೂತ್ರವಾಗಿ, ಯಾವ ರೀತಿಯ ಸ್ವಾರ್ಥ ಹಾಗೂ ಪ್ರತಿಫಲದ ಅಪೇಕ್ಷೆ ಇಲ್ಲದೇ ಕರ್ಮ ಮಾಡಲು ಹೇಳುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/102**

## ತಂತ್ರ ಯೋಗ

**– ಅನುವಾದ: ಶ್ರೀ ಪುಟ್ಟು ಕುಲಕರ್ಣಿ**

### ವಾಮ ಪಂಥ ಮತ್ತು ದಕ್ಷಿಣಾ ಪಂಥ

ಪ್ರಪ್ರಥಮವಾಗಿ ನಾವು ಗಮನಿಸುತ್ತಿರುವದೇನೆಂದರೆ, ಈಗಲೂ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿರುವ ಜೊತೆಗೆ ಅಷ್ಟೇ ಗಮನಾರ್ಹವಾಗಿಯೇ ಇರುವ ಯೋಗದ ಪರಂಪರೆಯಾಗಿರುವ ಇದು, ಅದರದೇ ಆದ ಗುಣವಿಶೇಷದಲ್ಲಿ ಸಂಶ್ಲೇಷಿತ ಅಥವಾ ಸಮನ್ವಯತೆಯ ಗುಣವಿಶೇಷದೊಂದಿಗೆ ಅಸ್ತಿತ್ವದಲ್ಲಿದೆ. ಸಂಪೂರ್ಣವಾಗಿ 'ಪ್ರಕೃತಿಯೇ' ಇಲ್ಲಿ ಕೇಂದ್ರ ವಿಷಯವಾಗಿದೆ. ಇದೇ ಅದರ ತತ್ತ್ವವೂ ಆಗಿದೆ. ಪ್ರಕೃತಿಯ ಮಹತ್–ಗತ್ಯಾತ್ಮಕ ಶಕ್ತಿಯ ವಿಶೇಷವಾಗಿಯೇ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತಿದೆ. ಆದರೂ ಇದೂ ಒಂದು ಯೋಗವೇ ಆಗಿರುವದರಿಂದ, ಅದರಲ್ಲೂ ಉಳಿದ ಸಂಪ್ರದಾಯಗಳೊಡನೆ ಸಮನ್ವಯತೆಯನ್ನು ಸಾಧಿಸಿಕೊಳ್ಳಲಾರದಂತೆಯೇ ಉಳಿದಿದೆ.

ಇದು ಪೂರ್ತಿಯಾಗಿ ತಾಂತ್ರಿಕ ಆಧಾರಿತವಾದದ್ದು. ಈ ಯೋಗದ ವಿಷಯದಲ್ಲಿ ಯಾವುದೇ ಕೆಲವು ಪ್ರಗತಿದಾಯಕ ಅಂಶಗಳಿದ್ದರೂ ಜೊತೆಗೆ ಅದಕ್ಕೆ ಬದ್ಧವಾಗಿದ್ದರೂ ಸಹಿತ, ಆ ಪಂಥದಲ್ಲಿನ ಹಲವು ತಾಂತ್ರಿಕರಲ್ಲದವರ ಕ್ರಿಯೆಗಳಿಂದಾಗಿ ಅವಿಶ್ವಾಸದಲ್ಲಿಯೇ ಕಾಣುವಂತಾಗಿದೆ. ಅದರಲ್ಲೂ ವಿಶೇಷವಾಗಿ "ವಾಮ ಮಾರ್ಗ(ಪಂಥ)"ದಲ್ಲಿ ಪ್ರಗತಿಗಳು, ಚಟುವಟಿಕೆಗಳು – ಅದನ್ನು 'ವಾಮಾಚಾರ'ದ ಹಂತಕ್ಕೇ ನಿಲ್ಲಿಸಿವೆ. ಇಲ್ಲಿ ಪಾಪ ಮತ್ತು ಪುಣ್ಯಗಳ (ವಾಮಾಚಾರ ಮತ್ತು ಸದಾಚಾರ) ದ್ವಿಧಾಗುಣವನ್ನು ಮೀರುವ ಸ್ವಭಾವದಿಂದ ದೂರವಾಗದೇ ಉಳಿದಿದೆ. ಅದೂ ಅಲ್ಲದೇ, ಇವುಗಳನ್ನು ಸ್ವತಃ ಪರಿವರ್ತತವಾಗಿರುವ ನ್ಯಾಯಸಂಗತವಾದ ಕರ್ಮಗಳ ಮುಖಾಂತರವೂ ಪರಿವರ್ತನಗೊಳಿಸಿಕೊಳ್ಳಲು ಇಚ್ಛಿಸುವದಿಲ್ಲ. ಮತ್ತೆ ಕೆಲವೊಂದು ವೇಳೆ, ಸ್ವಯಂ ಉಪಭೋಗತ್ವದ ಪ್ರವೃತ್ತಿಯಿಂದಾಗಿ ಅದರಲ್ಲಿಯೇ ವಿಧಾನಗೊಳಿಸುತ್ತಿರುವದರಿಂದಾಗಿ, ಅದರಲ್ಲೂ ಸಮಾಜದಲ್ಲಿ ಅನಿಯಂತ್ರಿತ ಅಮರತ್ವವನ್ನು ಪಡೆಯುವ ಮಾರ್ಗವನ್ನು ಹೊಂದುವ ಇಚ್ಛೆಯಲ್ಲಿ ಆಚರಿಸಲಾಗುತ್ತಿದೆ.

ಇದೆಲ್ಲ ಏನೇ ಇದ್ದರೂ, ಈ ಯೋಗ ಮಾರ್ಗದ ಉಗಮದ ಅವಧಿಯಲ್ಲಿ, ಈ ತಂತ್ರವು ಅತ್ಯಂತ ಸಕ್ಷಮತಾಪೂರ್ಣವಾಗಿಯೇ ಸ್ಥಾಪಿಸಲ್ಪಟ್ಟಿತ್ತು. ಇದು ಅಂಶಿಕವಾಗಿ ಸತ್ಯವೇ ಆಗಿದೆ. ಇದು ಹೊಂದಿರುವ ಈ ಎರಡು ಆಯಾಮದ ವಿಭಾಗೀಕರಣದಿಂದಾಗಿ – ಅಂದರೆ 'ವಾಮ ಪಂಥ' ಮತ್ತು 'ದಕ್ಷಿಣಾ ಪಂಥ'ದಿಂದಾಗಿ, ಅವುಗಳನ್ನು 'ವಾಮ ಮಾರ್ಗ ಮತ್ತು ದಕ್ಷಿಣ ಮಾರ್ಗ'ವೆಂದೇ ಜನಜನಿತಗೊಂಡಿವೆ. ಆಚರಣೆಯಲ್ಲಿವೆ. ಇವೆರಡೂ ವಿಭಾಗಗಳು ಅತ್ಯಂತ ಸಾಮರ್ಥ್ಯಶೀಲ ಗ್ರಹಿಕೆಗಳೊಂದಿಗೇ ಆಚರಣೆ ಬಂದಿವೆ.

ಪ್ರಾರಂಭದಲ್ಲಿ, ಪ್ರಾಚೀನ ವಿಧಾನದ ಹಿನ್ನೆಲೆಯಲ್ಲಿ, ಈ ದಕ್ಷಿಣ ಮತ್ತು ವಾಮ ಶಬ್ದಗಳ ಹಿನ್ನೆಲೆಯಲ್ಲಿ, ಇದು ಜ್ಞಾನದ ಮಾರ್ಗ ಹಾಗೂ ಆನಂದವನ್ನು ಹೊಂದುವ ಮಾರ್ಗವೆಂದೇ ರೂಪಿಗೊಂಡಿವೆ. ಮಾನವನಲ್ಲಿರುವ 'ಪ್ರಕೃತಿಯು' ತನ್ನಷ್ಟಕ್ಕೆ ತಾನೇ ಸ್ವಯಂ ಸೂಕ್ತ ತಾರತಮ್ಯ ಜ್ಞಾನದೊಂದಿಗೆ ಶಕ್ತಿಯಲ್ಲಿ ಮತ್ತು ಅದರದೇ ಆದ ಬಲಗಳಲ್ಲಿ ಅನುಷ್ಠಾನಿಸುವಲ್ಲಿ, ಮೂಲಧಾತುವಿನಲ್ಲಾಗಲೀ, ಕ್ಷಮತೆಯಲ್ಲಾಗಲೀ ಮತ್ತು ಮಾನವನ ಇರುವ 'ಪ್ರಕೃತಿಯು' ತನ್ನಷ್ಟಕ್ಕೆ ತಾನೇ

ಶಕ್ತಿಯಲ್ಲಿ ಆನಂದಮಯತೆಯಲ್ಲಿ ಮುಕ್ತಗೊಳ್ಳುವದರಲ್ಲಿ ಹಾಗೂ ಕ್ಷಮತಾ–ಪೂರ್ವಕವಾದ ಅಂಶಗಳಲ್ಲಿ ರೂಪಿಗೊಂಡಿತ್ತು. ಆದರೆ ಈ ಎರಡೂ ಮಾರ್ಗಗಳಲ್ಲಿ, ಅಸ್ಪಷ್ಟವಾಗಿರುವ ಮತ್ತು ಅಂತಿಮ ಹಂತದಲ್ಲಿ ಮಸುಕಾಗುವ ಅಥವಾ ಗ್ರಹಣಕ್ಕೆ ಒಳಗಾಗುವ ತತ್ತ್ವವಾಗಿ ವಿರೂಪಗೊಳ್ಳುತ್ತ ಸಾಗುವದರಿಂದ ಪತನದತ್ತ ಸಾಗುತ್ತವೆ.

## ಪೂರ್ಣಯೋಗ

**– ಅನುವಾದ: ಶ್ರೀ ಪುಟ್ಟು ಕುಲಕರ್ಣಿ**

### ಪೂರ್ಣಯೋಗದ ಮಂತ್ರ ಹಾಗೂ ಜಪ

ಈ ಪೂರ್ಣಯೋಗದ ಸಾಧನೆಗೆ ಒಂದು ಸಂರಚನೆ ಹಾಗೂ ಒಂದು ಮಂತ್ರದ ಅವಶ್ಯಕತೆ ಇದೆ ಎನ್ನುವದನ್ನು ನಾನು ತಿಳಿದುಕೊಂಡಿದ್ದೇನೆ. ಶ್ರೀ ಅರವಿಂದರೂ ಸಹಿತ ಈ ವಿಷಯವಾಗಿ ಏನನ್ನೂ ರೂಪಿಸಿಲ್ಲ. ಅವರು ಹೇಳುತ್ತಿದ್ದ ವಿಷಯವೆಂದರೆ, "ಪ್ರತಿಯೊಬ್ಬನೂ ಪ್ರತಿ ಕಾರ್ಯವನ್ನು ಮಾಡಲು ಸಿದ್ಧನಿರಬೇಕು. ಅದರಲ್ಲೂ ಬಾಹ್ಯದಿಂದ ಯಾವುದೇ ಮಾರ್ಗಗಳು ಇರದೇ ಹೋದ ಸಂದರ್ಭಗಳಲ್ಲೂ ಸಹಿತ, ಅಲ್ಲಿಯೂ ಕಾರ್ಯ ಮಾಡಲು ಸಿದ್ಧನಿರಬೇಕು." ಅವರು ಕಂಡುಕೊಂಡಂತೆಯೇ ಇಂದು ನಾವು ತಲುಪಿರುವ ನಮ್ಮ 'ಇಂದಿನ ಸ್ಥಿತಿಯು', ಅವರೇ ಹೇಳುತ್ತಿರುವ ಹಾಗೆ ಸಂಪೂರ್ಣವಾಗಿ ಮನೋವೈಜ್ಞಾನಿಕ ವಿಧಾನದಲ್ಲಿ ಇನ್ನೂ ಪಕ್ವಗೊಂಡಿಲ್ಲ. ಸೂಕ್ತವಾಗಿರುದಿಲ್ಲ. ಮತ್ತೆ ಇದಕ್ಕಾಗಿ ಜಪದ ಅವಶ್ಯಕತೆಯೂ ಇದೆ. ಏಕೆಂದರೆ ಸಂರಚನೆಯ ವಿಷಯದಲ್ಲಿ, ಜಪವು ನೇರವಾಗಿ ದೈಹಿಕ ವಿಷಯಗಳನ್ನು ಅವಲಂಬಿಸಿಯೇ ಜಪವು ನೇರಾನೇರವಾಗಿ ಕ್ರಿಯೆಗೆ ತೊಡಗಿಕೊಳ್ಳುತ್ತದೆ.

ಆದ್ದರಿಂದ, ನಾನು ಇವೆಲ್ಲಕ್ಕೂ ಒಂದು ವಿಧಾನವನ್ನು ಕಂಡುಕೊಂಡಿದ್ದೇನೆ. ನನ್ನ ಮಂತ್ರವನ್ನು ನನ್ನಷ್ಟಕ್ಕೇ ನಾನೇ ಅನ್ವೇಷಿಸಿಕೊಳ್ಳಬೇಕಿದೆ. ಆದರೆ ಈಗ ಈ ಎಲ್ಲ ವಿಷಯಗಳೂ ಸಿದ್ಧಗೊಂಡಿವೆ. ದಶಕಗಳ ಕಾಲ ಮಾಡಬೇಕಾಗಿದ್ದ ಕೆಲಸವನ್ನು ನಾನು ಕೆಲವೇ ಕೆಲವು ತಿಂಗಳಲ್ಲಿ ಮಾಡಿದ್ದೇನೆ. ಇಲ್ಲಿ ಮುಖ್ಯವಾದ ತೊಂದರೆ ಎಂದರೆ, ಅದಕ್ಕಾಗಿ ಸಮಯ ಬೇಕಾಗಿದೆ. ನಾನು ನನ್ನ ಮಂತ್ರವನ್ನು ನಿರಂತರವಾಗಿ ಪುನರುಚ್ಚರಿಸುತ್ತಾ ಇರುತ್ತೇನೆ. ನಾನು ಎಚ್ಚರವಿದ್ದಾಗ, ನಿದ್ರೆಯಲ್ಲಿ ಇದ್ದಾಗಲೂ ಸಹಿತ, ಆ ಉಚ್ಚಾರಣೆ ಇದ್ದೇ ಇರುತ್ತದೆ. ನಾನು ಬಟ್ಟೆ

ತೊಟ್ಟುಕೊಳ್ಳುತ್ತಿರುವಾಗಲಾಗಲೀ, ತಿರುಗಾಟ ಮಾಡುತ್ತಿರುವ ಸಮಯದಲ್ಲಾಗಲಿ, ಕೆಲಸದಲ್ಲಿ ತೊಡಗಿಕೊಂಡಾಗ, ಮತ್ತೊಬ್ಬರ ಸಂಗಡ ಮಾತನಾಡುವಾಗಲೂ ಸಹಿತ, ಅದು ನಿರಂತರವಾಗಿ ಇದ್ದೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಅತೀ ಸಮೀಪದಲ್ಲಿಯೇ, ಎಲ್ಲಾ ಸಮಯದಲ್ಲೂ ಹೌದು ಎಲ್ಲಾ ಸಮಯದಲ್ಲೂ ಅದು ಇದ್ದೇ ಇರುತ್ತದೆ.

ವಾಸ್ತವದಲ್ಲಿ ಯಾರು ಮಂತ್ರವನ್ನು ಹೊಂದಿದ್ದಾರೆಯೋ ಮತ್ತು ಯಾರು ಮಂತ್ರವನ್ನು ಹೊಂದಿಲ್ಲವೋ, ಅವರಿಬ್ಬರ ಮಧ್ಯದ ವ್ಯತ್ಯಾಸವನ್ನು ತಕ್ಷಣವೇ ನೀವು ಗಮನಿಸಬಲ್ಲಿರಿ. ಯಾರು ಮಂತ್ರವನ್ನು ಹೊಂದಿಲ್ಲವೋ, ಅವರು ಧ್ಯಾನದ ವಿಷಯದಲ್ಲಿ ಅತ್ಯಂತ ಗಂಭೀರವಾದ, ಬಲವಾದ ಅನುಷ್ಠಾನವನ್ನು ಹೊಂದಿದ್ದರೂ ಸಹಿತ, ಅಥವಾ ಏಕಾಗ್ರತೆಯನ್ನು ಸಾಧಿಸಿದ್ದರೂ ಸಹಿತ, ಅವರ ಸುತ್ತಲೂ ಇರುವ "ವಲಯವು" ಮುಸುಕುಧಾರಿಯಾಗಿಯೇ ಇರುತ್ತದೆ. ಅಸ್ಪಷ್ಟವಾಗಿಯೇ ಇರುತ್ತದೆ. ಅದೇ ಜಪದ ಅನುಷ್ಠಾನದಲ್ಲಿ ಯಾರು ಸಾಧನೆ ಮಾಡುತ್ತಿದ್ದಾರೆಯೋ ಅವರು ಅದನ್ನು ಒಂದು ಸುನಿಶ್ಚಿತತೆಯ ಪ್ರಕಾರ ಮುಂದುವರೆಸಿದ್ದಾರೋ, ಅವರು ಕಾಂತಿಯುತ್ಪನ್ನದ ಕೋಶವಾಗುತ್ತಾರೆ. ಅದು ಎಲ್ಲಿಯೇ ಇದ್ದರೂ ಸಹಿತ ಚಿಜ್ಜ್ಯೋತಿಯ ಕಾಂತಿಯಂತೆ ಪರಿವರ್ತನಗೊಳ್ಳುತ್ತಾರೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 19, 1959**

# ಶ್ರೀ ಅರವಿಂದರ ಕಾವ್ಯ
# "ಅಹಾನಾ"

**– ಅನುವಾದ: ಶ್ರೀ ಪುಟ್ಟು ಕುಲಕರ್ಣಿ**



**ಫೋಟೊ: ಇಮೇಜಿಂಗ್ ಸಾವಿತ್ರಿ**

ಶ್ರೀ ಅರವಿಂದರು 1910ರಲ್ಲಿಯೇ ರಚಿಸಿರುವ ಕಾವ್ಯವಿದು. ಅವರ ಸುಪ್ರಸಿದ್ಧ ಮಹಾಕಾವ್ಯ 'ಸಾವಿತ್ರಿ'ಗೂ ಮುನ್ನ ಈ ಕೃತಿ ರಚಿತಗೊಂಡಿದೆ. ಭಾರತೀಯ ತತ್ತ್ವ ಶಾಸ್ತ್ರದ ಆಯಾಮದಲ್ಲಿ ಮತ್ತು ವಿಕಾಸದ ಗತಿಯಲ್ಲಿ, ಮಾನವನ ಚಿಂತನಾ ಕೌಶಲ್ಯವು ತಳೆದ ಹಂತಗಳ ಕುರಿತು, ನಮ್ಮ ಪ್ರಾಚೀನ ಅಧ್ಯಯನದ ಪರಂಪರೆಯೇ ಇದೆ. ಆದರೆ ಕಾರಣಾಂತರದಿಂದ, ಈ ರೀತಿಯ ಅಧ್ಯಯನ ಪರಂಪರೆಯು ತೀವ್ರವಾದ ವಿಚಲನೆಗೆ ಸಿಲುಕಿ, ಕಣ್ಮರೆಯಾಗುವ ಹಂತವನ್ನೂ ತಲುಪಿದ ಸಂಗತಿಗಳು ಕೇವಲ ಇತಿಹಾಸವಾಗಿ ಮಾತ್ರ ಉಳಿದಿಲ್ಲ.

ಶುದ್ಧ–ಜ್ಞಾನದ ಮಾರ್ಗದಲ್ಲಿ ಯಾವಾಗಲೂ ಅಡೆ–ತಡೆಗಳು ವಿಪರೀತವಾಗಿಯೇ ಇರುತ್ತವೆ. ಈ ಅಡೆ–ತಡೆಗಳು ವೈಫಲ್ಯದ ಹಂತವನ್ನೂ ರೂಪಿಸಿವೆ. ಆದರೆ ಅವೆಲ್ಲವನ್ನೂ ಸಮರ್ಥವಾಗಿಯೇ ಎದುರಿಸಿ, ತನ್ನ ನೇರ ಗುರಿಯನ್ನು ತಲುಪುವ ಅಭೀಪ್ಸೆಯನ್ನು ಮಾತ್ರ ಭಾರತೀಯ ಹೃದಯ ಎಂದಿಗೂ ಬಿಟ್ಟುಕೊಟ್ಟಿಲ್ಲ. ಆಗಾಗ ಬರುವ ಈ ಮೋಡಗಳಿಂದಾಗಿ, ಕ್ಷೀಣಿಸಿದಂತೆ ಕಂಡರೂ, ಮತ್ತೂ ಮತ್ತೂ ಪ್ರಜ್ವಲನಗೊಂಡು, ಆ ಮೋಡಗಳನ್ನು ದೂರ ಮಾಡಿಕೊಂಡು ಪ್ರಕಾಶಿಸುತ್ತ ಪ್ರಗತಿಗೊಂಡಿದೆ; ಪ್ರಗತಿಗೊಳ್ಳುತ್ತಿದೆ.

ಇದನ್ನೇ ಶ್ರೀ ಅರವಿಂದರು 'ಅಹಾನಾ' ಮೂಲಕ ಭರವಸೆಯ ಕಿರಣವನ್ನು ಜೊತೆಗೆ ಪ್ರಗತಿಯ ಗತಿ–ಗಮನವನ್ನು ಅರ್ಥೈಸಿಕೊಳ್ಳಲು, ಪಥ ನಿರ್ಮಿಸಿದ್ದಾರೆ. **'ಅಹಾನಾ'** ಎಂದರೆ **'ಉಷಾದೇವತೆ'**. ಕತ್ತಲೆ ತುಂಬಿರುವ ನೆಲೆಗೆ ಹೊಸ ಬೆಳಕಿನ ಕಾಂತಿ ತುಂಬಲು ಆಗಮಿಸುವ ದೇವತೆ ಇವಳು. ಇವಳ ಆಗಮನಕ್ಕಾಗಿ ಕಾದು ಕಾದು ಸೋತಿರುವ, ಮೃತ್ಯುವಿನಿಂದಾವರಿತಗೊಂಡಿರುವ ಹಾಗೂ ಸದಾ ಸಂಘರ್ಷದಲ್ಲಿಯೇ ಸಂತಾಪಗೊಳ್ಳುತ್ತಿರುವ ಈ ಬುವಿಯ ನೆಲೆಗೆ ಇವಳು ಅವತರಣಗೊಂಡು ಬರುತ್ತಾಳೆ. ಏಕೆಂದರೆ ಇಲ್ಲಿ ಜ್ಞಾನಕ್ಕಾಗಿ ಹೋರಾಟ ಮಾಡುತ್ತಿರುವ ತಿತಿಕ್ಷುಗಳಿದ್ದಾರೆ; ಆ ಪರಮ ಆನಂದವನ್ನು ತಮ್ಮದಾಗಿಸಿಕೊಳ್ಳಲು ಸಾಧನೆಯಲ್ಲಿ ತೊಡಗಿರುವ ಸಾಧಕರು ಇದ್ದಾರೆ. ಆ ಪರಮೋಚ್ಚ ನೆಲೆಯ ಶಕ್ತಿಯನ್ನು ಪಡೆದುಕೊಳ್ಳಲು ಊರ್ಧ್ವಾತಿ ಊರ್ಧ್ವದಾ ಶಿಖರಗಳನ್ನೂ ಆರೋಹಣ ಮಾಡುವ ಸಾಹಸಿಗಳಿದ್ದಾರೆ. ಅಲ್ಲಲ್ಲಿ ಇರುವ ಆ ಆಳ ಕಣಿವೆಗಳಲ್ಲಿ ಆ ಪರಮ ಪ್ರೇಮದ ಧ್ವನಿಯನ್ನು ಕೇಳುವ ಸಲುವಾಗಿ ಕಾದುಕೊಂಡಿದ್ದಾರೆ. ಅದೋ ಆ ಪೂರ್ವದ ಶಿಖರಾಗ್ರದಲ್ಲಿ 'ಅಹಾನಾ' ಆಗಮಿಸಲೆನಲು ಸಂಕೇತ ತೋರುತ್ತಿದ್ದಾಳೆ. ಆ ಚಿರಂತನದ ತೋಷವನ್ನು ಮತ್ತು ಆನಂದವನ್ನು ಪಡೆದುಕೊಳ್ಳಲು, ಅವುಗಳ ಸಲುವಾಗಿ ಹೃತ್ಪೂರ್ವಕವಾಗಿಯೇ ಹೋರಾಟ ಮಾಡುತ್ತಿರುವವರ ಹೃದಯದ ಆರ್ತತೆಗಳು ಧ್ವನಿಪೂರ್ಣವಾಗಿ ನಾದಸ್ವರೂಪದಲ್ಲಿ, ಪ್ರಪ್ರಥಮದಲ್ಲಿ ಅವಳನ್ನು ಸ್ವಾಗತಿಸಲು ಉತ್ಸುಕವಾಗಿವೆ.

ಇಂತಹ ಅಪ್ರತಿಮ ಪ್ರತಿಮಾ ವಿಧಾನದಲ್ಲಿ, ಶ್ರೀ ಅರವಿಂದರು 'ಅಹಾನಾ'ದಲ್ಲಿ, ಈ ಮೃಣ್ಮಯದ ಜೀವನವು ಚಿನ್ಮಯವಾಗಿ ಪರಿವರ್ತಿತಗೊಳ್ಳುತ್ತಿದೆ ಎನ್ನುವದನ್ನು ವಿವರಿಸಿದ್ದಾರೆ. ಇಲ್ಲಿ **"ಅ ದಿಂದ ಹ"**ದವರೆಗೆ ಅಂದರೆ, ಮಾನವನ ಬದುಕಿನಲ್ಲಿ

ಧ್ವನಿಪೂರ್ಣವಾಗಿ ರೂಪಣೆಗೊಂಡು ವಿಶ್ವಸತ್ಯಕ್ಕೆ ಸಂಪರ್ಕವನ್ನು ಒದಗಿಸುತ್ತಿರುವ 'ಭಾಷಾ ವ್ಯವಸ್ಥೆ'ಯಲ್ಲಿ ಈ ಚಿಂತನದ ವಿಕಾಸದ ಸೂತ್ರವಿರುವದನ್ನು ತೋರಿಸಿದ್ದಾರೆ. ಈ ರೀತಿಯ ವಿಶ್ವ ರಹಸ್ಯದ ಸೂತ್ರವು ದ್ವಾಪರ ಯುಗದ ಅವಧಿಯಲ್ಲಿ ಕಾರಣಾಂತರದಿಂದ ಹುದುಗಿಸಿಡಲ್ಪಟ್ಟಿತು. ದ್ವಾಪರಯುಗಕ್ಕಿಂತ ಮೊದಲು ಭಾರತದಲ್ಲಿ ಅನುಷ್ಠಾನದಲ್ಲಿದ್ದ ಸಾಂಸ್ಕೃತಿಕ ಅಧ್ಯಯನದ ಪರಂಪರೆಯಲ್ಲಿ ತೀವ್ರವಾದ ವಿಚಲನೆಯು ತಲೆದೋರಿತು. ಅದು ಭಾಷೆಯ ಮೇಲೆ ಮತ್ತು ಅದರ ಮೂಲಕ ಮಾನವನ ಚಿಂತನಾ ವಿಕಾಸದ ಮೇಲೆ ತೀವ್ರತರವಾದ ಆಘಾತದಲ್ಲಿಯೇ ಹೇರಲ್ಪಟ್ಟಿತ್ತು. ಇದನ್ನು ಗಮನಿಸಿದ ಕೆಲವು ದೂರದೃಷ್ಟಿಯನ್ನು ಹೊಂದಿದ ಆತ್ಮಗಳು, ಈ 'ವಿಶ್ವ ರಹಸ್ಯವನ್ನು' ಮತ್ತೂ ರಹಸ್ಯವಾಗಿಡಲು ಯೋಚಿಸಿ, ಅದರಂತೆಯೇ ಯೋಜಿಸಿ, 'ಸಾವಿತ್ರಿ ಮತ್ತು ಸತ್ಯವಾನ'ನ ಕಥಾ ಸ್ವರೂಪದಲ್ಲಿ ಒಂದು ಪೌರಾಣಿಕ ಆವರಣದಲ್ಲಿ ಹುದುಗಿಸಿ ಇಟ್ಟರು. ಅದು ಮತ್ತೆ ಸ್ಪಂದಗೊಳ್ಳುವ ಕಾಲಕ್ಕಾಗಿ ಯುಗಯುಗದ ಸುದೀರ್ಘ ಯಾನದಲ್ಲಿಯೂ, ತನ್ನ ಅಂತರಾಳವನ್ನು ಕಾಯ್ದುಕೊಂಡು, ಪ್ರಕಾಶನಗೊಳ್ಳಲು ಅಭೀಪ್ಸೆಪಡುತ್ತಲೇ ಬಂದಿದೆ. ಇದೀಗ ಅಂತಹ 'ಪವಿತ್ರ ಅವಧಿಯ ಆಗಮನ'ವಾಗಿದೆ ಎಂದು ಶ್ರೀ ಅರವಿಂದರು ತಮ್ಮ ದೃಷ್ಟಾರನೆಲೆಯ ಅನುಭೂತಿಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಈ ರೀತಿಯಲ್ಲಿ ಪ್ರಕಾಶನಗೊಳ್ಳಲು ಆಗಿನಿಂದಲೂ ಸತತ ಹಂಬಲಿಸುತ್ತಿರುವ ಈ 'ಉಷಾದೇವಿ'ಯೇ (ಅಹಾನಾ) ತನ್ನ ಅಂತರಾತ್ಮದ ತುಡಿತವನ್ನು ವೈಶ್ವಿಕ ಭಾಷಾ ವ್ಯವಸ್ಥೆಯಲ್ಲಿಯೇ ರೂಪಿಸುತ್ತಿದ್ದಾಳೆ. ಈ ರಹಸ್ಯವನ್ನು ಪ್ರಕಾಶನಗೊಳಿಸಿ, ಮತ್ತೆ ಆ ವೈಶ್ವಿಕ ಜ್ಞಾನದ ತುರಿಯಾವಸ್ಥೆಯ ಆಯಾಮವನ್ನು ಮನುಕುಲವು ಪಡೆದುಕೊಳ್ಳಬೇಕೆಂಬ ನಿಯತಿಯ ಪ್ರಕಾರವೇ, ಈ ಅಭಿವ್ಯಕ್ತಿ ಇದೆ. ಒಟ್ಟಿನಲ್ಲಿ "ಅಹಾನಾ" ಈ ಪ್ರಾರಂಭದ ಹಂತದಲ್ಲಿ ಬರುತ್ತಿರುವ, ಮಾನವನಿಗೆ ಸತತವಾಗಿ ದೊರೆಯಲಿರುವ ವಾಣಿ–ಸ್ವರೂಪದ ಚೇತನಾವಸ್ಥೆಯನ್ನು ಈ ಕಾವ್ಯವು ತಿಳಿಸುತ್ತಿದೆ. ಇದು ನವಯುಗದ ಪ್ರಾರಂಭಕ್ಕಾಗಿ ಅವತರಣಗೊಳ್ಳುತ್ತಿರುವ ಉಷಾದೇವಿಯ ಸತ್ಯಸ್ಯ–ಸತ್ಯದ ಸೂತ್ರವಾಗಿದೆ.

ಈ ಎಲ್ಲ ವಿವರಗಳನ್ನೂ ವಿವರವಿವರವಾಗಿ ಶ್ರೀ ಅರವಿಂದರು "ವೇದ ರಹಸ್ಯ"ದಲ್ಲಿ ಮತ್ತು "ಋಗ್ವೇದದ ಪ್ರಥಮ ಋಕ್"ದಲ್ಲಿ ವಿವರಿಸಿದ್ದಾರೆ. ಆದರೆ

ಆತ್ಮಸಾಕ್ಷಾತ್ಕಾರದ ಹಂತದ ಅಭಿವ್ಯಕ್ತಿ ಯಾವಾಗಲೂ ಕಾವ್ಯಾತ್ಮಕವಾಗಿಯೇ ನಾದಮಯತೆಯಿಂದ ತುಂಬಿರುತ್ತದೆ. ಈ ಹಿನ್ನೆಲೆಯಲ್ಲಿ 'ಅಹಾನಾ' ಇಂಗ್ಲೀಷ–ನಲ್ಲಿಯೂ ಸಹಿತ ಆ ಭಾಷಾ ವ್ಯವಸ್ಥೆಯ ಕಾವ್ಯಾತ್ಮಕ ಅಭಿವ್ಯಕ್ತಿಯಾಗಿಯೇ ಇದೆ.

ಭಾರತೀಯ ಆಧ್ಯಾತ್ಮಿಕ ಚಿಂತನೆಗಳಲ್ಲಿ, ಅದರಲ್ಲೂ ಜ್ಞಾನವಾಹಿನಿಯಾಗಿರುವ ಸರಸ್ವತಿಯು, ವಾಣಿ ಸ್ವರೂಪದಲ್ಲಿ, ವಿಶ್ವಸತ್ಯದೊಡನೆ ಸ್ಪಂದಗೊಳ್ಳುತ್ತಾ, ಈ ವೈಶ್ವಿಕ ನಾದಕ್ಕೆ ಬದುಕಿನಲ್ಲಿ "ಶಬ್ದದ" ಸ್ವರೂಪದಲ್ಲಿ ಅಧ್ಯಯನಗೊಳ್ಳುತ್ತಿದೆ. 'ಅ' ದಿಂದ 'ಹ'ದವರೆಗೆ ಇರುವ ಅಕ್ಷರಗಳ ಹಂತವೂ ಒಂದಿದೆ. ಕನ್ನಡದ ಮೊದಲ ನಿಘಂಟು ಸ್ವರೂಪದ 'ಕಿಟೆಲ್ ಶಬ್ದಕೋಶ'ವೂ 'ಅ' ದಿಂದ 'ಹ'ದವರೆಗೆ ರೂಪಿಸಲ್ಪಟ್ಟಿದೆ. "ಳ"ದಿಂದ ಪ್ರಾರಂಭವಾಗುವ ಶಬ್ದಗಳು ಕೇವಲ ಬೀಜಮಂತ್ರ ಸ್ವರೂಪದಲ್ಲಿ ಮಾತ್ರ ಬಳಸಲ್ಪಡುತ್ತವೆ. ಹೀಗಾಗಿ 'ಅಹಾನಾ' ಶಾಬ್ದಿಕವಾಗಿಯೂ ಸಹಿತ ಭಾಷಾ ಶಾಸ್ತ್ರದ ವಿಷಯದಲ್ಲಿ ಒಂದು ಅಪರೂಪದ ಕಾವ್ಯವಾಗಿದೆ.

ಇಲ್ಲಿ ವಿಶ್ವಮಾತೆಯೇ ಉಷಾದೇವತೆಯಾಗಿ (ಅಹಾನಾ ಆಗಿ) ಮನುಕುಲದ ವಿಕಾಸಕ್ಕೆ ಆಗಮಿಸಲು ಸಿದ್ಧಳಿರುವ ಅಪರೂಪದ ಘಟನೆ ಇದು. ಮಾನವನು ತನ್ನ ಉದ್ಧಾರಕ್ಕಾಗಿ ಅವಿರತ ಸಾಧನೆಯ ಮೂಲಕ ಏನನ್ನು ಪಡೆದುಕೊಳ್ಳಲು ಅಭೀಪ್ಸೆಯನ್ನು ಹೊಂದಿರುವನೋ, ಅದನ್ನು ಇಲ್ಲಿ ಉಷಾಮಾತೆಯು ತಾನೇ ತಾನಾಗಿ ಧಾರೆಯೆರೆದು ಪೋಷಿಸಲು ಕಾತರಳಾಗಿದ್ದಾಳೆ. ಆದರೆ ಅದನ್ನು ಸ್ಪಂದಗೊಳದ, ಈ ಮೃಣ್ಮಯದ ಬದುಕಿನ ಆಕರ್ಷಣೆಗಳಿಗೆ ಸಿಲುಕಿ, ಅದನ್ನೇ 'ಸರ್ವಸ್ವ' ಎಂದು ಸ್ಥಗಿತಗೊಂಡ ಮಾನವನ ಹೃದಯಕ್ಕೆ ನವನವೀನ ಕಿರಣಗಳ ಮೂಲಕ ಮತ್ತೆ ಹೊಸ ಆಶಯವನ್ನು ರೂಪಿಸುತ್ತಿದ್ದಾಳೆ.

ಈ ಕಾವ್ಯದ ಎರಡು ಅಭಿವ್ಯಕ್ತಿಗಳು ಇವೆ. ಪ್ರಥಮ ಒಂದು (ಮೂಲ 12 ಸಾಲುಗಳು) ನುಡಿಯನ್ನು ಮೊದಲಿನ ಸ್ವರೂಪದಲ್ಲಿ ಹಾಗು ಉಳಿದಂತೆ, ಸಂಭಾಷಣಾ ರೂಪದಲ್ಲಿ ಇರುವ ರೀತಿಯಲ್ಲಿ. ಇಲ್ಲಿ 1910ರ ನಂತರದಲ್ಲಿ ಅಭಿವ್ಯಕ್ತಿಸಲಾಗಿರುವ ಸಂಭಾಷಣಾ ಸ್ವರೂಪದಲ್ಲಿ, "ಶ್ರೀ ಅರವಿಂದರ 150ನೇ ಜನ್ಮ ಜಯಂತಿಯ" ನಿಮಿತ್ತದಲ್ಲಿ, ಇಲ್ಲಿಯವರೆಗೂ ಕನ್ನಡದಲ್ಲಿ ಸ್ಪಂದಗೊಳದ ಈ ಕಾವ್ಯವನ್ನು ಕನ್ನಡದಲ್ಲಿ ಕಾವ್ಯ ಸ್ವರೂಪದಲ್ಲಿಯೇ ಅನುಸ್ಪಂದಗೊಳ್ಳುವ ಪ್ರಯತ್ನವಿದು.

## "ಅಹಾನಾ"

ಘನದ ಮೌನಗಳ ಆವರಣದೊಳಗೆ ಆ ಶ್ರೇಣಿ–ಶ್ರೇಣಿ–ಶಿಖರ
ಕಾಣ್ಕೆ ತಾನಾಗ ಏಕತ್ವದೊಳಗೆ ಪೂರ್ಣದಲಿ ತೋಷ–ಸಾರ
ಮರ್ತ್ಯತತ್ತ್ವಕ್ಕೆ ಇದು ಸನಿಹಗೊಳಲು ಬಾಗಿತ್ತು ಇಂತು ತಾನು;
ಮಾನವನು ಈಗ, ನಿನಗಿದೋ ಶಿಶುವು, ನಮ್ರತೆಯಲೀಗ ಅವನು.

ಏನಿದದ್ಭುತವು! ನಿನ್ನ ವಿಚಲನದ ಸ್ಪಂದದಲಿ ಸ್ವರ್ಣಮಯವು–
ಚಂದ್ರಕಾಂತಿಯೊಲು ತೇಜದಾ–ವರ್ಗ ತಾಣದಲಿ ವರ್ಣಮಯವು,
ಪರಮ ಪರಿಶುದ್ಧ ಸ್ಫಟಿಕ ಕಾಂತಿಯೊಲು ಪಾವಿತ್ರ್ಯಪೂರ್ಣಮಾಲೆ
ಬೆಳಗುತಿದೆ ನಿನ್ನ ವದನಾರವಿಂದ; ಮಾಬಲದಿ ನಿನ್ನ ಲೀಲೆ

ಏಕಾಂಗಿ ನೀನು ಈ ಲೋಕಲೋಕಗಳ ಊರ್ಧ್ವಾತಿ ಊರ್ಧ್ವದಲ್ಲು
ನಿಸ್ಸಂಗಕೀಗ ನೀನಂಜೆ ಇದಕೆ, ತುರೀಯಾತೀತದಲ್ಲು,
ಕಾಣ್ಕೆಯಾರ್ಣವದ ಸರಣಿ ಜೊತೆಜೊತೆಗೆ ಧಾರೆಯಲು ಬೆಳಕನಿತ್ತು
ಮಾಯಕದ–ಲಯದಿ ನಮ್ಮೆಡೆಗೆ ಕೆಳಗೆ, ಬಾಗೆ ದೃಷ್ಟಿಪಾತವಿತ್ತು;

ಆದಿತ್ಯ–ತೇಜ–ಶಕಲಾಗ್ನಿ–ಕಣವು ನಿನ್ನಕ್ಷಿ–ಬಿಂದು–ಧಾರೆ,
ಹೃದಯ ಮಂದಿರದ ಗುಹೆಗಳಲ್ಲೀಗ ತುಂಬುತ್ತ ಹ್ಲಾದ–ಸಾರೆ
ನಿಶ್ಶಬ್ದದೊಳಗೆ ಅನುರಣನಗೊಂಡ ನಾದಾನುನಾದದಂತೆ
ಮಾಪನೆಗೆ ಸಿಗದ ಮಾಪಕದ ತೆರದಿ ತಾಂಡವದ ತೋಷದಂತೆ.

ಅಂಚುಅಂಚಿನಲಿ ಉಷಾ–ಕಾಂತಿಯಲಿ ಪದದುಲಿತ ನಿನದ ಗತಿಯು
ಗೋಧೂಳಿ ಮಿನುಗು ಸಂಧಿ–ಸಂಧ್ಯೆಯಲಿ,ಧೂಸರದ ಸೆರಗ ನೆಲೆಯು;
ನಿನ್ನ ಪದಸ್ಪರ್ಶದಲಿ ಬುವಿಯ ಮನಕೆ ತುಂಬುತಲಿ ಸತತ ಶಮನ
ಸ್ವರ್ಗ–ಸಂಜಾತ ಓ ಕುಸುಮ–ಭಾವ–ಕನ್ನಿಕೆಯ ದಿವ್ಯ ತನನ

ಕಾಲದಾ ಪ್ರಾಣ–ಸಂತತಿಯ ತ್ರಾಣದವತರಣದೊಳಗೆ ಇಂತು
ಶಾಶ್ವತದ ತಾಣದಿಂದುದಿತಗೊಂಡು ಶಕ್ತಿಗಳ ಸರಣಿ–ತಂತು
ನಮ್ಮಿಂದ ನುಣುಚಿಕೊಂಡಿದ್ದ ಹ್ಲಾದ–ಆಹ್ಲಾದ ವಶಕೆ ಪಡೆದು
ಅನವರತವಾಗಿ ನಮ್ಮ ಹೃದಯದಲಿ ಶ್ರಮಗೊಳಲು ನೊಗವ ಹಿಡಿದು,

ನೆಲಕಂಟಿಕೊಂಡ ನಮ್ಮ ಬಂಧನವು, ಹಪಹಪಿಕೆಯಲ್ಲಿ ಛಿದ್ರ
ನಮ್ಮ ಜೀವನವು ಅರೆಯರಿವಿನೊಳಗೆ ಕೆಲಚಣಕೆ ಮಾತ್ರ ಭದ್ರ.
ನಿನ್ನಾಟಕಾಗಿ ನಿನಗಿದೋ ನಿತ್ಯ ತಾರೆಗಳು ಲೀಲೆ ತುಂಬಿ,
ಮಧುಮಧುರ ಭಾವದಲಿ ಸುಳಿವ ಪವನ ನಿನ್ನದೇ ಮಧುವ ತುಂಬಿ.

ನಾ ಮಾತ್ರ ಸತತ ಭವಕಂಟಿಕೊಂಡ ಭಾವದಲಿ ಇದ್ದರೂನು
ನಿನ್ನ ಲೀಲೆಗಳು ಸದಾ ಕಾಲದಲು ಸ್ವರ್ಗಸಮವಲ್ಲವೇನು?
ಏಕಿನಿತು ಸರ್ವ ಕಾಮನೆಯ ವಸ್ತು ಏಕಾಕಿ, ಬಂಧು–ದೂರ?
ನೀರವದ ಶಾಂತಿ ಮಾತ್ರವೇ ಮಧುರ? ಇದು ನಮ್ಮ ಶಾಂತ ತೀರ?

ಶಾಂತಿ–ನದಿಗಳಿವು ಘನಶೀತದಲ್ಲಿ ಪರಮಾತಿ ಪರಮ ಶಾಂತ
ಅವುಗಳಾ ತಟವು ಪರ್ಣರಾಹಿತ್ಯ ಜೊತೆಗೀಗಿದೊ ಏಕಾಂತ.
ಘನವಂತನಿರುವ ಪರಮದೇವನಿವ ಇದನೆಲ್ಲ ಧರಿಸಲೆನಲು
ಮಾಬಲದ ಸೂರ್ಯತೇಜದಾ ಕಾಂತಿ–ದ್ಯುತಿಯೊಡನೆ ಮಿಂಚುಗೊಳಲು.

ಸಮ್ಮಿಲನಗೊಂಡ ವಿಧಿಬದ್ಧ–ತಾರೆಗಡಣದಾ ತೇಜವನ್ನು
ಅದ ಮಾತ್ರ ನೀನು ಆಧರಿಸಿಕೊಳಲು ಪರಿಭ್ರಾಂತಿಯಾಗದೇನು,
ಗಗನದಲಿ ತೂಗುಬಿಟ್ಟಿರುವ ಬರಿಯ–ಬಕ್ಕಟದ ಶೀತ–ಪ್ರಸ್ಥ,
ಔನ್ನತ್ಯ ಶಿಖರಗಳು, ಗರುಡನೀಗ ತಾ ಪಡೆಯೆ ತೋಷ–ಚಿತ್ತ

ಆ ಅಲೌಕಿಕದ ಊರ್ಧ್ವಾತಿಊರ್ಧ್ವದಲು ತಾನು ಗೂಡುಗೊಳಲು
ಏಕಾಂತ–ಘನದವಾಣಿಗಳನೀಗ ಹೃದಯದಲಿ ರೂಹುಗೊಳಲು
ಆ ಶಾಂತವೇಕ ಐಕ್ಯಕವಾಗಿ ತಲ್ಲೀನಗೊಳಲು ಎಂದು
ದಣಿವರಿಯದಂತೆ ಸಾಮರ್ಥ್ಯಪೂರ್ಣ ಹೃದಯವದು ಶಾಂತವೇನು,

ಪ್ರಭೆಯ ದಭದಭೆಯ ಆ ರಭಸ–ಕ್ರಂದದಲಿ ಆಲಿಸಲು ವಿಫಲಗೊಂಡು,
ಏಕಾಂಗಿಯಾಗಿ ಆ ದೇವದಾರು ಪರ್ಣಗಳಭೀಪ್ಸೆಗೊಂಡು,
ದ್ವಿತ್ವವದು ತಾನು ಅಸ್ತಿತ್ವ ಗಮ್ಯದಸ್ಮಿತೆಯ ರೂಹು ತಾನು,
ಆ ದ್ವಿತ್ವವೀಗ ಈ ವಿಶ್ವಮಾತೆಯಾ ಸ್ವಪ್ನ ಲೋಕ–ಪಾನು.

**ಅಹಾನಾ**

ಕಾಲ–ಯಾನದಲಿ ಕಾಲದುಪ್ಪಳದಿ ಗತಿತಪ್ಪಿ ಪಥಗಳಲ್ಲಿ,
ಈ ವ್ಯಾಪ್ತ ಶೂನ್ಯದಾಧಾರದಲ್ಲಿ ನಾನಿದ್ದೆ ಸುಪ್ತಿಯಲ್ಲಿ;
ಶತಮಾನ ಸರಣಿ ಗತಿಸಿದವು ನಿರತ ನನಗರಿಯದಂತೆ ಇನಿತು,
ಸಾವಿರದ ಯುಗದ ಮಾಲೆಗಳು ಸಹಿತ ಕರಗಿದವು ಗಣಿಸದಿಂತು.

ನಾನೆ ಅಹಾನಾ, ನಾನಿದೋ ಇಲ್ಲಿ, ಸುಪ್ತಳಿಹೆ ದೀರ್ಘದಲ್ಲಿ.
ನಿನ್ನದೇ ಸಪ್ತದಾಯಾಮಪೂರ್ಣ ಅರ್ಣವದ ಧಾರೆಯಲ್ಲಿ,
ಓ ಜೀವಿ ನೀನು, ಅದು ಎಂತು ಇಂತು ಸಂತ್ರಸ್ತಗೊಳುವೆ ಸತತ?
ನಾನಿರದೆ ನಿನ್ನ ಜೊತೆಗೀಗ ಸತತ, ಅದು ಎಂತು ನಿನಗೆ ಚಲಿತ?

ನಿನಗಿಹುದೆ ತೃಪ್ತ ಧನ್ಯ ಭಾವಗಳು, ನಾನಿರದೆ ನಿನ್ನ ಜೊತೆಗೆ?
ಆದರೂ ನಾನು ಆಗಮಿಸುತಿಹೆನು ತೇಲುತಲಿ ನಿನ್ನ ಬಳಿಗೆ;–
ಸಂತಾಪದಲ್ಲಿ ತಾಪಗೊಂಡಿತ್ತು ನನ್ನಾತ್ಮವಾಗ ಅಲ್ಲಿ
ಆ ಹರುಷ–ಕೂಗು ಜೊತೆಗೀಗ ಕಂಡ ಆ ದಣಿದ–ದೃಶ್ಯಗಳಲಿ;

ನನ್ನಾತ್ಮ ಭಾವದಾಳದಾಳಗಳಲಾಗ ನಾನು ಜಾರಿ,
ನನ್ನಲ್ಲೆ ನಾನು ನುಣುಚಿಕೊಂಡಿರುವೆ ನಿಷ್ಕ್ರಿಯದ ನಿದ್ರೆ ಸಾರಿ.
ಸುತ್ತುವರೆದಿದ್ದ ಮೌನಘನದಿಂದ ಅದು ಯಾರು ಆರ್ತರಾಗಿ
ಕರೆದಿಹರು ನನ್ನ ಮತ್ತೆ ಈ ಅಡ್ಡಿ–ಆತಂಕ ತಾಣಕಾಗಿ?

ನಾನೇಕೆ ನಿನ್ನ ಜೊತೆಗೀಗ ಇಂತು ಪಥದಲ್ಲಿ ಸಾಗ ಬರುವೆ?
ನನ್ನಾತ್ಮ ಶ್ರಮಕೆ ಪ್ರತಿಫಲದಲೀಗ ನೀನೇನ ಸಲಿಸಲಿರುವೆ,
ಈ ಲೋಕವನ್ನೆ? ನನ್ನಾತ್ಮ ಬಲವು ನಿಕಟದಲಿ ನಿನ್ನ ಜೊತೆಗೆ
ನಿತ್ಯದಲಿ ಶ್ರಮದಿ ತೊಡಗಿರಲು, ಇದಕೆ ನೀನೇನನೀವೆ ಕೊಡುಗೆ?

ನಾನಿದೋ ಸರ್ವ ಸರ್ವಸ್ವದಲ್ಲು ಆತ್ಮೀಯ ಪ್ರೇಮದೊಳಗೆ,
ಕರ್ಮದಲಿ ನಿರತೆ, ಯಾತನೆಯಲವರಿಗಾಹ್ಲಾದ ನೀಡಬೇಕೆ?
ಈ ಸರ್ವದಿಂದ ನಾ ಕಳಚಿಕೊಂಡು ನಾನೀಗ ಸಿಲುಕದಿರುವೆ;
ದಯನೀಯ ಗತಿಯ ಒತ್ತಡದ ಖತಿಗೆ ನಾನೀಗ ದೂರವಿರುವೆ.

ಸುವಿಶಾಲ ವ್ಯಾಪ್ತ ಅವಕಾಶದೊಳಗೆ ಘನಮೌನ ಶುದ್ಧ–ಪೂರ್ಣ
ಮತ್ತಿದೋ ನಿನ್ನ ವ್ಯಾಪ್ತತ್ವಕೀಗ ಸ್ವೀಕರಿಸು ನನ್ನ ಪೂರ್ಣ
ನನ್ನ ಕೃಪೆ ಪಡೆದು ನನ್ನ ಮರೆತವರು ನೀಡಿರುವ ದುಃಖ ಮರೆವೆ
ಅದಕಾಗಿ ಈಗ ನಿನ್ನಡೆಗೆ ಇನಿತು ಹಿಂತಿರುಗಿ ಸ್ಪಂದಗೊಳುವೆ

**ಆರ್ತಜೀವದಾಕ್ರಂದಗಳು**

ನಿನ್ನ ಲೀಲೆಯಲಿ ನೀನಿರಲು ಮಗ್ನೆ, ಓ ದೇವಿ ಏಕೆ ಮೌನ?
ಇನಿತೊಂದು ಶಾಂತ ಭಾವವದು ಏಕೆ, ಬೇಡ ನಿನಗೆ ಬಿಗುಮಾನ,
ಯಾತನೆಯ ಘಾತದಲಿ ಸಿಲುಕಿ ಬಳಲಿ ಬೇಯುತಿಹ ನಮ್ಮ ಜಗಕೆ
ನಿನ್ನ ವಾತ್ಸಲ್ಯ ಜೊತೆಯಮರ ಪ್ರೇಮ ಹಂಬಲಿಸಿ ನಿಂತ ಮನಕೆ

ನಿನ್ನ ಈ ಮೌನ ನಿನಗೇಕೆ ಇನ್ನು, ಅವತರಣಗಳೊಳ್ಳು ಬಾಗಿ
ಅದು ಎನಿತು ಕಾಲ ಕುದಿಕುದಿಯಬೇಕು ಈ ಲೋಕ ಪಾಕಕಾಗಿ,
ನಮ್ಮನುದ್ಧರಿಸೆ ನಮಗೀಗ ಹರಸು, ಹೃದಯವಿದೆ ನಿನಗೆ ಅದಕೆ
ನಿನ್ನ ಅವತಾರ ನಿನ್ನ ಲೀಲೆಗಳು ನಿರ್ಮಿತವು ತಾನೆ ಇದಕೆ

ಕಡೆಗಣಿಸಬೇಡ ನಮ್ಮ ಆರ್ತತೆಯ ನೀನಿರುವದೇಕೆ ಹೇಳು
ನಿನ್ನ ಕೃಪೆಗಾಗಿ ಅನುಕ್ಷಣದಿ ಮಿಡಿತ ಮಿಡಿತದಲಿ ನಮ್ಮ ಬಾಳು.

**ಅಹಾನಾ**

ತೋಷದುಂಬಿರುವ ರಾಗಗಳ ಗುಂಗು–ರಂಗಿನಲಿ ರಂಗಗೊಂಡ,
ರಮಣೀಯ ರಮ್ಯ ದೃಷ್ಟಿಯಲಿ–ಪುಷ್ಪ ಕುಂಜಗಳ ಕರಣ ಭಾಂಡ
ಅವಕಾಶದಲ್ಲಿ ಆವರಿಸಿಕೊಂಡ ಈ ತಳದ ಸೆಳೆತದೊಳಗೆ
ಗಾನದಲಿ ಲೀನಗೊಂಡೀಗ ರೋಮಹರ್ಷಿತದಿ ಪುಳಕದೊಳಗೆ

ಜೊತೆಗಿದೋ ಗಂಧ–ಸೌಗಂಧಮಯದ ಪರಿಮಳದ ಅಲೆಯಲೀಗ
ಸೌಂದರ್ಯಪೂರ್ಣ ಮುಖದುಂಬಿಕೊಂಡ ತಾಣದಲಿ ವಾಸವೀಗ,
ಬಲು ದೀರ್ಘ ಕಾಲದಿಂದೀಗ ವರವಸಂತದಾ ಕವಚದೊಳಗೆ
ಸಂತೃಪ್ತಿ ಇರದ ಆಮಿಷದ ಹಿಡಿತದಾಹ್ಲಾದದಲ್ಲಿ ಬಲೆಗೆ,

ನೀವಿರಲು ಮುಳುಗಿ, ನನ್ನ ಹೃದಯವಿದು ನೊಂದು ತಾ ದೂರವುಳಿದು
ಆದರೂ ನಾನು ಈ ನಿಮ್ಮ ಹಸಿರು–ಕುಸುರಿನಲಿ ಸುಳಿದು ಸುಳಿದು,

ನಿಮ್ಮ ಮಣಿಪುಷ್ಪಮಾಲೆಯಲಿ ಸಹಿತ ಕೌಶಲ್ಯ ಹೆಣಿಕೆಯೊಳಗೆ,
ನಿಮ್ಮ ವನವನವು ಹರ್ಷಪುಳಕಿತದಿ ನೆಲೆಗೊಳುವ ಹರಕೆಯೊಳಗೆ,

ನಾ ಲೀಲೆಗೊಂಡೆ ನಿಮ್ಮ ಸುಗಮಕ್ಕೆ ಸಂಗಮದ ಭಾವ ಗೀತ,
ಆ ದೂರದಲ್ಲಿ ಸಿಡಿಸಿಡಿವ ಸ್ಫೋಟದಾಸ್ಫೋಟವಿರಲು ಸತತ
ಅದ ಗಣಿಸದಂತೆ ನಾ ನಿಮ್ಮ ಜೊತೆಗೆ, ಎದೆಗೊಟ್ಟು ನಿತ್ಯದಲ್ಲಿ,
ಅನುಗಮನಗೊಂಡೆ ಗಾಳಿಗಾಳಿಯಲು ಅನುಸ್ಪಂದಗೊಳ್ಳುತಲ್ಲಿ,

ಫಲಪಕ್ವಗೊಂಡ ಶರತ್–ಋತುವಿನಾ ಆ ಸಾತತ್ಯ ನಿಯತಿಯಲ್ಲಿ
ತುಂತುಂಬಿ ನಿಂತೆ ಪ್ರಫುಲ್ಲತೆಯಲ್ಲಿ ನಿಮ್ಮ ಉದ್ಯಾನಗಳಲಿ,
ನಿಮ್ಮ ಈ ಮೊಗ್ಗು–ಮೊಗ್ಗುಗಳಲೀಗ ಕುಣಿಕುಣಿದು ಪುಟಿವ ಅಲೆಯ
ಕಂಡೆ ನಾನೀಗ ಆ ಗತಿಯ ನಿದ್ರೆ ಜೊತೆಗೆ ಕಂಪನದ ನೆಲೆಯ,

ಆಲಿಸಿದೆನೀಗ ನಿಮ್ಮ ಮೃದುಮಧುರ ಕೋಕಿಲದ ಕುಕಿಲುಗಾನ
ರಾಗದುಂಬಿತ್ತು ಚಂದ್ರಿಕೆಯ–ಕಾಂತಿಯಲಿ ಹೊಳೆವ ನದಿಯ ತನನ
ಇಂಪಿನಲಿ ತಂಪಿನಾವರಣದೊಳಗೆ ಸಂಗೀತದಲೆಯ ಉಲಿತ
ಪ್ರಚ್ಛನ್ನಗೊಂಡು ಸ್ವಚ್ಛಂದದಲ್ಲಿ ಮಿನುಮಿನುಗು ನಾದ ಸತತ.

ಆದರೀಗಿದೋ ನಿಮ್ಮಿಂದ ದೂರ ನಾ ಸರ್ವವನ್ನು ತ್ಯಜಿಸಿ
ನಿಮ್ಮ ಗತಿಗಮನ ವಹನತೆಯನೀಗ ನಾನಿಂತು ದೂರವಿರಿಸಿ
ಜೊತೆಗಿದೋ ನಿಮ್ಮ ಚಂದ್ರಕಾಂತಿಯಾ–ಕಿರಣಗಳ ಸರಣಿಗಳನು
ಆ ಪುಷ್ಪರಾಶಿಯಾಕರ್ಷ ಮಧುರ ಪರಿಮಳದ ಸ್ಪರ್ಶಗಳನು;

ನಾನಿದೋ ಈಗ ಅವಕಾಶದೊಡನೆ ಅವಕಾಶವಾಗಿ ಛಂದ
ನನ್ನಾತ್ಮ ಸಹಿತ ಮುಕ್ತವಾಗಿಹುದು ಆ ಘಳಿಗೆ–ಪಾಶದಿಂದ.
ನನ್ನಾತ್ಮವೀಗ ತಾ ಮುಕ್ತ–ಮುಕ್ತ ಆ ಹರ್ಷ ಬಯಕೆಯಿಂದ,
ದುಃಖ ನೀಡಲೆನೆ ಸೆಳೆಸೆಳೆದು ಎಳೆವ ಆಕರ್ಷ ಜಾಲದಿಂದ,

ನನ್ನಿಂದ ಯಾರು ಅದು ಎನಿತು ದೂರ ದೂರದಲಿ ನಿಲ್ಲಬಹುದು?
ನನ್ನ ಆ ಭೂತದಿಂದವರು ಎನಿತು ತಾ ನುಣುಚಿಕೊಳ್ಳಬಹುದು?
ನನ್ನ ಈ ವರ್ತಮಾನವನು ಜೊತೆಗೆ ಬರಲಿರುವ ದಿನಗಳನ್ನು
ಅದು ಎನಿತು ತಪ್ಪಿ ತಾ ಚಲಿಸಲಿಹರು, ಮರೆಯುತಲಿ ನಿಯತಿಯನ್ನು;

ನಿಶ್ಶೂನ್ಯಘನದಿ ನಾ ಪ್ರಗತಿಗೊಂಡೆ ಸಾಮರ್ಥ್ಯಭರಿತವಾಗಿ,
ಬರಿಯಬಕ್ಕಟದಿ ಮತ್ತೆ ಸುವಿಶಾಲ ಘನನೀಲ ಗಗನವಾಗಿ.
ಈ ಪ್ರಭಂನಜನದಿ ನೀನೀಗ ಇಂತು ಸ್ಥಾಪನೆಯಗೈವೆಯೇನು,
ಈ ಶೀತದಲ್ಲಿ ನಿನ್ನ ತೋಷಮಯ–ಬೆಳಗುಗಳ–ಪುಷ್ಪಗಳನು?

ಹಿಂದೊಮ್ಮೆ ಇಲ್ಲಿ ನೆಲೆವಾಸಗೊಂಡು ಅಲೆಯಲೆಯ ನಾದದೊಳಗೆ
ಕೃಪೆಗಳುದ್ಭವಿಸಿ ನಾಟ್ಯಲೀಲೆಯಲಿ ತಾ ರಚಿತಗೊಂಡ ಘಳಿಗೆ,
ಆದರೀಗಿದೋ ಅದರ ವನಗಳನು ಕತ್ತರಿಸಿ ಎಸೆದೆ ಕೆಳಗೆ
ಮತ್ತಿದೋ ಅದರ ಸೂಕ್ಷ್ಮತೆಯ ಸ್ಥಾನಗಳ ತುಳಿದು–ತುಳಿದು ಹೀಗೆ,

ಮೋಜು–ತುಮುಲದಲಿ ಮುಳುಗಿ ಮೆರೆಮೆರೆವ ಆ ತಾಣದಿಂದ ಇಂದು
ತಳ್ಳಿದೆನು ಅವರ ಅಲ್ಲಿಂದ, ಒಂಟಿ–ಅಲೆಮಾರಿಯಾಗಲೆಂದು,
ಹುಡಿಗಿಡಿಸಿ ಗೋಡೆ–ಗೋಡೆಗಳನೆಲ್ಲ ಬೀಳಿಸಿದೆ ಮತ್ತೆ ಈಗ
ಬಿದ್ದಿರುವ ಚೂರುಗಳ ಮೇಲೆ ಲಿಖಿತವಿದು "ಪೂರ್ಣ ಕ್ಷತಿಯಲೀಗ".

ಈಗಿದೋ ಮತ್ತೆ, ಎಲ್ಲಿರುವೆನೀಗ ಎಂದೆನಿತು ಅರಿಯಲಿಂತು,
ಮಾಬಲದಿ ಸಹಿತ ಅವನ ಸಹಿಹದಲಿ ಏಕಿನಿತು ಬಳಲಿ ನಿಂತು,
ಆದರೀ ಬೃಹದ್–ದೇವಗಣ ತಾನು ಬರಲು ಹಿಂಜರಿಕೆ ತೋರಿ
ಅವನಿಗೀಗಿದೋ ಅಂಜಿಕೊಂಡಂತೆ ತೋರಿಕೆಯಲೀಗ ಸಾರಿ.

ಅಚ್ಚರಿಯ ಸ್ಪಂದ–ನದಿ ಮರಳಿ ಬಂದು ಚಿಂತನವು ಆತ್ಮಕೀಗ.
ಮಾಧುರ್ಯಮಯದಿ ಮತ್ತಿದೋ ಪ್ರಕಟ ವೈಶಿಷ್ಟ್ಯಪೂರ್ಣವಾಗ
ಘನಶೀತದೊಳಗೆ ಮುಳುಗಿರುವ ನನ್ನ ಭಾವಗಳ ವ್ಯಾಪ್ತ–ಪರದೆ
ಕಾಣುವಲಿ ಹೆದರಿ, ತಂತಮ್ಮ ಭಾವಗನುಗುಣದಿ ಮುಂದೆ ಬರದೆ.

ನೀವಿದೋ ಸಹಿತ ಪಡಮರಳಿ ಈಗ, ಹಾತೊರೆವ ದಿವ್ಯಗಣವೆ,
ಮಾಧುರ್ಯ ತುಂಬಿಕೊಂಡಿರುವ ಭವ್ಯದಾಗರದ ದಿವ್ಯ–ನಾವೆ.
ಕಾಲದೀ ಚಲನದಲಿ ನಾನು ಅಲೆತ–ಏರಿಳಿತವರಿಯೆನೇನು?
ನೆಲೆಸಲೆನೆ ಪರಮ–ಆನಂದವೀಗ, ಪೂರ್ಣವನು ತೋರಿ ಇನ್ನು

(ಸಶೇಷ)

**ಟಿಪ್ಪಣಿಗಳು:**

**ಉಷಾದೇ**ವಿಯ ವಿಷಯದಲ್ಲಿ ಶ್ರೀ ಅರವಿಂದರು ತಮ್ಮ 'ದಿವ್ಯ ಜೀವನ'ದಲ್ಲಿ ವಿವರಗಳನ್ನು ಈ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ; 'ಸರ್ವಾಂತರ್ಯಾಮಿಯ ಯಥಾರ್ಥತೆ ಮತ್ತು ಲೋಕ ಅಥವಾ ಸರ್ವಂ ಖಲ್ವಿದಂ ಬ್ರಹ್ಮ' ಎನ್ನುವ ವಿಷಯದಲ್ಲಿ, ಅದರಲ್ಲೂ ಮಾನವನು ಹೊಂದಿರಲೇಬೇಕಾದ ಅಭೀಪ್ಸೆಯ ಕುರಿತು, ಮತ್ತು ಈ ಉಷಾದೇವತೆಯ ಆಗಮನಕ್ಕಾಗಿಯೇ ಇರುವ ಅಭೀಪ್ಸೆಯಾಗಿರಬೇಕು ಎನ್ನುವದನ್ನು ತೋರಿಸಿದ್ದಾರೆ.

ಪರಾಯತೀನಾಮ್ ಅನ್ವೇತಿ ಪಾಥ (1)
ಆಯತೀನಾಂ ಪ್ರಥಮಾ ಶಶ್ವತೀನಾಮ್ (2)
ವ್ಯುಚ್ಛಂತೀ ಜೀವಮ್ ಉದೀರಯಂತಿ (3)
ಉಷಾ ಮೃತಂ ಕಂ ಚನ ಬೋಧಯಂತೀ (4)

– ಋಗ್ವೇದ 1.113

ಅನಾದಿ ಕಾಲದಿಂದಲೂ ಪರಾದತ್ತಲೇ ಊರ್ಧ್ವಗಾಮಿಯಾಗಿಯೇ ಸಾಗುತ್ತಿರುವ ಈ ಪಥದಲ್ಲಿಯೇ ಅವಳು ಸಾಗುತ್ತಿದ್ದು, ಈ ಮೊದಲು ಘಟಿಸಿರುವ, ವಿಕಾಸದ ಪಥದಲ್ಲಿ ಸಾಗಿರುವ ಉಷಾ ಮಾರ್ಗವನ್ನೇ ಇವಳು ಅನುಸರಿಸುತ್ತಿದ್ದಾಳೆ. ಈ ರೀತಿಯ ಪಯಣದಲ್ಲಿ, ಅದರಲ್ಲೂ ಶಾಶ್ವತದ ಉಷೆಯಾಗಿ ಪಯಣಿಸುತ್ತಿರುವಲ್ಲಿ ಇವಳೇ ಸರ್ವಪ್ರಥಮಳಾಗಿದ್ದಾಳೆ. ಲೋಕದ ಸರ್ವ ಜೀವಿಗಳನ್ನೂ. ಜೀವಚೇತನವನ್ನೂ ಪ್ರಗತಿಯತ್ತಲೇ ಆರೋಹಗೊಳಿಸುತ್ತಾ, ಎಲ್ಲವನ್ನೂ ಜ್ಯೋತಿರ್ಮಯಗೊಳಿಸುತ್ತಾ ತಾನೂ ಬೆಳಗುತ್ತಾಳೆ. ಇವಳು ಪ್ರಪ್ರಥಮ ಉಷೆಯಾಗಿದ್ದಾಳೆ. ಮೃತಸದೃಶವಾಗಿರುವದನ್ನೂ ಜಾಗ್ರತಿಗೊಳಿಸುತ್ತ ಸರ್ವಸ್ವವೂ ಬೆಳಗುವಂತೆಯೇ ಬೋಧಪ್ರದಳಾಗಿದ್ದಾಳೆ.

ಕಿಯಾತ್ಯಾ ಯತ್ ಸಮಯಾ ಭವಾತಿ (1)
ಯಾ ವ್ಯೂಷುಃ ಯಾಃ ಚ ನೂನಂ ವ್ಯುಚ್ಛಾನ್ (2)
ಅನು ಪೂರ್ವಾ ಕೃಪತೇ ವಾವಶಾನಾ (3)
ಪ್ರದೀಧ್ಯಾನಾ ಜೋಷಮ್ ಅನ್ಯಾಭಿಃ ಏತಿ (4)

– ಋಗ್ವೇದ 1.113.10 [ಕುತ್ಸ ಆಂಗೀರಸ]

ಈಗಾಗಲೇ ಈ ತೆರನಾದ ಉಷೋದಯಗಳು ಗಣನಾತೀತವಾಗಿಯೇ ಘಟಿಸಿವೆ. ಆದಿಯಲ್ಲಿ ಉದಯ–ಮಾನಳಾದಂತೆಯೇ ಅವಳು ಭವಿಷ್ಯದಲ್ಲಿಯೂ ಅದೇ ರೀತಿಯಾಗಿ ಉದಿತಗೊಳ್ಳುವಳು. ತನ್ನ ಈ ಪೂರ್ವದಲ್ಲಿ ಪ್ರಕಟಗೊಂಡವುಗಳೇ ಮತ್ತೆ ಮತ್ತೆ ಪುನರುದಯಗೊಳ್ಳುತ್ತ ವಿಕಾಸಕ್ಕೆ ಕಾರಣಳಾಗುತ್ತಾಳೆ. ತೇಜೋಮಯತೆಯಲ್ಲಿ ಕಾಂತಿಗೊಳ್ಳುವತ್ತ, ಬೆಳಗುತ್ತ ಅವಳು ನಿತ್ಯವೂ ಪ್ರಗತಿಯತ್ತ ಸಾಗುತ್ತಾಳೆ. ಇವಳನ್ನು ಅನುಸರಿಸುವದಷ್ಟೇ ಉಳಿದವರಿಗೆ ಇರುವ ಪಥವಾಗಿದೆ.

ತ್ರಿಃ ಅಸ್ಯ ತಾ ಪರಮಾ ಸಂತಿ ಸತ್ಯಾ (1)
ಸ್ಪಾರ್ಹಾ ದೇವಸ್ಯ ಜನಿಮಾನಿ ಅಗ್ನೇ (2)
ಅನಂತೇ ಅಂತಃ ಪರಿವೀತ (3)
ಆಗಾತ್ ಶುಚಿಃ ಶುಕ್ರೋ ಅರ್ಯೋ ರೋರುಚಾನಃ (4)

– ಋಗ್ವೇದ 4.1.7

ಈ ವಿಶ್ವದಲ್ಲಿ ಅಸ್ತಿತ್ವದಲ್ಲಿರುವ ಈ ಪರಮಾತಿಪರಮ ಶಕ್ತಿಗೆ ಮೂರು ವಿಧದ ಪರಮ ಜನ್ಮಗಳಿವೆ. ಆಯಾಮಗಳಿವೆ. ಇವು ಸತ್ಯಸ್ಯ ಸತ್ಯವಾಗಿವೆ; ಅಪೇಕ್ಷಣೀಯವಾಗಿಯೂ ಇವೆ. ಇವು ಅವಕಾಶದ ಸರ್ವವ್ಯಾಪ್ತತೆಯಲ್ಲಿಯೇ ಇರುವ ಶಾಶ್ವತದಲ್ಲಿ ಸ್ಥಿತಗೊಂಡಿವೆ. ಇವು ಸರ್ವಸ್ವವನ್ನೂ ವಿಶುದ್ಧಗೊಳಿಸುತ್ತಾ, ದೇದೀಪ್ಯಮಾನಗೊಳಿಸುತ್ತಾ (ಜಾಜ್ವಲ್ಯಮಾನಗೊಳಿಸುತ್ತಾ) ಕಾಂತಿಯುತಗೊಂಡು ನಮ್ಮೆಡೆಗೆ ಆಗಮಿಸಿದ್ದಾನೆ.

ಯೋ ಮರ್ತ್ಯೇಷು ಅಮೃತ ಋತಾವಾ (1)
ದೇವೋ ದೇವೇಷು ಅರತಿಃ ನಿಧಾಯಿ ಹೋತಾ (2)
ಯಜಿಷ್ಠೋ ಮಹಾನ್ ತುಚಧ್ಯೈ (3)
ಹವ್ಯೈಃ ಅಗ್ನಿಃ ಮನುಷ ಈರಯಧ್ಯೈ (4)

– ಋಗ್ವೇದ 4.2.1

ಮರ್ತ್ಯ ಸ್ವರೂಪವನ್ನು ಹೊಂದಿರುವವರಲ್ಲಿ ಇವನು ಅಮೃತ ಸ್ವರೂಪನಾಗಿದ್ದಾನೆ; ನಿರಂತರನಾಗಿದ್ದಾನೆ. ಹೀಗಾಗಿಯೇ ಋತದ ಮೇಲೆ ಇವನಿಗೆ ಅಧಿಕಾರ ಪ್ರಾಪ್ತಿಯಿದೆ. ದೇವಾನುದೇವತೆಗಳಿಗೂ ಅಧಿದೇವತೆಯಾಗಿದ್ದಾನೆ (ಹೋತಾರ). ಅವನು ತನ್ನ ದಿವ್ಯಶಕ್ತಿಯನ್ನು ನಮ್ಮಲ್ಲಿ ಸಕ್ರಿಯಗೊಳಿಸುತ್ತಾ

ನಮ್ಮನ್ನೂ ಸಶಕ್ತರನ್ನಾಗಿಸುವ ಸಲುವಾಗಿಯೇ ನಮ್ಮ ಅಂತರಂಗದಲ್ಲಿಯೇ ಪ್ರತಿಷ್ಠಿತನಾಗಿದ್ದಾನೆ. ಅವನು ಯಜ್ಞದ ಅಗ್ನಿಯಾಗಿದ್ದಾನೆ. ಅದಕ್ಕಾಗಿ ಹೇ ಅಗ್ನಿಯೇ ನೀನು ನಮ್ಮಲ್ಲಿ ಜಾಗ್ರತನಾಗು, ನಮ್ಮನ್ನೂ ಜಾಗ್ರತಗೊಳಿಸು.

ಊರ್ಧ್ವೋ ಭವ (1) ಪ್ರತಿ ವಿಧ್ಯ ಅಧಿ (2)
ಅಸತ್ ಆವಿ ಕೃಣುಷ್ವ ದೈವ್ಯಾನಿ ಅಗ್ನೇ (3)
ಅವ ಸ್ಥಿರಾ ತನುಹಿ ಯಾತುಜೂನಾಂ (4)
ಜಾಮಿಮ್ ಅಜಾಮಿಂ ಪ್ರ ಮೃಣೀಹಿ ಶತ್ರೂನ್ (5)
– ಋಗ್ವೇದ 4.4.5 [ವಾಮದೇವ ಗೌತಮ]

ಅದಕ್ಕಾಗಿ ನಿತ್ಯವೂ ಊರ್ಧ್ವಗಾಮಿಯಾಗು; ಓ ಅಗ್ನಿಯೇ ಆವರಣ–ಗೊಂಡಿರುವ ಈ ಗವಸನ್ನು ಕತ್ತರಿಸಿ ಮೇಲೇರು, ವಿರೋಧಿಸುತ್ತಿರುವ ಅಂಶಗಳು ಎಷ್ಟೇ ಇರಲಿ, ಅವುಗಳನ್ನು ನಿವಾರಿಸು.. ನಮ್ಮ ಅಂತರಂಗದಲ್ಲಿರುವ ದಿವ್ಯತ್ವವನ್ನು ಪ್ರಕಾಶನಗೊಳಿಸು.

ವಿಕಾಸದ ಪಥದಲ್ಲಿ ಮಾನವನ ಮನಸ್ಸು ಈ ಘಟಿತ ಕಾಲಾವಧಿಯಲ್ಲಿ ಮನ–ಬುದ್ಧಿ–ಪ್ರಜ್ಞೆ–ಚಿತ್ತದ ಎಲ್ಲ ಆಯಾಮಗಳಲ್ಲಿಯೂ ವಿಕಾಸಗೊಳ್ಳುತ್ತಲೇ ಬಂದಿದೆ. ಕಾಲಮಾನದ ಗಣನಾಕ್ರಮಾಂಕದಲ್ಲಿಯೇ ಪರಿಗಣಿಸಿದರೂ ಐದಾರು ಸಾವಿರ ವರ್ಷಗಳ ಹಿಂದೆ ರಚಿತಗೊಂಡಿರುವ (ಆ ರೀತಿ ಭಾವಿಸಲಾಗುತ್ತಿರುವ) ಈ ಋಕ್ ಸಾಲುಗಳು, ಮಾನವನ ಅಭೀಪ್ಸೆಯ ಉಗಮವನ್ನು ಹಾಗೂ ಅದು ಸಾಧಿಸಿಕೊಂಡಿರುವ ಪ್ರಗತಿಯನ್ನು ಸ್ಪಷ್ಟವಾಗಿಯೇ ದೃಷ್ಟಾಂತಗೊಳಿಸುತ್ತಿದೆ. ಈ ಮೇಲ್ಕಂಡ ಋಕ್ ಗಳಲ್ಲಿ ಹೇಳಲ್ಪಟ್ಟಿರುವ ಪ್ರಕಾರ ಉಷೆಯು ಸದಾ ನವೀನತೆಯು ಸ್ಥಾಪಿತಗೊಳ್ಳಲಿ ಎಂದೇ ಪಯಣದಲ್ಲಿರುತ್ತಾಳೆ. ಹೀಗಾಗಿ, ಇಲ್ಲಿ ಉಷಾ ಎನ್ನುವದನ್ನು ಸದಾ ಜಾಗ್ರತವಾಗಿರುವ ಮನೋಧರ್ಮ ಎಂದು ಅರಿತುಕೊಂಡಲ್ಲಿ, ಇಲ್ಲಿ ಶ್ರೀ ಅರವಿಂದರು ಅಭಿವ್ಯಕ್ತಿಸುತ್ತಿರುವ “ಮಾನವನ ಅಭೀಪ್ಸೆ” ಏನಿದೆ ಎಂದು ಸಂವಹನಗೊಳ್ಳುವದು. ಈ ರೀತಿಯ ವಿಕಾಸವು ನಿತ್ಯ–ನಿರಂತರವಾದದ್ದು. ಪರಿಪೂರ್ಣಗೊಳ್ಳುವ ಹಂತದಲ್ಲಿಯೇ ಅದು ಚಲಿಸುತ್ತಿರುತ್ತದೆ.

ಆದರೆ ಅದು ನಿಯತಿಯ ಅನುಗುಣವಾಗಿ ಪರಿಪಕ್ವ ಪರಿಪೂರ್ಣತೆಯನ್ನು ಪಡೆದುಕೊಳ್ಳುವದು, ಸದ್ಯದ ಮಾನವನ ಅಭೀಪ್ಸೆಯಾಗಬೇಕು ಎನ್ನುವದನ್ನು, ಅದು ಸಾಗಿ ಬಂದ ಎಲ್ಲ ಅಯಾಮಗಳನ್ನೂ ಇಲ್ಲಿ ಆಧಾರವಾಗಿರಿಸಿಕೊಂಡೇ

ಶ್ರೀಅರವಿಂದರು ತಮ್ಮ 'ದಿವ್ಯ ಜೀವನ'ದಲ್ಲಿ ಪ್ರಪ್ರಥಮವಾಗಿ 'ಮಾನವನ ಅಭೀಪ್ಸೆ'ಯ ಕುರಿತು ವಿವರಣೆಗಳನ್ನು ನೀಡಿದ್ದಾರೆ. ಇದರ ಬೀಜಸ್ವರೂಪವನ್ನು ಈ 'ಅಹಾನಾ' ಕಾವ್ಯದಲ್ಲಿ ಕಾಣಬಹುದು.

**ಉಷೆ ಬಂದಳೀಗ** ಅವಕಾಶದಲ್ಲಿ ವೈರಂಭಣ ಪವನವಾಗಿ
To a space she came of soft and delicate air
(Savitri: Book V, Canto I, p 389)

ನಿರ್ಗುಣದ ಘನದ ನಿರ್ಮಾಯ ಮೌನ ಮಾರ್ದವದ ಸುಪ್ತಿಯೆಡೆಗೆ
ಅನಾಹತದಲ್ಲಿ ಮಂದ್ರ–ಮಂದ್ರದಲಿ ಸ್ಪಂದನವ ತಂದು ಎದೆಗೆ
ಸೂಕ್ಷ್ಮಾತಿಸೂಕ್ಷ್ಮ ಮೃದು ಮಧುರ ಹಿತದಿ ನವಿರಿನಲಿ ಕಾಂತಿಯಾಗಿ
ಉಷೆ ಬಂದಳೀಗ ಅವಕಾಶದಲ್ಲಿ ವೈರಂಭಣ ಪವನವಾಗಿ. ॥5–1॥

**ಟಿಪ್ಪಣಿ:** ವೈರಂಭಣ ವಾಯು ಎಂದರೆ ಸೂಕ್ಷ್ಮ ಆಕಾರದಿಂದ ಪ್ರಕೃತಿಯನು ಜಾಗೃತಗೊಳಿಸಿ, ಪ್ರೇಮಸೂತ್ರದ ಶ್ರದ್ಧೆಯನ್ನು ನೆಲೆಗೊಳಿಸುವ ವಾಯು. ದಶವಾಯುಗಳಲ್ಲಿ ಒಂದು ವಾಯು.

ಇದೇ ವಿಷಯವನ್ನು ಅಲ್ಲಮಪ್ರಭು ಹೀಗೆ ಬರೆಯುತ್ತಾನೆ;

ವಾಯು ನಿದ್ರೆಗೈದೊಡೆ ಆಕಾಶ ಜೋಗುಳವಾಡಿತ್ತು
ಬಯಲು ಬಳಲಿದೆನೆಂದಡೆ ನಿರಾಳ ಮೊಲೆಯೂಡಿತ್ತು
ಆಕಾಶವಡಗಿತ್ತು ಜೋಗುಳವು ನಿಂದಿತ್ತು
ಗುಹೇಶ್ವರನೈದಾನೆ ಇಲ್ಲದಂತೆ

[ಅಲ್ಲಮನ ವಚನಗಳು 668]

# ಯುವಚೇತನಗಳಿಗೆ "ಶ್ರೀ ಅರವಿಂದರು"

**– ಅನುವಾದ: ಪುಟ್ಟು ಕುಲಕರ್ಣಿ**



(ಶ್ರೀ ಅರವಿಂದರ ಅಭಿವ್ಯಕ್ತಿಗಳೆಲ್ಲವೂ ಗಂಭೀರತೆಯ ಉತ್ತುಂಗದಲ್ಲಿಯೇ ಇದ್ದು, ಅದೂ ಆಧ್ಯಾತ್ಮದ ವಿಷಯದಲ್ಲಿಯೂ ಸಹಿತ ತುಂಬ ಗಂಭೀರವಾದ ಅಧ್ಯಯನವನ್ನು ಅಪೇಕ್ಷಿಸುತ್ತದೆ ಎನ್ನುವದು ಸತ್ಯವಾದರೂ, ಅವರ ಜೀವನದ ಗಾಥೆಯನ್ನು, ಬಾಲಕರು ಮತ್ತು ಯುವಚೇತನದ ವಲಯವೂ ಸ್ಪಂದಿಸುವಂತೆ, ಸರಳ ಭಾಷೆಯಲ್ಲಿ – ಅದೂ ಹದಿಹರೆಯದವರಿಗೆ ಕಥೆಯನ್ನು ಹೇಳುವ ರೀತಿಯಲ್ಲಿ – ಇಲ್ಲಿ ಶ್ರೀ ಅರವಿಂದರ ಜೀವನದ ಕಥಾನಕವನ್ನು ಪ್ರಾರಂಭಿಸಲಾಗುತ್ತಿದೆ. ಇದು ಮೂಲ ಗುಜರಾತಿ ಭಾಷೆಯಲ್ಲಿ ರಚಿತವಾಗಿರುವ 'ಶ್ರೀ ಅರವಿಂದಾಯಣ'ವನ್ನು ಆಧರಿಸಿ, ಇಂಗ್ಲೀಷಿನಲ್ಲಿ ಅಗಸ್ಟ 15, 1972 (ಶ್ರೀ ಅರವಿಂದರ ಜನ್ಮ ಶತಮಾನೋತ್ಸದ ಸಂದರ್ಭ)ದಲ್ಲಿ ಪಾಂಡಿಚೇರಿಯಿಂದ ಪ್ರಕಾಶನಗೊಂಡಿದೆ. ಮತ್ತೆ 2019ರ ಸಮಯಕ್ಕೆ ಇದರ ಐದನೇ ಮುದ್ರಣವೂ ಇದರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಈ ತಿಂಗಳಿಂದ ಶ್ರೀ ಅರವಿಂದರ ಜೀವನದ ಕಥಾನಕವು ಪ್ರತಿ ತಿಂಗಳೂ ಪ್ರಕಾಶನಗೊಳ್ಳಲಿದೆ. ಇಲ್ಲಿ ಶಾಲಾಮಕ್ಕಳ ಸಂವಹನಕ್ಕಾಗಿ ಅವಶ್ಯವಿರುವ ಭಾಷಾ ಸ್ವರೂಪದಲ್ಲಿ ಕನ್ನಡದಲ್ಲಿಯೂ ರೂಪಿಸುವ ಪ್ರಯತ್ನವಿದೆ. [ಸಂ])

## ಅಗಸ್ಟ 15, 1972

ಇದು ಶ್ರೀ ಅರವಿಂದರ ಜನ್ಮಶತಾಬ್ದಿಯ ಸುಸಮಯವಾಗಿದೆ. ಇದರ ಜೊತೆಗೆ ಇದು ಸ್ವತಂತ್ರ ಭಾರತದ ರಜತ ಮಹೋತ್ಸವದ ವರ್ಷವೂ ಆಗಿದೆ. ಹೀಗಾಗಿ ನಾವು ಈ ದಿನದಂದು ಎರಡು ಪ್ರಮುಖ ಸಂಗತಿಗಳನ್ನು ಆಚರಿಸುತ್ತಿದ್ದೇವೆ. ಸ್ವತಂತ್ರ ಭಾರತವು ಜನಿಸಿದ್ದು ಅಗಸ್ಟ 15, 1947 ರಂದು. ಅದೇ ರೀತಿ ಶ್ರೀ ಅರವಿಂದರ ಜನನವೂ ಅಗಸ್ಟ 15, 1872. ಇವೆರಡೂ ದಿನಗಳು ಒಂದೇ ಆಗಿರುವದು ಒಂದು ಆಶ್ಚರ್ಯಕಾರಿ ಸಂಗತಿಯಾಗಿದೆಯಲ್ಲವೇ? ಹೌದು, ಖಂಡಿತವಾಗಿಯೂ ಅಚ್ಚರಿಯ ಸಂಗತಿಯೇ ಆಗಿದೆ. ಆದರೆ ಇದೊಂದು ಅಚ್ಚರಿಯ ಸಂಗತಿ ಏನೂ ಅಲ್ಲ ಎಂದೂ ಹೇಳಬಹುದು.

ಏಕೆಂದರೆ, ಶ್ರೀ ಅರವಿಂದರು ಸೆರೆಮನೆಯ ವಾಸದಲ್ಲಿದ್ದಾಗ, ಅವರು ಶ್ರೀಕೃಷ್ಣ ಪರಮಾತ್ಮನ ಧ್ವನಿಯನ್ನು ಆಲಿಸಿದ್ದರು. ಆಗ ಶ್ರೀ ಕೃಷ್ಣನು ಅವರಿಗೆ ಹೇಳಿದ್ದೇನೆಂದರೆ, **'ನಾನಿದೋ ಈ ರಾಷ್ಟ್ರವನ್ನು ಜಾಗ್ರತಗೊಳಿಸುತ್ತಿದ್ದೇನೆ, ನನ್ನ ಧ್ವನಿಯನ್ನು ಆಲಿಸುವ ಸಲುವಾಗಿ... ಈ ನನ್ನ ವಾಣಿಯು ಲೋಕೋದ್ಧಾರಕ್ಕಾಗಿ ಇದೆ.. ಲೋಕವೆಲ್ಲವೂ ಜಾಗರಣಗೊಳ್ಳಬೇಕಾಗಿದೆ. ನಾನು ಅವರೆಲ್ಲರಿಗೂ ಸ್ವಾತಂತ್ರ್ಯವನ್ನು ಒದಗಿಸುತ್ತೇನೆ, ಆ ಮೂಲಕ ಅವರೆಲ್ಲರೂ ಈ ಲೋಕಕ್ಕಾಗಿ ಸೇವೆ ಸಲ್ಲಿಸುವಂತಾಗಲಿ.'**

ಇದೇ ಉಪದೇಶವನ್ನೇ ಭಗವದ್ಗೀತೆಯೂ ಸಹಿತ ಸದಾ ಉಲಿಯುತ್ತಿರುವದನ್ನು ನಮ್ಮ ಕರ್ಣಗಳು ಆಲಿಸುತ್ತಿವೆ. "ಸಂಭವಾಮಿ ಯುಗೇ ಯುಗೇ" ಎನ್ನುವ ಧ್ವನಿಯು ಸದಾ ಅನುರಣಿಸುತ್ತಿದೆ. ಇದೇ ವಿಷಯವನ್ನೇ ಶ್ರೀ ಅರವಿಂದರೂ ಸಹಿತ ಅಗಸ್ಟ 15, 1947ರ ತಮ್ಮ ಮಾತಿನಲ್ಲಿ, "ಇದೋ ನವಯುಗದ ಉದಯವಾಗುತ್ತಿದೆ... ಅದರ ಸಂಕೇತಗಳೆಲ್ಲವೂ ಗೋಚರಿಸುತ್ತಿವೆ..., ಈ ನೂತನ ಲೋಕಕ್ಕಾಗಿ ನಾವೆಲ್ಲ ಕರ್ತವ್ಯ ಮಾಡುವ ಸಲುವಾಗಿಯೇ ರೂಪಿತಗೊಂಡ ಒಂದು ಪ್ರಮುಖ ದಿನವನ್ನಾಗಿ ರೂಪಿಸಿಕೊಳ್ಳೋಣ."

ಇಂತಹ ಅಪರೂಪದ ಎರಡು ಘಟನೆಗಳು ಒಂದೇ ದಿನವೇ ಘಟಿಸುತ್ತಿವೆ. ಇದು ಖಚಿತವಾಗಿಯೂ ಶ್ರೀ ಅರವಿಂದರ ಅಭಿವ್ಯಕ್ತಿಗಳ ಮೇಲೆ "ದೈವೀ ಕೃಪೆಯು ದೊರೆತು ತನ್ನ ಮುದ್ರೆಯನ್ನು ಒತ್ತಿದ ಪವಿತ್ರ ದಿನವಾಗಿದೆ." ಹೀಗಾಗಿಯೇ ಇದು ಪ್ರತಿ ವರ್ಷವೂ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ನಾವೆಲ್ಲ ಮಕ್ಕಳು, ಈ ಸಂಗತಿಯನ್ನು ನೆನಪಿನಲ್ಲಿ ಇಟ್ಟುಕೊಂಡು ಶ್ರೀ ಅರವಿಂದರ ಜೀವನ ಕಥಾನಕವನ್ನು ಅಭ್ಯಾಸ ಮಾಡೋಣ.

# ಅಧ್ಯಾಯ 1

## ಬಾಲ್ಯ

ಸರಿಯಾಗಿ ನೂರೈವತ್ತು ವರ್ಷದ ಹಿಂದಿನ ಘಟನೆಯಿಂದಲೇ ಈ ಕಥೆಯನ್ನು ಪ್ರಾರಂಭಿಸೋಣ. ಅದು ಕಾಲಗಣನೆಯಲ್ಲಿ ಕ್ರಿ.ಶ. 1869. ಅವರೆಲ್ಲರೂ ವಾಸಿಸುತ್ತಿದ್ದದ್ದು, ಆಗಿನ ಬೆಂಗಾಲ. ಅಲ್ಲಿ ಒಬ್ಬ ತರುಣ ಡಾಕ್ಟರ್ ಸೇವೆ ಸಲ್ಲಿಸುತ್ತಿದ್ದರು. ಅವರು ಸಹೃದಯಿಗಳೂ ಆಗಿದ್ದರು. ತುಂಬಾ ಜನಾನುರಾಗಿಯೂ ಆಗಿದ್ದರು. ಕಲಕತ್ತಾ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಅಭ್ಯಾಸವನ್ನು ಮಾಡಿ, ಮುಂದೆ ಉನ್ನತ ಅಧ್ಯಯನಕ್ಕಾಗಿ ಇಂಗ್ಲಂಡಿಗೂ ತೆರಳಿ, ಅಲ್ಲಿಂದ ಪದವಿಯನ್ನು ಪಡೆದುಕೊಂಡಿದ್ದರು. ಆದರೆ ಆ ದಿನಗಳಲ್ಲಿ, ಸಮುದ್ರ ಪ್ರಯಾಣವನ್ನು ಪಾಪವೆಂದು ಭಾವಿಸಲಾಗಿತ್ತು. ಭಾರತ ದೇಶದಲ್ಲಿ ಇದನ್ನು ಒಂದು ಅಪರಾಧವೆಂದು ತಿಳಿದಿದ್ದರು. ಕಣ್ತಪ್ಪಿಸಿ ಸಮುದ್ರ ಪ್ರಯಾಣ ಮಾಡುತ್ತಿದ್ದವರನು ಶಿಕ್ಷೆಗೆ ಒಳಪಡಿಸಲಾಗುತ್ತಿತ್ತು. ಸಮಾಜದಿಂದ ಬಹಿಷ್ಕರಿಸಲಾಗುತ್ತಿತ್ತು. ಆದರೆ ಇದೆಲ್ಲವನ್ನೂ ವಿರೋಧಿಸಿ, ಎದುರಿಸಿಯೂ ಧೀರೋದ್ದಾತರಾದವರಲ್ಲಿ ಈ ಡಾಕ್ಟರ್ ಕೂಡ ಒಬ್ಬರು. ಎಲ್ಲವನ್ನೂ ಎದುರಿಸಿಯೇ ಸಮುದ್ರ ಪ್ರಯಾಣ ಮಾಡಿ ವಿದೇಶಕ್ಕೆ ಹೋದರು!

ಎರಡು ವರ್ಷಗಳ ನಂತರ. ಇಂಗ್ಲಂಡ ದೇಶದ ಎಂ.ಡಿ. ಪದವಿಯೊಂದಿಗೆ ಕಲಕತ್ತೆಗೆ ಅವರು ಹಿಂದಿರುಗಿ ಬಂದರು. ಆ ಹೊತ್ತಿಗೆ ಅವರು ಅಡಿಯಿಂದ ಮುಡಿಯವರೆಗೂ ಸಂಪೂರ್ಣವಾಗಿ ಪಾಶ್ಚಾತ್ಯರೇ ಆಗಿ ಪರಿವರ್ತಿತರಾಗಿದ್ದರು. ಧರಿಸುತ್ತಿದ್ದ ಬಟ್ಟೆಗಳು, ನಡೆದುಕೊಳ್ಳುತ್ತಿದ್ದ ರೀತಿ–ರಿವಾಜುಗಳು, ಒಟ್ಟಿನಲ್ಲಿ ಜೀವನದ ಪ್ರತಿಯೊಂದು ಘಳಿಗೆಯಲ್ಲೂ ಸಂಪೂರ್ಣವಾಗಿ ಆಂಗ್ಲಮಯವಾಗಿದ್ದರು. ಇವರ ಹೆಸರೇ ಡಾಕ್ಟರ್ ಕೃಷ್ಣಧನ ಘೋಷ. ಅವರ ಹತ್ತೊಂಬತ್ತನೇ ವಯಸ್ಸಿನಲ್ಲಿ ಸ್ವರ್ಣಲತಾ ಸಂಗಡ ಅವರ ಮದುವೆಯಾಯಿತು. ಸ್ವರ್ಣಲತಾ ಅತ್ಯಂತ ಸುಂದರರಾಗಿದ್ದರು. ಆಕರ್ಷಕವಾಗಿದ್ದರು. ಹೀಗಾಗಿ ಅವರನ್ನು 'ರಂಗಾಪೂರದ ಗುಲಾಬಿ ಪುಷ್ಪ'ವೆಂದು ಡಾ॥ ಕೃಷ್ಣಧನರ ಇಂಗ್ಲೀಷ ಮಿತ್ರರು ಕರೆಯುತ್ತಿದ್ದರು. ಸ್ವರ್ಣಲತಾ ಅವರ ತಂದೆ ರಾಜನಾರಾಯಣ ಭೋಸ. ಇವರು ದೇವಘರದ ನಿವಾಸಿಯಾಗಿದ್ದರು.

ಡಾ॥ ಕೃಷ್ಣಧನ ಘೋಷ ಅವರು ಸಿವಿಲ್ ಸರ್ಜನ್ ಆಗಿ ಖುಲಾನಾ ಮತ್ತು ರಂಗಾಪೂರಗಳಲ್ಲಿ ಕಾರ್ಯ ನಿರ್ವಹಿಸಿದರು. ಇದೀಗ ಇವೆರಡೂ ಪಟ್ಟಣಗಳು ಬಾಂಗ್ಲಾ ದೇಶದಲ್ಲಿವೆ.

**ವಿಚಿತ್ರವಾದ ಹವ್ಯಾಸ**

ಇಂಗ್ಲಂಡಿನಿಂದ ಹಿಂದಿರುಗಿ ಬಂದ ಡಾ॥ ಕೃಷ್ಣಧನ ಘೋಷರಿಗೆ ವಿಚಿತ್ರವಾದ ಹವ್ಯಾಸವನ್ನು ರೂಪಿಸಿಕೊಂಡಿದ್ದರು. ಆ ಹವ್ಯಾಸವು ಬಹುತೇಕವಾಗಿ ಉನ್ಮಾದದಂತೆಯೇ ಇತ್ತು. ಪ್ರತಿಯೊಬ್ಬನೂ ಇಂಗ್ಲಂಡಿನ ಪದ್ಧತಿಯಲ್ಲಿಯೇ ಜೀವಿಸಬೇಕು ಎನ್ನುವ ಕಲ್ಪನೆ ಅವರದಾಗಿತ್ತು. ಅವರು ಎಷ್ಟೊಂದು ಈ ಇಂಗ್ಲಂಡ ಶೈಲಿಯನ್ನು ಅಳವಡಿಸಿಕೊಂಡಿದ್ದರು ಎಂದರೆ, ಭಾರತೀಯ ಪದ್ಧತಿಯ ಯಾವುದೇ ಸಂಗತಿಯನ್ನೂ ಮೆಚ್ಚುತ್ತಿರಲಿಲ್ಲ.; ಭಾರತೀಯ ಪದ್ಧತಿಯ ಜೀವನಶೈಲಿಯನ್ನೂ ಪಾಲಿಸಲಿಲ್ಲ, ಮತ್ತೆ ಭಾರತೀಯ ಶಿಕ್ಷಣವನ್ನೂ ಸಹಿತ ಆದರದಿಂದ ನೋಡಲಿಲ್ಲ. ದೇವರನ್ನೂ ಸಹಿತ ನಂಬುತ್ತಿರಲಿಲ್ಲ. ಅವರ ವಿಚಾರಗಳ ಪ್ರಕಾರ ಭಾರತೀಯವಾದದ್ದು ಎಲ್ಲವೂ ಕೆಟ್ಟದ್ದೇ ಆಗಿತ್ತು. ಆದರೆ ಇಂಗ್ಲೀಷಿನವರು ಮಾಡಿದ್ದು ಎಲ್ಲವೂ ಅವರಿಗೆ ಸಂತಸದ ವಿಷಯವಾಗಿತ್ತು! ಭಾರತದ ಯಾವುದೇ ಸಂಗತಿಯೂ ಅವರಿಗೆ ಸಂತೋಷದಾಯಕವಾಗಿರಲಿಲ್ಲ, ಹೌದು, ಭಾರತದ ಯಾವ ಸಂಗತಿಯೂ ಅವರಿಗೆ ಹಿಡಿಸುತ್ತಿರಲಿಲ್ಲ. ಇದು ಅವರ ಒಟ್ಟೂ ಜೀವನವಾಗಿತ್ತು.

ಆದರೆ, ಸದಾ ಗೂಡಿನೊಳಗೇ ಝೇಂಕರಿಸುತ್ತಿರುವ ಗುನುಗುಟ್ಟುತ್ತಿರುವ ಜೇನುನೊಣವು ಏನನ್ನು ತಾನೆ ಹೇಳಬಹುದು? ಬಹುತೇಕವಾಗಿ ಇಡೀ ದೇಶದ ವ್ಯವಸ್ಥೆಯೇ ಅಂತಹ ಆಲೋಚನೆಯಲ್ಲಿ ಮುಳುಗಿತ್ತು. ಹೀಗಾಗಿ ಈ ರೀತಿಯಲ್ಲಿ ಇಂಗ್ಲಂಡ್ ಶೈಲಿಯನ್ನು ಆರಾಧಿಸುತ್ತಿರುವವರು ಇವರೊಬ್ಬರೇ ಆಗಿರಲಿಲ್ಲ. ಆಗಿನ ಪರಿಸ್ಥಿತಿಯೇ ಹಾಗಿತ್ತು. ಆ ಕಾಲವೇ ಆ ರೀತಿಯ ಯೋಚನೆಯಲ್ಲಿ ಮುಳುಗಿತ್ತು.

ಇದನ್ನೇ ಆ ಸಮಯದಲ್ಲಿ, ಅಂದರೆ ಭಾರತವು ಬ್ರಿಟೀಶ ಆಡಳಿತದಲ್ಲಿ ಬಳಲುತ್ತಿರುವಾಗ, ಬರೆದು ದಾಖಲಿಸಿದ ಕವಿಗಳು, "ಪುನಃ ಜಾಗ್ರತಗೊಳ್ಳು, ಓ ಹಿಂದೂಸ್ಥಾನವೇ!". ಇದನ್ನು ಕೇಳಿದ ಡಾ॥ ಕೃಷ್ಣಧನ ಘೋಷರು ಅದರ ಕುರಿತು ಟೀಕೆಯನ್ನು ಮಾಡುತ್ತಿದ್ದರು. ಈ ವಿಷಯವನ್ನು ಶ್ರೀ ಅರವಿಂದರು ಒಮ್ಮೆ 'ನಮ್ಮ ತಂದೆ ಪ್ರಚಂಡ ನಾಸ್ತಿಕರಾಗಿದ್ದರು' ಎಂದು ಹೇಳಿದ್ದಾರೆ.

ಇಂತಹ ಪ್ರಚಂಡ ನಾಸ್ತಿಕ ಸ್ವಭಾವವನ್ನು ಹೊಂದಿದ್ದ ಹಾಗೂ ಭಾರತೀಯ ಮನೋಭಾವದ ಮೂರ್ತರೂಪವಾಗಿದ್ದ ಸ್ವರ್ಣಲತಾ ಇವರಿಗೆ ಐದು ಜನ ಮಕ್ಕಳು. ವಿನಯಭೂಷಣ. ಮನಮೋಹನ, ಅರವಿಂದ, ಸರೋಜಿನಿ ಮತ್ತು ಬರೀಂದ್ರ ಎಂದು ಅವರ ಹೆಸರು.

## ನಾಮಕರಣ

ಡಾ॥ ಕೃಷ್ಣಧನ ಮತ್ತು ಸ್ವರ್ಣಲತಾ ದಂಪತಿಗಳ ಮೂರನೇ ಪುತ್ರನೇ ಶ್ರೀ ಅರವಿಂದ. ಇವರ ಜನನವಾದದ್ದು ಅಗಸ್ಟ 15, 1872 ರಂದು. ಇವರನ್ನು ಪ್ರೀತಿಯಿಂದ 'ಅರೋ' ಎಂದು ಕರೆಯುತ್ತಿದ್ದರು. ಅರವಿಂದ ಎಂದರೆ ಕಮಲ. ಇದು ಸೌಂದರ್ಯದ ಸಂಕೇತವಾಗಿದೆ. ದಿವ್ಯತ್ವದ ಸಂಕೇತವೂ ಆಗಿದೆ. ಈ ಕಮಲ ಪುಷ್ಪದ ಹಾಗೆಯೇ ಅರವಿಂದರೂ ಸಹಿತ ಸೌಮ್ಯವಾಗಿ, ನಾಜೂಕುತನದಿಂದ, ಕೊಂಚಮಟ್ಟಿಗೆ ನಾಚಿಕೆಯ ಸ್ವಭಾವದ ಮಗುವಾಗಿದ್ದರು. ಅವರ ಮಾತೂ ಸಹಿತ ಮೌನವಾಗಿಯೇ ಶಾಂತವಾಗಿಯೇ ಇತ್ತು. ಅವರ ಕಣ್ಣುಗಳ ಕಾಂತಿಯೂ ಅದ್ಭುತದ ತೇಜದಿಂದ ತುಂಬಿತ್ತು. ಮನೆಯ ಎಲ್ಲ ವಾತಾವರಣದಿಂದಲೂ ದೂರವಾಗಿಯೇ ಉಳಿಯುವ, ತನ್ನಲ್ಲಿಯೇ ತಾನು ಇರುವ ಮಗುವಾಗಿ ಎಲ್ಲರಿಗೂ ನೆನಪಿನಲ್ಲಿದ್ದರು.

## ವಿದ್ಯಾರಂಭ

ಅರವಿಂದರಿಗೆ ಐದು ವರ್ಷವಾದಾಗ, ಇವರಿಗೆ ಕೊಡಬೇಕಾದ ಶಿಕ್ಷಣದ ಬಗೆಗೆ ಸಮಸ್ಯೆ ತಲೆದೋರಿತು. ಯಾವುದೇ ಕಾರಣಕ್ಕೂ ಬಂಗಾಲೀ ನ್ಯಾಷನಲ್ ಸ್ಕೂಲಿಗೆ ಅವರನ್ನು ಕಳಿಸಲು ಸಾಧ್ಯವೇ ಇರಲಿಲ್ಲ. ಡಾ॥ ಕೃಷ್ಣಧನ ಘೋಷರ ಪದ್ಧತಿಯಂತೂ ಎಲ್ಲರಿಗೂ ತಿಳಿದೇ ಇತ್ತು. ಹೀಗಾಗಿ ವಿನಯ, ಮನಮೋಹನ ಮತ್ತು ಅರವಿಂದರನ್ನು ಡಾರ್ಜಿಲಿಂಗ್‌ಗೆ ಕಳಿಸಲಾಯಿತು. ಅಲ್ಲಿ ಬ್ರಿಟೀಶ ಮಕ್ಕಳಿಗಾಗಿಯೇ ಒಂದು ಶಾಲೆ ಇತ್ತು. ಅಲ್ಲಿ ಮಾತ್ರ ಅವರು ಇಂಗ್ಲೀಷ ಕಲಿಯಲು ಸೌಲಭ್ಯವಿತ್ತು. ಹೀಗಾಗಿ ಅರವಿಂದರು ಆ ಇಂಗ್ಲೀಷ ಮಕ್ಕಳ ಸಂಗಡವೇ ಬೆಳೆಯಬೇಕಾಯಿತು. ಇಂಗ್ಲೀಷನಲ್ಲಿಯೇ ಅಂತರಾರ್ಥವನ್ನು ಮಾಡಿಕೊಳ್ಳಬೇಕಾಯಿತು. ಆರ್ಯ ಸಂಸ್ಕೃತಿಗೆ ಸಂಬಂಧಿಸಿದ ಯಾವುದೇ ಅಂಶದ ನೆರಳೂ ಇಲ್ಲಿ ಸುಳಿಯುವಂತಿರಲಿಲ್ಲ. ಹೀಗಾಗಿ ಒಟ್ಟಿನಲ್ಲಿ ಆದ ಫಲಿತಾಂಶವಾದರೂ ಏನು? ಅರವಿಂದರಿಗೆ ಅವರದೇ ಮಾತೃಭಾಷೆಯಾದ ಬಂಗಾಲೀ ಭಾಷೆ ಗೊತ್ತಾಗಲೇ ಇಲ್ಲ. ಭಾರತೀಯ ಸಂಸ್ಕೃತಿಯ ಪರಿಚಯವೂ ಆಗಲಿಲ್ಲ. ಭಾರತೀಯ ಚಿಂತನೆಯಾಗಲೀ ಅಥವಾ ಭಾರತೀಯ ಪದ್ಧತಿಗಳಾಗಲೀ, ಗೊತ್ತಾಗಲೇ ಇಲ್ಲ.

ಈ ರೀತಿಯಲ್ಲಿ ಡಾರ್ಜಿಲಿಂಗದಲ್ಲಿ ಎರಡು ವರ್ಷಗಳ ಕಲಿಕೆ ಮುಗಿದ ನಂತರದಲ್ಲಿ, ಇವರ ಪಾಲಕರು, ಇವರನ್ನು ಇಂಗ್ಲಂಡಿಗೆ ಕರೆದೊಯ್ಯುತ್ತಾರೆ. ಮುಂದಿನ ಶಿಕ್ಷಣವನ್ನು ಇಂಗ್ಲಂಡದಲ್ಲಿಯೇ ಪೂರೈಸುವಂತೆ ಏರ್ಪಾಟು ಮಾಡುತ್ತಾರೆ. ಆಗ ಅರವಿಂದರ ವಯಸ್ಸು ಕೇವಲ ಏಳು. ಹೀಗಾಗಿ, ಅವರ ಬಾಲ್ಯದಿಂದಲೇ ಅವರು ತಮ್ಮ ಜನ್ಮಭೂಮಿಯಿಂದ ದೂರವೇ ಉಳಿಯುವಂತಾಯಿತು, ಮಾತೃಭಾಷೆಯಿಂದಲೂ ದೂರವಾಗುವಂತಾಯಿತು. ಮಾತೃಭೂಮಿಯ ಸಂಸ್ಕೃತಿ ಮತ್ತು ಜೀವನ ವಿಧಾನದಿಂದ ದೂರ ದೂರ ದೂರವೇ ಉಳಿಯುವಂತಾಯಿತು. ಎಲ್ಲದರಿಂದಲೂ ದೂರವಾಗಿ, ಏಕಾಕಿಯಾಗಿ, ಮೂಲನೆಲೆಯ ಸಂಪರ್ಕವನ್ನು ಕಳೆದುಕೊಂಡು ಇರುವ ಸ್ಥಿತಿಯಾಗಿತ್ತು. ಆದರೆ ಇದೇ ಅವರ ಜೀವನದ ಪ್ರಾರಂಭಿಕ ಅವಧಿಯ ಸ್ವರ್ಣಯುಗವೂ ಆಗಿದೆ. ಇದು ಅವರ ವಿದ್ಯಾಭ್ಯಾಸದ ದಿನಗಳಾಗಿದ್ದವು.

ಈ ಮೂವರೂ ಸಹೋದರರನ್ನು ಓರ್ವ ಆಂಗ್ಲ ಪಾದ್ರಿ ಕುಟುಂಬದ ಬಳಿ ಇರಿಸಲಾಯಿತು. ಯಾವುದೇ ಕಾರಣಕ್ಕೂ ಈ ಸಹೋದರರು, ಯಾವುದೇ ಭಾರತೀಯನನ್ನು ಭೇಟಿಯಾಗದ ಹಾಗೆ, ಕಟ್ಟುನಿಟ್ಟಿನಲ್ಲಿಯೇ ಇರುವಂತೆ ನೋಡಿಕೊಳ್ಳಲು ಈ ಪಾದ್ರಿ ಕುಟುಂಬಕ್ಕೆ ತಿಳಿಸಲಾಗಿತ್ತು. ಅಷ್ಟೇ ಅಲ್ಲದೇ ಭಾರತೀಯವಾದ ಯಾವುದೇ ವಿಷಯವೂ ಇವರಿಗೆ ದೊರಕದ ಹಾಗೆ ನೋಡಿಕೊಳ್ಳಲಾಯಿತು. ಇವರೆಲ್ಲರೂ ಸಂಪೂರ್ಣವಾಗಿ ಇಂಗ್ಲೀಷನವರಂತೆಯೇ ರೂಪುಗೊಳ್ಳಬೇಕೆಂದು ತಂದೆಯ ಇಚ್ಛೆಯಾಗಿತ್ತು.

ಈ ರೀತಿಯಲ್ಲಿ ಸಂಪೂರ್ಣವಾಗಿ ಇಂಗ್ಲೀಷಮಯವಾದ ವಾತಾವರಣದಲ್ಲಿಯೇ ಅರವಿಂದರು ಬಾಲ್ಯವನ್ನು ರೂಪಿಸಿಕೊಳ್ಳಬೇಕಾಯಿತು. ಈ ರೀತಿಯಲ್ಲಿ ಇವರ ವಿದ್ಯಾರಂಭವಾಯಿತು.

(ಸಶೇಷ)

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

**9**

## ಅಧ್ಯಾಯ – 8
## ಸಾಂಖ್ಯ ಮತ್ತು ಯೋಗ

ನಾವು ಹಿಂದಿನ ಅಧ್ಯಾಯದಲ್ಲಿ ನೋಡಿದಂತೆ, ಅರ್ಜುನನ ಪ್ರಶ್ನೆಗೆ ಶ್ರೀ ಕೃಷ್ಣನು ಮೊದಲು ಸಂಕ್ಷಿಪ್ತವಾಗಿ ಸಾಮಾನ್ಯ ದೃಷ್ಟಿ ಕೋನದಿಂದ ಉತ್ತರ ನೀಡಿದನು. ಆನಂತರ, ಈಗ ಆಳವಾದ, ಗಂಭೀರವಾದ ಆಧ್ಯಾತ್ಮಿಕ ದೃಷ್ಟಿಕೋನದಿಂದ ಪರಿಹಾರ ನೀಡಲು ಅತಿ ಪ್ರಮುಖವಾದ ವಿಷಯವನ್ನು ಕೈಗೆತ್ತಿಕೊಂಡನು. ಗೀತೆಯನ್ನು ಸರಿಯಾಗಿ ತಿಳಿದಕೊಳ್ಳಬೇಕಾದರೆ, ಶ್ರೀ ಕೃಷ್ಣನು ಹೇಳುವ ಸಾಂಖ್ಯ ಮತ್ತು ಯೋಗಗಳ ನಡುವಿನ ವ್ಯತ್ಯಾಸವನ್ನು ನಾವು ಬಹಳ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಶ್ರೀ ಕೃಷ್ಣನು ಬಹು ಸ್ಪಷ್ಟವಾದ ಮಾತುಗಳಲ್ಲಿ ಹೀಗೆ ಹೇಳುತ್ತಾನೆ, “ಅರ್ಜುನಾ, ನಾನು ಇದುವರೆಗೆ ಸಾಂಖ್ಯ ಬುದ್ಧಿವಾದವನ್ನು ಕುರಿತು ಹೇಳಿದ್ದೇನೆ (ವಸ್ತು, ವಿಷಯಗಳ ಸಂಕಲ್ಪವನ್ನು ಕುರಿತು ವಿವರಿಸಿದ್ದೇನೆ). ಈಗ ಯೋಗವನ್ನು, ಯೋಗಸ್ಥ ಬುದ್ಧಿಯನ್ನು ಕುರಿತು ಹೇಳುತ್ತೇನೆ. ಚೆನ್ನಾಗಿ ಕೇಳು. ಈ ಜ್ಞಾನದಿಂದ ನೀನು ಯೋಗಸ್ಥನಾದರೆ ಕರ್ಮಬಂಧಂ ಪ್ರಹಾಸ್ಯಸಿ. ಕರ್ಮಗಳ ಬಂಧನದಿಂದ ಸರ್ವಥಾ ಪಾರಾಗುವಿ” (2.39).

ಗೀತೆಯು ಮೂಲತಃ ವೇದಾಂತದ ಕೃತಿಯಾಗಿದೆ. ವೇದಾಂತವನ್ನು ಪ್ರತಿಪಾದಿಸುವ ಮೂರು ಸರ್ವಮಾನ್ಯ ಪ್ರಮಾಣ ಗ್ರಂಥಗಳಲ್ಲಿ ಗೀತೆ ಕೂಡ ಒಂದು. ವೇದ, ಉಪನಿಷತ್ತುಗಳಂತೆ ಗೀತೆಯನ್ನು ಅಪೌರುಷೇಯ ಎಂದೇನೂ ಹೇಳಿಲ್ಲ. ಅಪೌರುಷೇಯವೆಂದರೆ ಋಷಿಯ ಉಚ್ಚತಮ ಆಂತರಿಕ ಶಕ್ತಿದ್ವಾರಾ ಆದ ಸತ್ಯದ ಆವಿಷ್ಕಾರ. ಈಶ್ವರನೇ ಸ್ವತಃ ಅಂತರಾತ್ಮನಿಗೆ ಹೇಳುವ ಶಬ್ದ. ಗೀತೆಯನ್ನು ಇಂಥ ಅಂತಃಪ್ರೇರಿತ ಶಬ್ದವೆಂದೇನೂ ಹೇಳಿಲ್ಲ. ಗೀತೆಯು ಬಹಳಷ್ಟು ಬೌದ್ಧಿಕ, ತಾರ್ಕಿಕ, ತಾತ್ವಿಕ ವಿಷಯಗಳನ್ನು ಆಳವಾಗಿ ಚಿಂತಿಸುತ್ತದೆ; ಆದರೂ ಅದರ ಆಧಾರವು ಮಾತ್ರ ಪರಮ ಸತ್ಯವೇ ಆಗಿದೆ. ಗೀತೆಗೆ ಎಷ್ಟು ಗೌರವಾದರಗಳು ಪ್ರಾಪ್ತವಾಗಿದೆಯೆಂದರೆ, ಅದನ್ನು ಹದಿಮೂರನೆಯ

ಉಪನಿಷತ್ತೆಂದು ಮನ್ನಿಸಲಾಗುತ್ತದೆ. ಗೀತೆಯು ಹೇಳುವ ವೇದಾಂತವು ಅಧಿಕತಃ ಸಾಂಖ್ಯ ಹಾಗೂ ಯೋಗ ವಿಚಾರಗಳ ಬಣ್ಣವನ್ನೇ ಉದ್ದಕ್ಕೂ ಬಳಿದುಕೊಂಡಂತಿದೆ ಮತ್ತು ಇದರಿಂದಾಗಿ ಅದಕ್ಕೊಂದು ಸಮನ್ವಯಾತ್ಮಕ ಸ್ವರೂಪ ಬಂದಿದೆ. ನಿಜವಾಗಿ ಅದು ಯೋಗದ ಆಚಾರ ಸಂಹಿತೆಯಾಗಿದ್ದು ತಾತ್ವಿಕ ಕಲ್ಪನೆಗಳನ್ನು ಯೋಗದ ಪ್ರತಿಪಾದನೆಯಾಗಿ, ವಿವರಣೆಗಾಗಿ ಮಾತ್ರ ಬಳಸಿಕೊಳ್ಳುತ್ತದೆ. ಅದು ಬರೀ ವೇದಾಂತದ ಚರ್ಚೆಯಲ್ಲಿ ತೊಡಗದೇ, ಜ್ಞಾನ–ಕರ್ಮ ಮತ್ತು ಭಕ್ತಿಗಳನ್ನು ವಿವರಿಸಲು ತಾತ್ವಿಕ ವಿವೇಚನೆಯನ್ನು ಉಪಯೋಗಿಸಿಕೊಳ್ಳುತ್ತದೆ. ಜ್ಞಾನ–ಭಕ್ತಿ ಮತ್ತು ಕರ್ಮ ಇವುಗಳೇ ಗೀತೆಯ ಮುಖ್ಯ ಆಧಾರ, ಜ್ಞಾನ ಮತ್ತು ಭಕ್ತಿಗಳಿಗೆ ಕರ್ಮದ ಆಧಾರವನ್ನೊದಗಿಸುತ್ತ ಕರ್ಮವನ್ನು ಅದರ ಪೂರ್ಣಫಲವಾದ ಜ್ಞಾನಕ್ಕೆ ಎತ್ತರಿಸುತ್ತದೆ. ಈ ಜ್ಞಾನ ಮತ್ತು ಕರ್ಮಗಳಿಗೆ ಭಕ್ತಿಯೇ (ಪ್ರೇಮವೇ) ಹೃದಯ ಭಾಗ, ಸಾರ ಎಂದು ಹೇಳುತ್ತದೆ. ಯೋಗಕ್ಕೆ ಸಾಂಖ್ಯದ ವಿಶ್ಲೇಷಣಾತ್ಮಕ ತತ್ವಜ್ಞಾನವನ್ನು ಬೆರೆಸುತ್ತದೆ; ಹೀಗೆ ಯೋಗದ ಇಡೀ ಕ್ರಿಯೆಯನ್ನೇ ಸಮನ್ವಯಾತ್ಮಕದ ಆಧಾರದ ಮೇಲೆ ನಿಲ್ಲಿಸುತ್ತದೆ. ಗೀತೆಯ ಯೋಗವು ಆರಂಭವಾಗುವುದೇ ತತ್ವಜ್ಞಾನದ ಆಧಾರದ ಮೇಲೆ; ಅದರ ಆಚರಣೆಯು ಗೀತೆಯ ಯೋಗದ ಪ್ರಮುಖ ಅಂಗವಾಗಿದೆ; ಗೀತೆಯು ಸಾಂಖ್ಯ ಬುದ್ಧಿಯನ್ನು ಮೀರಿ ಮುಂದೆ ಹೋಗುತ್ತದೆ. ಸಾಂಖ್ಯದ ಅನೇಕ ಪ್ರವೃತ್ತಿಗಳನ್ನು ನಿರಾಕರಿಸುತ್ತದೆ. ಅದರ ಕೆಳಮಟ್ಟದ ವಿಶ್ಲೇಷಣಾತ್ಮಕ ಜ್ಞಾನವನ್ನು ಶ್ರೇಷ್ಠವಾದ ವೇದಾಂತಿಕ ಸತ್ಯದ ಜೊತೆ ಸಮನ್ವಯ ಮಾಡುತ್ತದೆ. ಎರಡನ್ನೂ ಸೇರಿಸಿ ಒಂದು ಸಮಂಜಸವಾದ ಸಿದ್ಧಾಂತವನ್ನು ರೂಪಿಸುತ್ತದೆ. ಹಾಗಾದರೆ ಗೀತೆಯು ಹೇಳುವ ಸಾಂಖ್ಯ ಮತ್ತು ಯೋಗಗಳು ಯಾವುವು? ಗೀತೆಯು ಹೇಳುವ ಸಾಂಖ್ಯವು ಈಶ್ವರ ಕೃಷ್ಣನ ಸಾಂಖ್ಯ ಕಾರಿಕೆಯಲ್ಲಿ ಪ್ರತಿಪಾದಿಸಲಾದ ಸಾಂಖ್ಯವೂ ಅಲ್ಲ. ಹಾಗೆಯೇ ಅದರ ಯೋಗವೂ ಸಹ ಪತಂಜಲಿ ಮುನಿ ಹೇಳುವ ಯೋಗವೂ ಅಲ್ಲ. ಗೀತೆಯ ಸಾಂಖ್ಯವು ಸಾಂಖ್ಯ ಕಾರಿಕೆಯಲ್ಲಿನ ತತ್ವವಂತೂ ಖಂಡಿತ ಅಲ್ಲ. ಸಾಂಖ್ಯ ಅಂದ ತಕ್ಷಣ ನಮಗೆ ಯಾವ ಸಿದ್ಧಾಂತದ ಬೋಧವಾಗುತ್ತದೋ ಅದಂತೂ ಖಂಡಿತವಾಗಿಯೂ ಅಲ್ಲ. ಏಕೆಂದರೆ ಅಸ್ತಿತ್ವದ ಆದ್ಯ ತತ್ವವಾಗಿರುವ ಪುರುಷನನ್ನು ಅದು ಅನೇಕ ಎಂದು ಒಂದೇ ಒಂದು ಕ್ಷಣ ಕೂಡ ಒಪ್ಪಿಕೊಳ್ಳುವುದಿಲ್ಲ. ಪುರುಷನ ಅನೇಕತ್ವವನ್ನು ಗೀತೆಯು ಎಲ್ಲಿಯೂ ಒಪ್ಪಿಕೊಳ್ಳುವುದಿಲ್ಲ. ಸಾಂಖ್ಯ ಕಾರಿಕೆಯು ಹೇಳುವ ಪುರುಷನ ಅನೇಕತ್ವವನ್ನದು

ನಿರಾಕರಿಸುತ್ತದೆ; ಆತ್ಮನು ಒಬ್ಬನೇ, ಪುರುಷನು ಏಕೈಕನು, ಅವನೇ ಸ್ವಾಮಿ, ಅವನೇ ಒಡೆಯ, ಅವನೇ ಈಶ್ವರ ಅವನೇ ಪುರುಷೋತ್ತಮ ಎಂದು ಗೀತೆ ಸ್ಪಷ್ಟವಾಗಿ ಹೇಳುತ್ತದೆ. ಪರಂಪರಾಗತವಾಗಿ ಬಂದ ಸಾಂಖ್ಯವು ನಮ್ಮ ಆಧುನಿಕ ದೃಷ್ಟಿಕೋನದ ಪ್ರಕಾರ ಹೇಳುವುದಾದರೆ ಅದೊಂದು ನಿರೀಶ್ವರ ಸಿದ್ಧಾಂತವೇ. ಗೀತೆಯ ಸಾಂಖ್ಯವು ವಿಶ್ವಾತ್ಮಕವಾದ ಅದ್ವೈತವಾದವನ್ನು, ವಿಶ್ವಬ್ರಹ್ಮ ಅಥವಾ ಈಶ್ವರವಾದವನ್ನು ಮಾನ್ಯ ಮಾಡುವುದಲ್ಲದೇ ಅವುಗಳನ್ನು ಸೂಕ್ಷ್ಮವಾಗಿ ಸಮನ್ವಯಗೊಳಿಸುತ್ತದೆ.

ಗೀತೆಯ ಯೋಗವು ಪತಂಜಲ ಮುನಿಯ ಯೋಗ ಪದ್ಧತಿಯೂ ಅಲ್ಲ. ಏಕೆಂದರೆ ಪತಂಜಲ ಯೋಗವು ರಾಜಯೋಗದ ಶುದ್ಧ, ವ್ಯಕ್ತಿನಿಷ್ಠ ಪದ್ಧತಿಯಾಗಿದೆ; ಅದೊಂದು ಆಂತರಿಕ ಶಿಸ್ತನ್ನು, ವ್ಯವಸ್ಥೆಯನ್ನು ಹೇಳುತ್ತದೆ, ಅದು ಸೀಮಿತವಾದ, ಅತಿ ಕಠೋರವಾದ ನಿಯಮ ಅನುಶಾಸನಗಳಿಂದ ಕೂಡಿದ ವೈಜ್ಞಾನಿಕ ಪದ್ಧತಿಯಾಗಿದೆ; ಮನಸ್ಸನ್ನು ನಿಧಾನವಾಗಿ ಹಂತ ಹಂತವಾಗಿ ಶಾಂತಗೊಳಿಸಿ, ನಿಶ್ಚಲಗೊಳಿಸಿ, ಆನಂತರ ಸಮಾಧಿಗೆ ಕೊಂಡೊಯ್ಯುವಂಥದಾಗಿದೆ. ಈ ರೀತಿ ಮನವು ತನ್ನನ್ನು ತಾನು ಮೀರಿ ಹೋಗುವುದರಿಂದ ಕೆಲ ಐಹಿಕ ಹಾಗೂ ಕೆಲ ಶಾಶ್ವತವಾದ ಪರಿಣಾಮಗಳನ್ನು ಪಡೆಯುವ ಸಾಧ್ಯತೆ ಇರುತ್ತದೆ. ಶಾಶ್ವತ ಅಂದರೆ ಆತ್ಮ ವಿಷಯದ ಜ್ಞಾನ ಮತ್ತು ಶಕ್ತಿಗಳು ಬೆಳೆಯುತ್ತದೆ; ಗೀತೆಯ ಯೋಗವು ವಿಶಾಲವಾಗಿದೆ, ಎಲ್ಲ ಪರಿಸ್ಥಿತಿಗಳಿಗೂ ಹೊಂದಿಕೊಳ್ಳುವಂಥದಾಗಿದೆ, ಅನೇಕ ಮುಖಿಯಾಗಿದ್ದು ಅನೇಕ ಅಂಶಗಳನ್ನೊಳಗೊಂಡಿದ್ದು ಒಂದು ಜೀವಂತವಾದ ಸಮೀಕರಣವನ್ನು ಅರಗಿಸಿಕೊಳ್ಳುವ ಕ್ರಿಯೆಯ ಮೂಲಕ ಅತಿ ಯಶಸ್ವಿಯಾಗಿ ಸಾಮರಸ್ಯವನ್ನು ಸ್ಥಾಪಿಸಬಲ್ಲ ಯೋಗವಾಗಿದೆ. ಗೀತೆಯ ಯೋಗದಲ್ಲಿ ರಾಜಯೋಗವು ಸಹ ಒಂದು ಅಂಶವೇ ಹೊರತು ಅದೇ ಸರ್ವಸ್ವವೂ ಅಲ್ಲ, ಪ್ರಮುಖವೂ ಅಲ್ಲ. ಗೀತೆಯ ಯೋಗದಲ್ಲಿ ಯಾವ ಕಠೋರ ನಿಯಮಗಳೂ ಇಲ್ಲ. ನಿರ್ದಿಷ್ಟ ವೈಜ್ಞಾನಿಕ ಕ್ರಮಗಳೂ ಇಲ್ಲ, ಅದು ಆತ್ಮದ ಬೆಳವಣಿಗೆಯ ಅತಿ ಸಹಜ ಪದ್ಧತಿಯಾಗಿದೆ. ಅದು ವೈಯಕ್ತಿಕ ಸಮತೆಯ ಕೆಲ ಅಂಶಗಳನ್ನು ಅಳವಡಿಸಿಕೊಳ್ಳುತ್ತದೆ. ಆತ್ಮವನ್ನು ಪುನಃ ಹೊಸದಾಗಿ ನಿರೂಪಿಸುವ ಅಂದರೆ ಬಹುಮಟ್ಟಿಗೆ ಅವರಲ್ಲಿ ಬದಲಾವಣೆ ತರುವ, ಆರೋಹಣ ಪ್ರಕ್ರಿಯೆಯನ್ನು ಅನುಸರಿಸುವ ಹಾಗೂ ಸಾಮಾನ್ಯ ಕೆಳಮಟ್ಟದ ಪ್ರಕೃತಿಯಿಂದ ದಿವ್ಯ ದೈವೀ ಪ್ರಕೃತಿಗೆ ಏರುವ ಉಪಕ್ರಮಗಳನ್ನು ಪ್ರಯೋಗದಲ್ಲಿ ತರುತ್ತದೆ. ಅದೇ ರೀತಿ

ಗೀತೆಯ ಸಮಾಧಿಯ ಪರಿಕಲ್ಪನೆ ಕೂಡ ಭಿನ್ನವಾಗಿದೆ. ಯೋಗ ಸಮಾಧಿಗೂ ಗೀತೆಯ ಸಮಾಧಿಗೂ ಅಂತರವಿದೆ. ಪತಂಜಲಿ ಮುನಿಯು ಕರ್ಮಕ್ಕೆ ಕೇವಲ ಆರಂಭಿಕ ಮಹತ್ವ ನೀಡುತ್ತಾನೆ. ಅದನ್ನು ನೈತಿಕ ಶುದ್ಧೀಕರಣಕ್ಕಾಗಿ ವಿಧಿಸುತ್ತಾನೆ, ಧಾರ್ಮಿಕ ನಿವೇಶನೆಗೆ ಒತ್ತು ನೀಡುತ್ತಾನೆ. ಆದರೆ ಗೀತೆಯು ಕರ್ಮವನ್ನು ಯೋಗದ ವೈಶಿಷ್ಟ್ಯಪೂರ್ಣ ಅಂಗವೆಂದು ಹೇಳುತ್ತದೆ. ಪತಂಜಲಿಗೆ ಕರ್ಮವೆಂಬುದು ಪೂರ್ವ ಸಿದ್ಧತೆಯಾದರೆ, ಗೀತೆಯಲ್ಲಿ ಅದು ಗಟ್ಟಿಯಾದ ಶಾಶ್ವತ ಬುನಾದಿಯಾಗಿದೆ. ರಾಜಯೋಗದಲ್ಲಿ ಕರ್ಮದ ಉದ್ದೇಶ ಪೂರ್ತಿಯಾದರೆ ಮುಗಿಯಿತು. ಅದನ್ನು ಆ ಕಡೆಗೆ ಇಟ್ಟುಬಿಡುವುದೇ (ತ್ಯಜಿಸಿಬಿಡುವುದೇ), ಅದು ಯೋಗದ ಸಾಧನವಾಗಿ ಉಳಿಯುವುದಿಲ್ಲ. ಆದರೆ ಗೀತೆಯ ದೃಷ್ಟಿಯಲ್ಲಿ ಅದು ಉಚ್ಚ ಸ್ಥಿತಿಯ ಉತ್ಕ್ರಮಣದ ಸಾಧನವಾಗಿದ್ದು, ಆತ್ಮವು ಪೂರ್ತಿಯಾಗಿ ಮುಕ್ತವಾದರೂ ಕರ್ಮ ಮುಂದುವರಿಯುತ್ತದೆ.

ಗೀತೆಯ ಸಾಂಖ್ಯ ಮತ್ತು ಯೋಗಗಳ ವಿಷಯವಾಗಿ ಮೇಲಿನಂತೆ ಸ್ಪಷ್ಟ ಪಡಿಸುವ ಉದ್ದೇಶವೇನೆಂದರೆ, ಸಾಂಖ್ಯ ಮತ್ತು ಯೋಗ ಎರಡೂ ಶಬ್ದಗಳ ಪಾರಿಭಾಷಿಕ ಅರ್ಥವು ನಮಗೆ ಪರಿಚಯವಿದ್ದು, ಗೀತೆಯಲ್ಲಿ ಈ ಅರ್ಥಕ್ಕಿಂತ ಬೇರೆ ವಿಸ್ತೃತ ಅರ್ಥದಲ್ಲಿ ಉಪಯೋಗಿಸಿರುವುದರಿಂದ, ಮತ್ತು ಗೀತೆಯ ಅಭಿಪ್ರೇತಾರ್ಥವು ನಮಗೆ ಪರಿಚಯವಿಲ್ಲದಿರುವುದರಿಂದ ಗೀತೆಯ ಓದುಗರಿಗೆ ಗೊಂದಲವುಂಟಾಗುವ ಸಂಭವವಿದೆ; ಸಾಂಖ್ಯ ಮತ್ತು ಯೋಗಗಳ ಪಾರಂಪರಿಕ ದರ್ಶನಗಳಲ್ಲಿರುವ ಸಾಂಖ್ಯ ಮತ್ತು ಯೋಗಗಳಲ್ಲಿರುವ ಸಾರಭೂತ ತಥ್ಯವನ್ನು ಗೀತೆಯಲ್ಲಿ ಸಾರ್ವತ್ರಿಕ ದೃಷ್ಟಿಕೋನದಿಂದ ವಿಶಾಲಗೊಳಿಸಿ ಸ್ವೀಕರಿಸಲಾಗಿದೆ. ಹೀಗಾಗಿ ಪಾರಂಪರಿಕ ದರ್ಶನಗಳಲ್ಲಿ ಮತ್ತು ಗೀತೆಯ ಪ್ರತಿಪಾದನೆಯಲ್ಲಿ ವಿರೋಧ ಕಾಣುವ ಸಂಭವ ಇದೆ. ಗೀತೆಯ ಸಾಂಖ್ಯವು ವ್ಯಾಪಕ ವೇದಾಂತಿಕ ಸಾಂಖ್ಯವಾಗಿದೆ. ಗೀತೆಯ ಯೋಗವು ವಿಶಾಲವಾಗಿದೆ; ಮುಖ್ಯತಃ ಆಂತರಿಕ ಅಭ್ಯಾಸ ಮತ್ತು ಆಂತರಿಕ ಪರಿವರ್ತನೆಯ ಏಕಮೇವ ಆತ್ಮದ ಪ್ರಾಪ್ತಿಗಾಗಿ ಹಾಗೂ ಈಶ್ವರನ ಜೊತೆ ಐಕ್ಯ ಹೊಂದವುದಕ್ಕಾಗಿ ಅವಶ್ಯವಿರುತ್ತದೆ. ಗೀತೆಯು ಇದನ್ನೇ ಯೋಗವೆಂದು ಹೇಳುತ್ತದೆ. ರಾಜಯೋಗವು ಗೀತೆಯು ಹೇಳುವ ಯೋಗದ ಒಂದು ಅಂಗ ಮಾತ್ರವಾಗಿದೆ. ಗೀತೆಯ ಪ್ರಕಾರ ಯೋಗ ಮತ್ತು ಸಾಂಖ್ಯಗಳು ಭಿನ್ನವಲ್ಲ; ಅವುಗಳ ತತ್ವ ಒಂದೇ ಆಗಿದೆ, ಸಾಧ್ಯವೂ ಒಂದೇ ಆಗಿದೆ. ಅವುಗಳ ಭೇದವು ಪದ್ಧತಿಯಲ್ಲಿ ಹಾಗೂ ಆರಂಭ ಸ್ಥಾನದಲ್ಲಿರುವುದು

ನಿಜವೇ, ಆದರೆ ಸಾಂಖ್ಯವು ಕೂಡ ಒಂದರ್ಥದಲ್ಲಿ ಯೋಗವೇ ಆಗಿದೆ. ಸಾಂಖ್ಯರೂಪೀ ಯೋಗವು ಜ್ಞಾನ ಮಾರ್ಗದ ಮೂಲಕ ಸಾಗುವುದಾಗಿದೆ. ನಮ್ಮ ಅಸ್ತಿತ್ವದ ತತ್ವಗಳನ್ನು ವಿವೇಕದಿಂದ ವಿಂಗಡಿಸಿ ಹೇಳುವುದು ಸಾಂಖ್ಯರೂಪೀ ಯೋಗದ ಆರಂಭವಾಗಿದೆ. ಈ ಮಾರ್ಗದ ಮೂಲಕ ಸತ್ಯವನ್ನು ಕಂಡುಕೊಂಡು, ಅದನ್ನು ಅರ್ಜಿಸಿಕೊಂಡು, ಸಾಂಖ್ಯರೂಪೀ ಯೋಗವು ತನ್ನ ಸಾಧ್ಯವನ್ನು (ಗುರಿಯನ್ನು) ಸಿದ್ಧಿಸಿಕೊಳ್ಳುತ್ತದೆ. ಯೋಗ ಎಂಬ ವಿಶಿಷ್ಟ ಹೆಸರಿನಿಂದ ಗುರುತಿಸಲ್ಪಡುವ ಯೋಗವು ಕರ್ಮಗಳ ಮೂಲಕ ಆರಂಭವಾಗುತ್ತದೆ. ಅದರ ಆತ್ಮ ತತ್ವವನ್ನು ಮುಖ್ಯವಾಗಿಟ್ಟುಕೊಂಡು ಹೇಳುವುದಾದರೆ ಇದನ್ನು ಕರ್ಮಯೋಗವೆಂದು ಕರೆಯಬಹುದು. ಆದರೆ, ಗೀತೆಯ ಒಟ್ಟಾರೆ ಬೋಧನೆಯನ್ನು ಹಾಗೂ ಗೀತೆಯಲ್ಲಿ ಮುಂದೆ ಬರುವ ಕರ್ಮದ ವ್ಯಾಖ್ಯೆಯನ್ನು ನೋಡಿದರೆ, ಗೀತೆಯಲ್ಲಿ 'ಕರ್ಮ'ವೆಂಬ ಶಬ್ದವನ್ನು ಬಹು ವ್ಯಾಪಕ ಅರ್ಥದಲ್ಲಿ ಉಪಯೋಗಿಸಿರುವುದು ಕಂಡುಬರುತ್ತದೆ. ನಮ್ಮ ಆಂತರಿಕ ಹಾಗೂ ಬಾಹ್ಯ ಎಲ್ಲ ಕೃತಿಗಳನ್ನು ನಿಸ್ವಾರ್ಥ ವೃತ್ತಿಯಿಂದ ಈಶ್ವರನಿಗೆ ನಿವೇದಿಸುವುದು, ಯಜ್ಞ ಬುದ್ಧಿಯಿಂದ ಯಜ್ಞಾಹುತಿಯೆಂತೆ ಅರ್ಪಣೆ ಮಾಡುವುದು ಗೀತೆಯ ಯೋಗವಾಗಿದೆ. ಜ್ಞಾನವು ಯಾವ ಸತ್ಯದರ್ಶನವನ್ನು ಮಾಡಿಸುವುದೋ, ಅದನ್ನು ಆಚರಣೆಯಲ್ಲಿ ಅನುಷ್ಠಾನ ಮಾಡುವುದು, ಆ ಸತ್ಯದ ದಾರಿಯಲ್ಲೇ ವ್ಯವಹರಿಸುವುದು ಇದೇ ಗೀತೆಯ ಯೋಗವಾಗಿದೆ. ಜ್ಞಾನದಿಂದ ಸರ್ವೋತ್ತಮನೆಂದು ಅರಿತುಕೊಂಡ ಪರಮಾತ್ಮನಲ್ಲಿ ಅನನ್ಯ ಭಕ್ತಿಭಾವ, ಅವನ ಚರಣಗಳಲ್ಲಿ ಶಾಂತಿಯಿಂದ ಹಾಗೂ ಉತ್ಸಾಹದಿಂದ ಸರ್ವಸ್ವವನ್ನು ಸಮರ್ಪಿಸುವುದೇ ಆ ಅನುಷ್ಠಾನದ, ವ್ಯವಹಾರದ ಪ್ರೇರಕ ಶಕ್ತಿಯಾಗಿದೆ.

ಹಾಗಾದರೆ ಸಾಂಖ್ಯದ ಸತ್ಯ ಅಥವಾ ತತ್ವಗಳು ಯಾವುವು? ಸಾಂಖ್ಯ ಎಂದರೆ ಎಣಿಸುವುದು, ವಿಶ್ಲೇಷಣೆ ಮಾಡುವುದು; ಅದರ ವಿಶ್ಲೇಷಣ ಪದ್ಧತಿಯಿಂದಲೇ ಸಾಂಖ್ಯಕ್ಕೆ ಆ ಹೆಸರು ಬಂದಿದೆ. ಸಾಂಖ್ಯವು ನಮ್ಮ ಅಸ್ತಿತ್ವದ ಘಟಕಗಳನ್ನು ಎಣಿಸುತ್ತದೆ, ವಿಶ್ಲೇಷಿಸುತ್ತದೆ, ವಿವರಿಸುತ್ತದೆ. ಸಾಮಾನ್ಯವಾಗಿ ನಮ್ಮ ಮನಸ್ಸಿಗೆ ಈ ಘಟಕಗಳ ಮಿಶ್ರಣ ಹಾಗೂ ಅದರ ಪರಿಣಾಮಗಳೇ ವೇದ್ಯವಾಗುತ್ತವೆ. ಸಾಂಖ್ಯವು ಈ ಘಟಕಗಳನ್ನು ಸಮನ್ವಯ ಮಾಡುವ ಪ್ರಯತ್ನ ಮಾಡುವುದಿಲ್ಲ. ಅದು ಮೂಲತಃ ದ್ವೈತ ವಿಚಾರಗಳ ಒಂದು ದೃಷ್ಟಿಯಿಂದ ಸಾಪೇಕ್ಷ ದ್ವೈತ ಭಾವದವುಗಳಾಗಿವೆ, ಆದರೆ ಅವುಗಳಿಗೆ ವ್ಯತಿರಿಕ್ತವಾಗಿ ಸಾಂಖ್ಯದ

ದ್ವೈತವು ನಿರಪೇಕ್ಷ, ತೀಕ್ಷ್ಣ ದ್ವೈತವನ್ನು ಪ್ರತಿಪಾದಿಸುತ್ತದೆ. ಸಾಂಖ್ಯರ ಪ್ರಕಾರ ಅಸ್ತಿತ್ವದ ಮೂಲ ಏಕವಲ್ಲ, ಎರಡು ತತ್ವಗಳ ಮೂಲಕ ವಿಶ್ವ ಸೃಷ್ಟಿಯಾಗಿದೆ, ನಿಷ್ಕ್ರಿಯನಾದ ಪುರುಷ ಹಾಗೂ ಕ್ರಿಯಾಶೀಲ ಪ್ರಕೃತಿ ಇವುಗಳ ಮೂಲಕ ವಿಶ್ವ ಸೃಷ್ಟಿಯಾಗುತ್ತದೆ. ಪುರುಷ ಅಂದರೆ ನಾವು ಸಾಮಾನ್ಯವಾಗಿ ಬಳಸುವ ಅರ್ಥದಲ್ಲಿ ಪುರುಷ ಅಲ್ಲ; ಪುರುಷ ಅಂದರೆ ಶುದ್ಧ ಚೈತನ್ಯಯುಕ್ತ ಸತ್ತೆ; ಅವನು ನಿಶ್ಚಲ, ನಿರ್ವಿಕಾರ, ಸ್ವಯಂಪ್ರಕಾಶ, ಪ್ರಕೃತಿಯು ಅವನ ಶಕ್ತಿ ಮತ್ತು ಕ್ರಿಯಾವಿಧಾನ. ಪ್ರಕೃತಿಯು ಯಾಂತ್ರಿಕ ಜಡ; ಆದರೆ ಪುರುಷನಲ್ಲಿ ಅದು ಪ್ರತಿಫಲಿತವಾಗುವುದರಿಂದ ಅದರ ಕ್ರಿಯೆಗಳಿಗೆ ಪ್ರಜ್ಞೆಯ ಚೈತನ್ಯದ ರೂಪ ಬರುತ್ತದೆ. ಈ ರೀತಿಯಾಗಿ ಸೃಷ್ಟಿ, ಸ್ಥಿತಿ, ಸಂಹಾರ, ಜನನ, ಮರಣ, ಜೀವನ, ಪ್ರಜ್ಞೆ, ಪ್ರಜ್ಞಾಹೀನತೆ, ಇಂದ್ರಿಯ ಜ್ಞಾನ, ಬುದ್ಧಿ–ತರ್ಕಸಮ್ಮತ ಜ್ಞಾನ, ಅಜ್ಞಾನ, ಕ್ರಿಯೆ, ನಿಷ್ಕ್ರಿಯೆ, ಸುಖ, ದುಃಖ ಇತ್ಯಾದಿ ಉತ್ಪನ್ನವಾಗುತ್ತವೆ. ಪ್ರಕೃತಿಯ ಪ್ರಭಾವದಲ್ಲಿರುವ ಪುರುಷನು ಅವೆಲ್ಲ ತನ್ನವು ಎಂದು ಭಾವಿಸುತ್ತಾನೆ. ಇವುಗಳನ್ನುಭವಿಸುವವನು ತಾನು ಎಂದು ತಿಳಿಯುತ್ತಾನೆ. ಆದರೆ ಇವು ಪುರುಷನಿಗೆ ಸಂಬಂಧಪಟ್ಟಿರುವುದಿಲ್ಲ, ಇವು ಪ್ರಕೃತಿಯ ಕ್ರಿಯೆಗಳು, ವ್ಯಾಪಾರಗಳು.

ಏಕೆಂದರೆ ಪ್ರಕೃತಿಯು ತ್ರಿಗುಣಾತ್ಮಕವಾಗಿದೆ; ಮೂರು ಗುಣಗಳಿಂದ ಕೂಡಿದೆ. ಅವು ಶಕ್ತಿಯ ಮೂರು ಪ್ರವೃತ್ತಿಗಳಿದ್ದಂತೆ – ಸತ್ವವು ಬುದ್ಧಿಯ ನೆಲೆಯಾಗಿದ್ದು, ಶಕ್ತಿಯ ಸ್ಥಿತಿಯನ್ನು ಕಾಯುತ್ತದೆ; ರಾಜಸವು ಶಕ್ತಿ(ಬಲ) ಮತ್ತು ಕ್ರಿಯೆಯ ಬೀಜವಾಗಿದೆ, ಅದು ಶಕ್ತಿಯ ನಾನಾ ವಿಧ ಕಾರ್ಯಗಳನ್ನು ಸಂಘಟಿಸುತ್ತದೆ; ತಮಸ್ಸು ನಿಷ್ಕ್ರಿಯತೆಯ, ಜಡತೆಯ ಬೀಜನಾಗಿದೆ, ಇದರಲ್ಲಿ ಬುದ್ಧಿಯ ತತ್ವವಿಲ್ಲ. ಇದು ಸೃಷ್ಟಿ ಮತ್ತು ಸ್ಥಿತಿಯನ್ನು ಸಂಹಾರ ಮಾಡುತ್ತದೆ, ವಿಧ್ವಂಸಗೊಳಿಸುತ್ತದೆ. ಈ ಮೂರು ಗುಣಗಳು ಸಮಸ್ಥಿತಿಯಲ್ಲಿರುವಾಗ, ಎಲ್ಲವೂ ಶಾಂತವಾಗಿರುತ್ತದೆ. ಚಲನೆ ಇರುವುದಿಲ್ಲ, ನಿಶ್ಚಲತೆ ಇರುತ್ತದೆ. ಕೃತಿ, ಕಾರ್ಯ, ಸೃಷ್ಟಿ ಏನೂ ಇರುವುದಿಲ್ಲವಾಗಿ ಆತ್ಮನ ಅಕ್ಷರ ಪ್ರಕಾಶಮಯ ಸತ್ವದಲ್ಲಿ ಪರಾವರ್ತಿಸಲು ಏನೂ ಇರುವುದಿಲ್ಲ. ಅಂತೆಯೇ ಎಲ್ಲವೂ ವಿಶ್ರಾಂತ ಸ್ಥಿತಿಯಲ್ಲಿರುತ್ತದೆ. ಈ ಸಮತೋಲನದ ವ್ಯವಸ್ಥೆ ಏರುಪೇರಾದಾಗ ವೈಷಮ್ಯ ಏರ್ಪಡುತ್ತದೆ. ಅವುಗಳ ನಡುವೆ ಪರಸ್ಪರ ಕ್ರಿಯೆ ಪ್ರತಿಕ್ರಿಯೆ ಉಂಟಾಗುತ್ತದೆ. ಪರಿಣಾಮವು ಸೃಷ್ಟಿ ಸ್ಥಿತಿ ಸಂಹಾರಗಳ ಸಂಕೀರ್ಣ ವ್ಯವಹಾರ

ಆರಂಭವಾಗುತ್ತದೆ. ವಿರಾಟ್ ವಿಶ್ವದ ಅನೇಕ ಮಡಿಕೆಗಳು, ಸುರುಳಿಗಳು ಬಿಚ್ಚಿಕೊಳ್ಳುತ್ತವೆ. ಪ್ರಕೃತಿಯು ತನ್ನ ಮೇಲೆ ಆರೋಪಿಸುವ ಶೋಭೆಯನ್ನು ಎಲ್ಲಿಯವರೆಗೆ ಪುರುಷನು ಒಪ್ಪಿಕೊಂಡು ತನ್ನ ಸ್ವಸ್ವರೂಪವನ್ನು ಕಾಣದಂತೆ ಬಚ್ಚಿಡುತ್ತಾನೋ ಅಲ್ಲಿಯವರೆಗೆ ಈ ಸೃಷ್ಟಿ ಸ್ಥಿತಿ ವ್ಯಾಪಾರ ನಡೆಯುತ್ತದೆ. ಅವನು ತನ್ನ ಒಪ್ಪಿಗೆಯನ್ನು ಹಿಂದೆಗೆದ ತಕ್ಷಣ ಇದೆಲ್ಲ ನಿಂತು ಹೋಗುತ್ತದೆ. ಏಕೆಂದರೆ ಅದೇ ಕ್ಷಣಕ್ಕೆ ತ್ರಿಗುಣಗಳು ಸಮಸ್ಥಿತಿಗೆ ಬರುತ್ತವೆ. ಹೀಗಾಗಿ ನಿಶ್ಚಲ ಸ್ಥಿತಿ ಏರ್ಪಡುತ್ತದೆ. ಪುರುಷನು ಅನುಮಂತಾ, ಸಾಕ್ಷೀ ಈ ಎಲ್ಲ ಭಾವಗಳನ್ನು ತ್ಯಜಿಸುತ್ತಾನೆ. ಪುರುಷನು ವಾಸ್ತವವಾಗಿ ಸಕ್ರಿಯ ಈಶ್ವರನಲ್ಲ, ಅವನ ಅನುಮಂತಾ, ಸಾಕ್ಷಿ ಸ್ಥಿತಿಗಳು ಕೂಡ ಒಂದರ್ಥದಲ್ಲಿ ನಿಷ್ಕ್ರೀಯ ಸ್ಥಿತಿಗಳೇ. ಬಾಹ್ಯ ಹಾಗೂ ಆಂತರಿಕ ಎರಡೂ ಸಕ್ರಿಯ ಸ್ಥಿತಿಗಳು ಪುರುಷನಿಗೆ ಅವಾಸ್ತವಿಕ ಸ್ಥಿತಿಗಳೇ. ಆತನಲ್ಲಿ ಸಕ್ರಿಯ ಸಂಕಲ್ಪವೂ ಇಲ್ಲ, ಸಕ್ರಿಯ ಬುದ್ಧಿಯೂ ಇಲ್ಲ. ಆದ್ದರಿಂದ ಪುರುಷನು ವಿಶ್ವದ ಉತ್ಪತ್ತಿಯ ಏಕಮಾತ್ರ ಕಾರಣನಲ್ಲ. ಆದ್ದರಿಂದ ಸಕ್ರಿಯವಾದ ಇನ್ನೊಂದು ಕಾರಣ ಅವಶ್ಯಕತೆ ಇರುತ್ತದೆ. ಕೇವಲ ತನ್ನ ಸಚೇತನ ಜ್ಞಾನ, ಸಚೇತನ ಸಂಕಲ್ಪ ಹಾಗೂ ಆನಂದಗಳ ಮೂಲಕ ಪುರುಷನು ಸೃಷ್ಟಿಯನ್ನು ಉತ್ಪನ್ನ ಮಾಡಲಾರನು. ಅಂತಲೇ ಪುರುಷ(ಆತ್ಮ) ಮತ್ತು ಪ್ರಕೃತಿ ಇವು ಸೇರಿಯೇ ಸೃಷ್ಟಿಗೆ ಕಾರಣವಾಗುತ್ತದೆ. ಒಂದು ನಿಷ್ಕ್ರಿಯ ಪ್ರಜ್ಞೆ (ಅಥವಾ ಜ್ಞಾನ) ಇನ್ನೊಂದು ಕ್ರಿಯಾಶೀಲ ಶಕ್ತಿ ಸೇರಿದಾಗ ಮಾತ್ರ ಸೃಷ್ಟಿಕಾರ್ಯ ಅರಂಭವಾಗುತ್ತದೆ. ಹೀಗೆ ಸಾಂಖ್ಯವು ಸೃಷ್ಟಿಗೆ ದ್ವೈತ ತತ್ವವನ್ನು ಹೇಳುತ್ತದೆ.

ಹಾಗಾದರೆ ಪ್ರಜಾಯುಕ್ತವಾದ ಬುದ್ಧಿ ಹಾಗೂ ಪ್ರಜ್ಞಾಯುಕ್ತವಾದ ಸಂಕಲ್ಪ (ಕ್ರಿಯಾಶಕ್ತಿ) ಇವು ನಮ್ಮ ಜೀವನದ ಪ್ರಮುಖ ಅಂಗಗಳಾಗಿದ್ದು, ಇವು ಪುರುಷನಿಗೆ ಸಂಬಂಧಿಸಿದವುಗಳು, ಪ್ರಕೃತಿಯವಲ್ಲವೆಂದು ನಮಗೆ ತೋರುವುದರ ಕಾರಣವೇನು? ಸಾಂಖ್ಯರ ಪ್ರಕಾರ ಈ ಬುದ್ಧಿ, ಸಂಕಲ್ಪ ಇವು ಯಾಂತ್ರಿಕವಾಗಿದೆ, ಇವು ಪುರುಷನ ಗುಣಗಳಲ್ಲ, ಇವು ಜಡ ಪ್ರಕೃತಿಗೆ ಸಂಬಂಧಿಸಿದವುಗಳು; ವಿಶ್ವದ ರಚನೆಯಲ್ಲಿ ಮುಖ್ಯವಾಗಿ ಇಪ್ಪತ್ತನಾಲ್ಕು ತತ್ವಗಳು (ಅಥವಾ ಘಟಕಗಳು) ಪಾಲ್ಗೊಂಡಿದ್ದು ಈ ಪ್ರಜ್ಞೆ ಮತ್ತು ಸಂಕಲ್ಪಗಳು ಅದರಲ್ಲಿಯೇ ಅಡಕವಾಗಿವೆ. ಸೃಷ್ಟಿಯ ವಿಕಸನದ ಮೂಲದಲ್ಲಿ ಪ್ರಕೃತಿಯು ತನ್ನ ತ್ರಿಗುಣಗಳ ಸಹಿತವಾಗಿ ಎಲ್ಲ ದೃಶ್ಯ ವಸ್ತುಗಳ ಮೂಲರೂಪದಲ್ಲಿ ಅಥವಾ ಅವ್ಯಕ್ತ ಚೇತನದ ರೂಪದಲ್ಲಿ ಇರುತ್ತದೆ. ಇದನ್ನು ಅವ್ಯಕ್ತ ಶಕ್ತಿಯ ಅವಸ್ಥೆ ಎಂದೂ ಕರೆಯಬಹುದು.

ಕಾರ್ಯರೂಪದಲ್ಲಿ ಪ್ರಕಟವಾಗಿರುವ ಅಪ್ರಕಟ ಶಕ್ತಿಯ ಅವಸ್ಥೆ ಎಂದೂ ಕರೆಯಬಹುದು. ಸಾಂಖ್ಯ ದರ್ಶನದಲ್ಲಿ ಶಕ್ತಿ ಮತ್ತು ದ್ರವ್ಯ ಎರಡೂ ಬೇರೆ ಬೇರೆ ಅಲ್ಲ, ಎರಡೂ ಒಂದೇ.

(ಇದನ್ನೇ ಐನ್‌ಸ್ಟೀನ್‌ನ ಸಾಪೇಕ್ಷ ಸಿದ್ಧಾಂತವು $E=mc^2$ ಮೂಲಕ ಹೇಳುತ್ತದೆ. ಆದರೆ ನಾವು ಸಾಂಖ್ಯರ ಪ್ರತಿಪಾದನೆಯನ್ನು ಮರೆತಿದ್ದೆವಾಗಿ ಐನ್‌ಸ್ಟೀನ್‌ನ ಸಿದ್ಧಾಂತ ಹೊಸದೆಂಬಂತೆ ತೋರುತ್ತದೆ. ಇದು ನಿಜವಾಗಿ ದೊಡ್ಡ ವಿಪರ್ಯಾಸವೇ ಸರಿ.)

ಈ ಮೂಲಭೂತ ಅಪ್ರಕಟ ಶಕ್ತಿಯ ಮೂಲಕ ಐದು ವಿಶ್ವಘಟಕಗಳು ನಿರ್ಮಾಣವಾಗುತ್ತವೆ. ಇವುಗಳನ್ನೇ ನಾವು ಪಂಚ ಮಹಾಭೂತಗಳೆಂದು ಕರೆಯುತ್ತೇವೆ. ಆಕಾಶ, ಗಾಳಿ, ಬೆಂಕಿ, ನೀರು ಮತ್ತು ನೆಲ; ಆದರೆ ಇವು ನಮ್ಮ ಆಧುನಿಕ ವಿಜ್ಞಾನ ದೃಷ್ಟಿಯ ಪ್ರತಿಪಾದನೆಯ ಮೂಲತತ್ವಗಳಲ್ಲವೆಂಬುದು ನೆನಪಿರಲಿ. ಸ್ಥೂಲ ಭೌತಿಕದಲ್ಲಿ ಈ ಮೂಲ ದ್ರವ್ಯಗಳು ಎಲ್ಲಿಯೂ ಶುದ್ಧ ರೂಪದಲ್ಲಿ ದೊರೆಯುವುದಿಲ್ಲ; ಎಲ್ಲ ಪದಾರ್ಥಗಳೂ ಈ ಐದೂ ತತ್ವಗಳ (ಅಥವಾ ಶಕ್ತಿಗಳ) ಸಂಯೋಜನೆಯಿಂದಲೇ ನಿರ್ಮಾಣವಾಗುತ್ತವೆ. ನ್ಯೂನಾಧಿಕ ಪ್ರಮಾಣದಲ್ಲಿ ಇವು ಐದೂ ಪ್ರತಿ ವಸ್ತುವಿನಲ್ಲಿಯೂ ಅವಶ್ಯವಾಗಿ ಇದ್ದೇ ಇರುತ್ತವೆ. ಇವು ಮೂಲತಃ ಸೂಕ್ಷ್ಮ ರೂಪದಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ರೂಪದಲ್ಲಿ ಇರುತ್ತವೆ. ಈ ಗುಣಗಳನ್ನೇ ನಮ್ಮ ಜ್ಞಾನೇಂದ್ರಿಯಗಳು ವಸ್ತುವಿನ ರೂಪದಲ್ಲಿ ಗ್ರಹಿಸುತ್ತವೆ. ಈ ರೀತಿ ಪದಾರ್ಥದ ಐದು ಘಟಕಗಳು ಮೂಲ ಶಕ್ತಿಯ (ಪ್ರಕಟ)ರೂಪಗಳಾಗಿದ್ದು, ನಿಮ್ಮ ಐದು ಜ್ಞಾನೇಂದ್ರಿಯಗಳ ಜೊತೆ ಇವುಗಳಿಗಿರುವ ಸಂಬಂಧದಿಂದಲೇ ನಮಗೆ ಸ್ಥೂಲ ಜಗದ ಜ್ಞಾನವಾಗುತ್ತದೆ; ಮತ್ತು ಈ ಇಂದ್ರಿಯಗಳು ಹಾಗೂ ಸ್ಥೂಲ ವಸ್ತುವಿನ ಜೊತೆಗಿರುವ ಅವುಗಳಿಗಿರುವ ಸಂಬಂಧವೇ ವಿಕಾಸ ಹೊಂದುವುದು, ಇದನ್ನೇ ಆಧುನಿಕ ಪರಿಭಾಷೆಯಲ್ಲಿ ವಸ್ತುನಿಷ್ಠ ಜ್ಞಾನವೆಂದು ಕರೆಯುವುದು.

ಇದು ವಸ್ತುನಿಷ್ಠ ಜ್ಞಾನದ ವಿಷಯದ ಬಗೆಗಿನ ವಿವರ. ಇನ್ನು ವಿಶ್ವಾತ್ಮನ ಶಕ್ತಿಯ ವ್ಯಕ್ತಿನಿಷ್ಠ (ಅಥವಾ ಆತ್ಮನಿಷ್ಠ) ವಿಷಯದ ಬಗೆಗೆ ಹೇಳುವುದಾದರೆ, ಉಳಿದಂತೆ 13 ತತ್ವಗಳು ಬುದ್ಧಿ ಅಥವಾ ಮಹತ್, ಅಹಂಕಾರ, ಮನಸ್ಸು, 10 ಇಂದ್ರಿಯ ಕಾರ್ಯಗಳು (ಐದು ಜ್ಞಾನೇಂದ್ರೀಯಗಳು, ಐದು

ಕರ್ಮೇಂದ್ರಿಯಗಳು) ಇವೆಲ್ಲ ಸೇರಿ ವಿಶ್ವ ಶಕ್ತಿಯ ಆತ್ಮನಿಷ್ಠ ಸ್ವರೂಪದ ಘಟಕಗಳಾಗಿರುತ್ತವೆ. ಮನಸ್ಸು ಮೂಲ ಇಂದ್ರಿಯವು ನಿಜವಾಗಿ ಅದೇ ಎಲ್ಲ ವಸ್ತುಗಳನ್ನು ಗ್ರಹಿಸುತ್ತದೆ ಹಾಗೂ ಅವುಗಳಿಗೆ ಪ್ರತಿಸ್ಪಂದಿಸುತ್ತದೆ. ಏಕೆಂದರೆ ಮನಸ್ಸಿನಲ್ಲಿ ಎರಡೂ ರೀತಿಯ ಕ್ರಿಯೆಗಳು (ವಿಷಯವನ್ನು ಗ್ರಹಿಸುವ ಹಾಗೂ ಕಾರ್ಯಮಾಡುವ) ಏಕಕಾಲಕ್ಕೆ ಇವೆ. ಅದು ಸ್ಪರ್ಶಾದಿಗಳ ಮೂಲಕ ಬಾಹ್ಯ ಜಗದ ಅರಿವನ್ನು ಪಡೆಯುತ್ತದೆ. ತನ್ಮೂಲಕ ಜಗತ್ತಿನ ಬಗ್ಗೆ ಒಂದು ನಿರ್ದಿಷ್ಟ ಪರಿಕಲ್ಪನೆಯನ್ನು ರೂಪಿಸಿಕೊಳ್ಳುತ್ತದೆ. ಆ ಮೇಲೆ ಕ್ರಿಯಾತ್ಮಕ ಪ್ರಾಣಿಕದ ಮೂಲಕ ಪ್ರತಿಕ್ರಿಯೆಯನ್ನುಂಟುಮಾಡುತ್ತದೆ. ಆದರೆ ಮನಸ್ಸು ಅತಿ ಸಾಮಾನ್ಯ ಕ್ರಿಯೆಗಳನ್ನು ಕೂಡ ತನ್ನ ವಿಶೇಷ ಇಂದ್ರಿಯಗಳ ಮೂಲಕ ಮಾಡುತ್ತದೆ. ಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ಬಾಯಿ, ತ್ವಚೆಯ ಮೂಲಕ ರೂಪ, ಶಬ್ದ, ಗಂಧ, ರಸ ಮತ್ತು ಸ್ಪರ್ಶವನ್ನು ಗ್ರಹಿಸುತ್ತದೆ. ಅದೇ ರೀತಿ ವಿಶೇಷ ಕರ್ಮೇಂದ್ರಿಯಗಳನ್ನು ರೂಪಿಸಿ ಅವುಗಳ ಮೂಲಕ ಮಾತು, ಗತಿ, ವಸ್ತುಗಳ ಅರಿವು, ವಿಸರ್ಜನ ಪ್ರಜನನ ಮುಂತಾದ ಕ್ರಿಯೆಗಳನ್ನು ಮಾಡುತ್ತದೆ. ಬುದ್ಧಿಯು ವಿವೇಚನೆಯ ತತ್ವವಾಗಿದ್ದು, ಅದು ಏಕಕಾಲಕ್ಕೆ ಜ್ಞಾನ ಸಾಧನವೂ ಕ್ರಿಯಾ ಸಂಕಲ್ಪವೂ ಆಗಿದೆ. ಅದು ಪ್ರಕೃತಿಯಲ್ಲಿ ವಿವೇಚನೆ, ವಿಂಗಡನೆ ಹಾಗೂ ಕ್ರಿಯಾತ್ಮಕ ನೆರವು ನೀಡುವ ಎರಡೂ ಕೆಲಸಗಳನ್ನು ಮಾಡಬಲ್ಲ ಏಕೈಕ ತತ್ವವಾಗಿದೆ. ಅಹಂಕಾರವು (ego) (ನಾನು ಅನ್ನುವ ಭಾವವು) ಬುದ್ಧಿಯಲ್ಲಿನ ಆತ್ಮನಿಷ್ಠ ತತ್ವವಾಗಿದ್ದು, ಇದರ ಮೂಲಕವೇ ಪುರುಷನು ಪ್ರಕೃತಿಯ ಜೊತೆಗೆ, ಅದರ ಕ್ರಿಯೆಗಳ ಜೊತೆಗೆ ಏಕಾತ್ಮತೆಯಿಂದ ಗುರುತಿಸಿಕೊಳ್ಳುತ್ತಾನೆ. ಆದರೆ ಈ ಆತ್ಮನಿಷ್ಠ ತತ್ವಗಳು ಬಹುತೇಕ ಯಾಂತ್ರಿಕವೇ ಆಗಿವೆ. ಅವು ಅಚೇತನ ಶಕ್ತಿಯ ಭಾಗಗಳೇನೋ ಎಂಬಂತೆ ತೋರುತ್ತವೆ. ಆದರೆ ಅವು ವಸ್ತುನಿಷ್ಠ ಕ್ರಿಯೆಯ ಕಾರ್ಯಗಳೇ ಆಗಿವೆ. ಈ ಬುದ್ಧಿ ಮತ್ತು ಸಂಕಲ್ಪಗಳು ಯಾಂತ್ರಿಕ ಅಚೇತನ ಶಕ್ತಿಯ ಘಟಕಗಳೆನ್ನುವುದನ್ನು ನಂಬುವುದು ಕಠಿಣವಾದುದೇ ಸರಿ. ಆದರೆ ಇತ್ತೀಚೆಗೆ ಆಧುನಿಕ ವಿಜ್ಞಾನವಾದರೂ ಇದೇ ಸಿದ್ಧಾಂತಕ್ಕೆ ಬಂದಿರುವುದನ್ನು ಮರೆಯಲಾಗದು. ಒಂದು ಪರಮಾಣು(atom)ನಲ್ಲಿರುವ ಯಾಂತ್ರಿಕ ಕ್ರಿಯೆಯು ಕೂಡ ಅಚೇತನ ಸಂಕಲ್ಪದ (ಇಚ್ಛಾ) ಶಕ್ತಿಯೇ, ಪ್ರಕೃತಿಯ ಎಲ್ಲ ಕ್ರಿಯೆಗಳಲ್ಲಿಯೂ ಸರ್ವಾಂತರ್ಯಾಮಿಯಾಗಿ ಈ ಅಚೇತನ ಸಂಕಲ್ಪ ಶಕ್ತಿಯೇ ಕಾರ್ಯಮಾಡುತ್ತದೆ. ನಾವು ಮನೋಬುದ್ಧಿ ಎಂದು ಯಾವುದನ್ನು ಕರೆಯುತ್ತೇವೆಯೋ ಅದು

ಮೂಲಭೂತವಾಗಿ, ಈ ಭೌತಿಕ ವಿಶ್ವದಲ್ಲಿ ವಿಶ್ಲೇಷಿಸುವ, ವಿಂಗಡಿಸುವ, ಪೂರಕವಾಗಿ ಕೆಲಸ ಮಾಡುವ, ಬಾಹ್ಯ ಪ್ರಜ್ಞೆ ಅರಿವಾಗದಿದ್ದರೂ ಎಲ್ಲ ಕೆಲಸಗಳನ್ನು ಅವಚೇತನದ ಸ್ತರದಲ್ಲಿ ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವ ಶಕ್ತಿಯೇ ಆಗಿದೆ. ಮನಸ್ಸು ಕೂಡ ಅಚೇತನ ಯಾಂತ್ರಿಕ ಕ್ರಿಯಾಶಕ್ತಿಯ ಪರಿಣಾಮವೇ ಎಂಬುದನ್ನು ಆಧುನಿಕ ವಿಜ್ಞಾನವು ಶ್ರುತಪಡಿಸಿದೆ. ಆದರೆ ವಿಜ್ಞಾನವು ಏನನ್ನು ಹೇಳದೇ ಬಿಟ್ಟಿದೆಯೋ ಅದನ್ನು ಸಾಂಖ್ಯ ದರ್ಶನವು ವಿವರಿಸುತ್ತದೆ; ಅವಚೇತನದ ಯಾಂತ್ರಿಕ ಕ್ರಿಯೆಗಳು ಹೇಗೆ ಪ್ರಜ್ಞೆಯ ಚಲನೆಗಳಾಗಿ ಪ್ರಕಟವಾಗುವವು ಎಂಬುದನ್ನು ಕೂಡ ಸಾಂಖ್ಯ ತತ್ವ ವಿವರಿಸುತ್ತದೆ. ಪ್ರಕೃತಿಯು ಪುರುಷನಲ್ಲಿ ಪ್ರತಿಬಿಂಬಿತವಾಗುವುದರಿಂದ ಈ ರೀತಿಯ ಅಭಾಸವಾಗುತ್ತದೆ; ಆತ್ಮದ ಪ್ರಜ್ಞಾ ಶಕ್ತಿಯ ಬೆಳಕನ್ನೇ ಯಾಂತ್ರಿಕ ಕಾರ್ಯಶಕ್ತಿಯೆಂದು ಭಾವಿಸಲಾಗುವುದು; ಹೀಗಾಗಿ (ಪ್ರಕೃತಿಯನ್ನು ಸಾಕ್ಷಿಯಾಗಿ ನಿಂತುಕೊಂಡು ನೋಡುತ್ತ ಬದಲಾಗಿ) ತನ್ನನ್ನು ಕೂಡ ಮರೆತುಹೋದ ಪುರುಷನು ಪ್ರಕೃತಿಯ ಕ್ರಿಯೆಗಳಾದ ನೋಡುವುದು, ಕೇಳುವುದು, ಆಲೋಚಿಸುವುದು, ಸಂಕಲ್ಪಿಸುವುದು. ಕಾರ್ಯಮಾಡುವುದು ಎಲ್ಲವನ್ನು ತಾನೇ ಮಾಡುತ್ತಾನೆ ಎಂದು ಭ್ರಮಿಸುತ್ತಾನೆ. ನಿಜವಾಗಿ ಪುರುಷನ ಆಲೋಚನೆ, ಸಂವೇದನೆ, ಭಾವನೆ, ಸಂಕಲ್ಪ ಹಾಗೂ ಕಾರ್ಯ ಎಲ್ಲವನ್ನೂ ಪ್ರಕೃತಿಯೇ ಮಾಡುತ್ತದೆ. ಹಾಗೂ ಅದರ ಮೂರು ಗುಣಗಳಾದ ಸತ್ವ, ರಜ, ತಮ ಇವೇ ಎಲ್ಲವನ್ನೂ ಮಾಡಿಸುತ್ತವೆ; ಸ್ವತಃ ಪುರುಷ ಏನೂ ಮಾಡುವುದಿಲ್ಲ. ಪುರುಷನೇ ಕರ್ತೃ ಎಂಬ ಭ್ರಮೆಯಿಂದ ಹೊರಬರುವುದು ಅಥವಾ ಬಿಡುಗಡೆ ಹೊಂದುವುದೇ ಜೀವನು ಪ್ರಕೃತಿ ಮತ್ತು ಅದರ ಕ್ರಿಯೆಗಳಿಂದ ಮುಕ್ತವಾಗುವುದರ ಮೊದಲ ಹೆಜ್ಜೆಯಾಗಿದೆ.

ಹಾಗಾದರೆ ಸಾಂಖ್ಯವು ಅಸ್ತಿತ್ವದ ಎಲ್ಲ ಪ್ರಶ್ನೆಗಳಿಗೂ ಸಮಾಧಾನಕರ ಉತ್ತರ ನೀಡುವುದೇನು? ಇಲ್ಲ. ಅಸ್ತಿತ್ವದ ಅನೇಕ ಪ್ರಶ್ನೆಗಳಿಗೆ ಸಾಂಖ್ಯವು ಉತ್ತರಿಸುವುದಿಲ್ಲ. ಕನಿಷ್ಠ ಸಮಾಧಾನಕರ ಉತ್ತರವನ್ನೂ ಕೂಡ ನೀಡುವುದಿಲ್ಲ. ಆದರೆ ಬಹು ಪುರಾತನದಿಂದಲೂ ಎಲ್ಲ ತತ್ವಜ್ಞಾನಗಳ ಗುರಿಯು ಸಾಮಾನ್ಯವಾಗಿ ಆತ್ಮದ ವಿಮೋಚನೆಯೇ ಆಗಿತ್ತು. ಪ್ರಕೃತಿಯ ಅಧೀನದಿಂದ ಬಿಡುಗಡೆಹೊಂದಿ ಸಂಪೂರ್ಣವಾಗಿ ಮುಕ್ತನಾಗಬೇಕೆಂಬುದೇ ಎಲ್ಲ ಶಾಸ್ತ್ರಗಳ ಸಾಮಾನ್ಯ ಪ್ರತಿಪಾದನೆಯಾಗಿತ್ತು; ಹೀಗಿರುವಾಗ ಸರ್ವ ಸಾಮಾನ್ಯ ಎಲ್ಲ ಪ್ರಶ್ನೆಗಳಿಗೆ ಬೌದ್ಧಿಕ ಉತ್ತರ ಅಥವಾ ವಿವರಣೆ ಕೊಡುವುದಾದರೆ ಈ ರೀತಿಯ ಆತ್ಮ ವಿಮೋಚನೆ

ಅಥವಾ ಮುಕ್ತಿಯೇ ಎಲ್ಲಕ್ಕಿಂತ ಹೆಚ್ಚಿನ ಪರಿಣಾಮಕಾರಕ ಉಪಾಯವೆಂಬಂತೆ ತೋರುತ್ತಿತ್ತು. ಆದರೆ ಮೊದ ಮೊದಲು, ಏಕ ಪುರುಷನ ಪರಿಕಲ್ಪನೆಯಲ್ಲಿ ನಾನಾ ವಿಧ ಪುರುಷರ ಅಂದರೆ ಅನೇಕ ಪುರುಷರ ಕಲ್ಪನೆಯನ್ನು ಮಾಡಿದ್ದು ಏಕೆ; ಪುರುಷ ಪ್ರಕೃತಿ ಎಂಬ ದ್ವೈತ ಪರಿಕಲ್ಪನೆಯಲ್ಲಿ ಅನೇಕ ಪುರುಷರ ಕಲ್ಪನೆ ತಂದದ್ದು ಏಕೆಂಬುದು ಅರ್ಥವಾಗುವುದಿಲ್ಲ. ವಿಶ್ವದ ಸೃಷ್ಟಿ ಮತ್ತು ಸ್ಥಿತಿಗಳಿಗೆ ಏಕ ಪುರುಷ ಮತ್ತು ಒಂದೇ ಪ್ರಕೃತಿಯ ಪರಿಕಲ್ಪನೆ ಸಾಕೆನಿಸುತ್ತದೆ. ಆದರೆ ಸಾಂಖ್ಯರಿಗೆ ತಮ್ಮ ಕಠೋರ ವಿಶ್ಲೇಷಣಾತ್ಮಕ ನಿರೀಕ್ಷಣೆಯಿಂದಾಗಿ ಅನೇಕ ಪುರುಷರ ಕಲ್ಪನೆಯನ್ನು ರೂಪಿಸುವುದು ಅನಿವಾರ್ಯವಾಯಿತೆಂದು ತೋರುತ್ತದೆ. ನಮಗೆ ಗೊತ್ತಿರುವಂತೆ, ಈ ವಿಶ್ವದಲ್ಲಿ ಅನೇಕ ಪ್ರಜ್ಞಾಯುಕ್ತ ಜೀವಿಗಳಿವೆ. ಪ್ರತಿಯೊಂದು ಜೀವಿಯೂ ಈ ವಿಶ್ವವನ್ನು ತನ್ನದೇ ಆದ ರೀತಿಯಲ್ಲಿ ಅರ್ಥೈಸಿಕೊಳ್ಳುತ್ತದೆ. ವಸ್ತುವಿನ ಆತ್ಮನಿಷ್ಠ ಹಾಗೂ ವಸ್ತುನಿಷ್ಠ ಅನುಭವದ ಪ್ರಕಾರ ಪ್ರತಿ ಜೀವಿಯೂ ತನ್ನದೇ ಆದ ಭಿನ್ನ ರೀತಿಯಲ್ಲಿ ಈ ಜಗತ್ತನ್ನು ನೋಡುತ್ತದೆ. ಪ್ರತಿ ವಸ್ತುವಿನ ಜೊತೆ ಪ್ರತಿ ಜೀವಿಯ ಅರ್ಥೈಕೆ ಬೇರೆಯಾಗಿರುವಂತೆ ಪ್ರತಿ ಕ್ರಿಯೆ ಕೂಡ ಬೇರೆಯಾಗಿಯೇ ಇರುತ್ತದೆ. ಹೀಗಿರುವಾಗ ಒಂದೇ ಪುರುಷನ ಕಲ್ಪನೆಗೆ ಬಾಧೆಯಾಗುವುದು; ಈ ರೀತಿಯ ಸ್ವತಂತ್ರ ಹಾಗೂ ಭೇದಾತ್ಮಾಕ ಜ್ಞಾನ ಆಗುವುದು ಅಸಾಧ್ಯವಾಗುವುದು ಎಲ್ಲವನ್ನೂ ಒಂದೇ ರೀತಿ ನೋಡಬೇಕಾಗಿತ್ತು. ಎಲ್ಲರೂ ಒಂದೇ ವಿಶ್ವವನ್ನು ನೋಡುವುದರಿಂದ ಎಲ್ಲರೂ ಒಂದೇ ರೀತಿ ಅರ್ಥೈಸಿಕೊಳ್ಳಬೇಕಾಗಿತ್ತು. ಎಲ್ಲರೂ ಒಂದೇ ರೀತಿ ವ್ಯವಹಾರ ಮಾಡಬೇಕಾಗಿತ್ತು. ಏಕೆಂದರೆ ಎಲ್ಲರ ಅನುಭವ ಒಂದೇ ಇರುತ್ತಿತ್ತು. ಎಲ್ಲರ ಆತ್ಮ ನಿಷ್ಠ ಅನುಭವವೂ ಒಂದೇ ಇರುತ್ತಿತ್ತು (ಅಥವಾ ಇರಬೇಕಾಗಿತ್ತು). ಏಕೆಂದರೆ ಪ್ರಕೃತಿ ಒಂದೆ ಆಗಿದೆ, ಎಲ್ಲ (ಪುರುಷರೂ) ಒಂದೇ ವಿಶ್ವಕ್ಕೆ ಸಾಕ್ಷಿಯಾಗಿದ್ದಾರೆ. ಪ್ರಕೃತಿಯ ಎಲ್ಲ ನಿಯಮಗಳು ಎಲ್ಲರಿಗೂ ಒಂದೇ ರೀತಿಯಾಗಿ ಇರುವುದರಿಂದ ಅವರೆಲ್ಲರ ಆಂತರಿಕ ಮತ್ತು ಬಾಹ್ಯ ವ್ಯಾಪಾರಗಳು ಒಂದೇ ತರಹ ಇರಬೇಕಾಗಿತ್ತು; ಆದರೆ ವಾಸ್ತವಿಕ ಜಗದಲ್ಲಿ ಹಾಗಿಲ್ಲ; ಪ್ರತಿಯೊಬ್ಬರ ದೃಷ್ಟಿಕೋನ ಬೇರೆಯಾಗಿದೆ, ಪ್ರತಿಯೊಬ್ಬರ ಪ್ರವೃತ್ತಿ ಬೇರೆ ಬೇರೆಯಾಗಿದೆ, ಅನುಭವ ಬೇರೆಯಾಗಿದೆ, ಅರ್ಥೈಕೆ ಬೇರೆಯಾಗಿದೆ. ಅದೇ ರೀತಿ ಕೃತಿಗಳೂ ಸಹ ಭಿನ್ನವಾಗಿವೆ. ಈ ಸಮೀಕರಣವನ್ನು ವಿವರಿಸುವುದು ಸಾಂಖ್ಯರಿಗೆ ತುಂಬ ತೊಂದರೆಯಾಗಿತ್ತು. ಅಂತೆಯೇ ಅವರು ಸಾಕ್ಷಿ ಪುರುಷರು ಬೇರೆ ಬೇರೆ, ಅವರ ಅನೇಕ ಎಂಬ ನಿರ್ಣಯಕ್ಕೆ ಬಂದರು.

ಆದರೆ ಈ ತರಹದ ಭಿನ್ನ ಅಹಂಭಾವವು ಸರಿಯಾದ ವಿವರಣೆಯನ್ನು ನಿಡುವುದೆ? ನಮಗೆ ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆ. ಅಹಂ ಅಥವಾ ಅಹಂಭಾವ ಅನ್ನುವುದು ಪ್ರಕೃತಿಯ ಸಾಮಾನ್ಯ ತತ್ವವಾಗಿದ್ದು, ಅದನ್ನೇನೂ ಭಿನ್ನ ಭಿನ್ನವೆಂದು ಹೇಳುವ ಅಗತ್ಯವಿಲ್ಲ. ಏಕೆಂದರೆ ಅಹಂ–ಭಾವವು ಪುರುಷನನ್ನು ಪ್ರಕೃತಿಯ ಜೊತೆಗೆ ತನ್ನನ್ನು ಗುರುತಿಸಿಕೊಳ್ಳುವಂತೆ ಮಾಡುತ್ತದೆ. ಪುರುಷನು ಒಬ್ಬನೇ ಆಗಿದ್ದರೆ, ಎಲ್ಲರೂ ಒಂದೇ ಆಗಿಬಿಡಬೇಕಾಗಿತ್ತು. ತಮ್ಮ ತಮ್ಮ ಅಹಂನ ಮೂಲಕ ಒಂದೇ ಆಗಿರುತ್ತಿದ್ದರು, ಏಕರೂಪವಾಗಿರುತ್ತಿದ್ದರು. ಅವರ ಆಕಾರ ಭಿನ್ನ ಭಿನ್ನವಾಗಿರಬಹುದು, ಆಂತರಿಕ ಘಟಕಗಳ ಸಂರಚನೆಯಲ್ಲಿ ಭಿನ್ನತೆ ಇರಬಹುದು, ಆದರೆ ಎಲ್ಲರ ಆತ್ಮದೃಷ್ಟಿ ಒಂದೇ ಆಗಿರಬೇಕು, ಆತ್ಮಾನುಭವ ಒಂದೇ ಆಗಿರಬೇಕು. ಕೇವಲ ಪ್ರಕೃತಿಯ ಭಿನ್ನತೆಯು ಈ ರೀತಿಯ ಭಿನ್ನತೆಯನ್ನು, ದೃಷ್ಟಿಕೋನದ ಭಿನ್ನತೆ, ಕಾರ್ಯಭಿನ್ನತೆ, ಮೊದಲಿನಿಂದ ಹಿಡಿದು ಕೊನೆಯವರೆಗಿನ ಎಲ್ಲ ಭಿನ್ನತೆಗಳನ್ನೂ ಕೇವಲ ಏಕ ಪುರುಷನ, ಅಥವಾ ಏಕಿ ಸಾಕ್ಷಿಯ ಪರಿಕಲ್ಪನೆಯ ಮೂಲಕ ವಿವರಿಸುವುದು ತುಂಬ ಕಠಿಣವಾಗುತ್ತಿತ್ತು. ಅಂತೆಯೇ ಸಾಂಖ್ಯರು "ಒಬ್ಬನೇ ಪುರುಷ ಎಂದು ಹೇಳುವ ಬದಲಾಗಿ ಅನೇಕ ಪುರುಷರು" ಎಂದು ಹೇಳಿದರು. ಆದ್ದರಿಂದ ವೇದಾಂತದ ಪರಿಕಲ್ಪನೆಯಿಂದ ಹೊರಹೋದ ಅಥವಾ ವೇದಾಂತದ ವಿಷಯವನ್ನು ಮರೆತ ಸಾಂಖ್ಯರು ಈ ರೀತಿ ಶುದ್ಧ ಸಾಂಖ್ಯರಿಗೆ 'ಅನೇಕ ಪುರಷರ' ಪರಿಕಲ್ಪನೆಯನ್ನು ಶಾಸ್ತ್ರದಲ್ಲಿ ತರುವುದು ಅಗತ್ಯವಾಯಿತು. ಆದರೆ ವಿಶ್ವ ಮತ್ತು ಅದರ ವ್ಯಾಪಾರಗಳನ್ನು ಒಂದೇ ಪ್ರಕೃತಿ ಮತ್ತು ಓರ್ವನೇ ಪುರುಷನ ಮೂಲಕ ವಿವರಿಸಲು ಸಾಧ್ಯವಿದೆ; ಅನೇಕ ಪುರುಷರ ಪರಿಕಲ್ಪನೆ ನಿಜವಾಗಿ ಅಗತ್ಯವಿಲ್ಲ – ಆದರೆ ಸಾಂಖ್ಯರು ಈ ನಿಟ್ಟಿನಲ್ಲಿ ಯೋಚನೆ ಮಾಡಲಿಲ್ಲ.

ಒಂದೇ ಪ್ರಕೃತಿ ಮತ್ತು ಅನೇಕ ಪುರುಷರ ಪರಿಕಲ್ಪನೆಯಲ್ಲಿ ಇನ್ನೂ ಹೆಚ್ಚು ಆತಂಕಕಾರಿಯಾದ ಅಂಶವಿದೆ. ಸಾಂಖ್ಯದಲ್ಲಿ ಕೂಡ ಉಳಿದವುಗಳಂತೆ ಮುಕ್ತಿಯನ್ನೇ ಪರಮ ಉದ್ದೇಶವೆಂದು ಮನ್ನಿಸಲಾಗಿದೆ. ಪ್ರಕೃತಿಯ ಎಲ್ಲ ಕ್ರಿಯೆಗಳೂ ಪುರುಷನ ಸಂತೋಷಕ್ಕಾಗಿಯೇ ಇರುತ್ತವೆ. ಆದ್ದರಿಂದ ಪುರುಷನು ಪ್ರಕೃತಿಯ ಕ್ರಿಯೆಗಳಿಗೆ ತನ್ನ ಅನುಮತಿ ಹಿಂತೆಗೆದುಕೊಂಡು ಬಿಟ್ಟರೆ ಅವನಿಗೆ ಮುಕ್ತಿಯಾಗುವುದೆಂದು ಹೇಳಲಾಗುತ್ತದೆ. ಆದರೆ ಇದು ಕೇವಲ ಮಾತಿನಲ್ಲಿ ಮಾತ್ರ ಸಂಭವಿಸುವ ಕ್ರಿಯೆ, ಶಬ್ದಗಳಿಗೆ ಮಾತ್ರ ಸೀಮಿತವಾದ ಸ್ಥಿತಿಯಾಗಿದೆ.

ಪುರುಷನು ನಿಷ್ಕ್ರಿಯನು ಅಂದಮೇಲೆ ಪ್ರಕೃತಿಯ ಕ್ರಿಯೆಗಳಿಗೆ ಅನುಮತಿ ನೀಡುವ ಅಥವಾ ಅನುಮತಿ ಹಿಂತೆಗೆದುಕೊಳ್ಳುವುದೂ ಸಹ ಅವನಿಗೆ ಸಂಬಂಧಿಸಿದ್ದಲ್ಲ, ಅದು ಕೂಡ ಪ್ರಕೃತಿಯ ಚಲನೆ ಅಥವಾ ಕ್ರಿಯೆಯೇ ಆಗಿರಬೇಕು. ಸ್ವಲ್ಪ ಆಳವಾಗಿ ಚಿಂತಿಸಿದರೆ, ಈ ಅನುಮತಿ ನೀಡುವ ಅಥವಾ ಹಿಂತೆಗೆದುಕೊಳ್ಳುವ ಕ್ರಿಯೆಯು ಬುದ್ಧಿಗೆ ಸಂಬಂಧಿಸಿದ್ದು, ಅದು ವಿವೇಚನಾಶೀಲ ಸಂಕಲ್ಪದ ವ್ಯವಹಾರವೆಂಬುದು ಅರಿವಾಗುವುದು. ಬುದ್ಧಿಯು ಇಂದ್ರಿಯಾತ್ಮಕ ಮನಸ್ಸಿನ ಇಂದ್ರಿಯಾರ್ಥ ಗ್ರಹಣಕ್ಕೆ ಸಮ್ಮತಿಸುವುದು; ಅದು ಆಗ ವಿಶ್ವ–ಶಕ್ತಿಯ ಕ್ರಿಯೆಗಳನ್ನು ವಿಶ್ಲೇಷಿಸುವ, ಸಹಾಯ ಮಾಡುವ ಅಥವಾ ಮಾಡದಿರುವ ಕೆಲಸವನ್ನು ನಿರಂತರ ಮಾಡಬೇಕಾಗಿ ಬರುತ್ತದೆ. ಅಹಂ–ಭಾವದ ಸಹಾಯ ತೆಗೆದುಕೊಂಡ ಪ್ರಕೃತಿಯ ಎಲ್ಲ ಕಾರ್ಯಗಳಲ್ಲಿ ಸಾಕ್ಷಿಯಾಗಿ ಗುರುತಿಸಿಕೊಂಡು ಅದರ ಕಾರ್ಯಗಳನ್ನು ನೋಡಬೇಕಾಗುವುದು. ವಸ್ತುಗಳನ್ನು ವಿಷಯಗಳನ್ನು ವಿಶ್ಲೇಷಣೆ, ವಿಚಾರ ಮಾಡುವಾಗ ಈ ರೀತಿ ಪ್ರಕೃತಿಯ ಕಾರ್ಯಗಳ ಜೊತೆ ಗುರುತಿಸಿಕೊಳ್ಳುವ ತಾದಾತ್ಮ್ಯತೆಯು ಭ್ರಮೆ ಎಂಬ ನಿರ್ಣಯಕ್ಕೆ ಅದು ಬರುತ್ತದೆ. ಕೊನೆಗೆ ಪುರುಷ ಬೇರೆ, ಪ್ರಕೃತಿ ಬೇರೆ ಎಂಬ ಅನುಭವವಾಗುತ್ತದೆ; ಎಲ್ಲವೂ ತ್ರಿಗುಣಗಳ ಅಸಮತೋಲನದಿಂದಲೇ ಉಂಟಾಗಿರುವ ಸ್ಥಿತಿ ಎಂಬುದು ಅರಿವಾಗುವುದು. ಬುದ್ಧಿಯು ವಿವೇಕದ ಶಕ್ತಿಯಾಗಿರುವಂತೆ ಸಂಕಲ್ಪದ ಶಕ್ತಿಯೂ ಆಗಿದ್ದು, ಅಸತ್ಯದಿಂದ (ಅಥವಾ ಭ್ರಮೆಯಿಂದ) ಹಿಂದೆ ಸರಿಯುವುದು, ಅದನ್ನು ನಿರಾಕರಿಸುವುದು. ಇಲ್ಲಿಯವರೆಗೆ ಪ್ರಕೃತಿಗೆ ಅಧೀನವಾಗಿರಲು ಒಪ್ಪಿ ಅಸತ್ಯವನ್ನು ಪುಷ್ಟೀಕರಿಸಿತ್ತು; ಅದನ್ನೀಗ ತೊರೆದು ವಿಶ್ವದಾಟದಲ್ಲಿ ಮನದ ಜೊತೆ ಒಂದಾಗಿ ಪ್ರವರ್ತಿಸಲು ನಿರಾಕರಿಸುವುದು. ಕೊನೆಯಲ್ಲಿ ಏನಾಗುವುದೆಂದರೆ ಪುರುಷನ ಮೇಲೆ ಪ್ರಕೃತಿಗಿರುವ ಹಿಡಿತವು ತಪ್ಪಿಹೋಗುವುದು, ಆಗ ಪುರುಷನಲ್ಲಿ ತನ್ನ ಕ್ರಿಯೆಗಳನ್ನು ಪ್ರತಿಫಲಿಸಲು ಪ್ರಕೃತಿಗೆ ಸಾಧ್ಯವಾಗದೆ ಹೋಗುವುದು. ಆಗ ಅಹಂಭಾವದ ಪ್ರಯತ್ನ ಕೊನೆಯಾಗುವುದು, ಬುದ್ಧಿಯ ಸಂಕಲ್ಪವು ತಟಸ್ಥವಾಗಿ ಪ್ರಕೃತಿಯ ಕಾರ್ಯಗಳಿಗೆ ಅನುಗುಣವಾಗಿ ವರ್ತಿಸಲು ನಿರಾಕರಿಸುವುದು. ಆಗ ಪ್ರಕೃತಿಯ ಗುಣಗಳು ಸಮಸ್ಥಿತಿಗೆ ಬಂದುಬಿಡುವುವು. ಪ್ರಕೃತಿಯ, ವಿಶ್ವದ ಲೀಲೆ ಕೊನೆಯಾಗುವುದು. ಪುರುಷನ ತನ್ನ ಮೂಲ ನಿಷ್ಕ್ರಿಯ ಸ್ಥಿತಿಗೆ ಮರಳುವನು. ಆದರೆ ಪುರುಷನು ಒಬ್ಬನೇ ಇದ್ದಂತೆ ಇದ್ದು, ವಿವೇಕ ವಿಶ್ಲೇಷಣೆಯ ತತ್ವಕ್ಕೆ ಒಪ್ಪಿಗೆ ನೀಡದೇ ಅವನು ಹಿಂದುಳಿದು ಬಿಟ್ಟರೆ, ಭ್ರಮೆಯು ಕೊನೆಯಾಗಿ ಹೋಗಿ ವಿಶ್ವವೇ

ಲಯವಾಗಿಬಿಡುವುದು. ಆದರೆ ಪ್ರತ್ಯಕ್ಷದಲ್ಲಿ ಹೀಗಂತಲೂ ಆಗುವುದಿಲ್ಲವೆಂಬುದನ್ನು ನಾವೆಲ್ಲ ಬಲ್ಲೆವು. ಅನೇಕ ಜೀವಿಗಳ ಪೈಕಿ ಕೆಲವೊಂದು ಮಾತ್ರ ಮುಕ್ತಿ ಹೊಂದಬಹುದು. ಅಥವಾ ಆ ಕಡೆಗೆ ಸಾಗಬಹುದು. ಉಳಿದ ಜೀವಿಗಳ ಇರುವಿಕೆಯಲ್ಲಿ ಯಾವ ಬದಲಾವಣೆಯ ಆಗುವುದಿಲ್ಲ. ವಿಶ್ವಪ್ರಕೃತಿಯ ವ್ಯವಹಾರ ಎಂದಿನಂತೆ ಮುಂದುವರಿದೇ ಇರುವುದು. ಇಂಥ ಸಂಕ್ಷಿಪ್ತ ನಿರಾಕರಣೆಯಿಂದ ಪ್ರಕೃತಿಯ ಯಾವ ಕಾರ್ಯಗಳೂ ನಿಲ್ಲುವುದಿಲ್ಲ. ಅಂತೆಯೇ ಸಾಂಖ್ಯರು ಅನೇಕ ಪುರುಷರ ಪರಿಕಲ್ಪನೆಯನ್ನು ಮುಂದೆ ತಂದರು. ಪುರುಷರು ಅನೇಕರಾದರೂ ಪ್ರಕೃತಿಯು ಒಂದೇ ಇದು ಸಾಂಖ್ಯರ ಸಿದ್ಧಾಂತ. ಕೆಲವರು ಮುಕ್ತಿಹೊಂದಿದರೂ ವಿಶ್ವ ವ್ಯಾಪಾರ ಮಾತ್ರ ನಿಲ್ಲದೇ, ಅವ್ಯಾಹತವಾಗಿ ಮುಂದುವರೆಯುವುದು. ಆದ್ದರಿಂದ ಪುರುಷನು ಒಬ್ಬನೇ ಅಲ್ಲ ಅನೇಕರು, ಪ್ರಕೃತಿ ಮಾತ್ರ ಒಂದೇ ಎಂಬ ಸಿದ್ಧಾಂತವನ್ನು ಸಾಂಖ್ಯರು ಮಂಡಿಸಿದ್ದಾರೆ. ವೇದಾಂತದ ಕಲ್ಪನೆಯಾದ ಒಬ್ಬಿಬ್ಬರ ಅಥವಾ ಅನೇಕರ ಮುಕ್ತಿಯಿಂದ ವಿಶ್ವ ವ್ಯಾಪಾರದಲ್ಲೇನೂ ಬದಲಾವಣೆ–ಯಾಗುವುದಿಲ್ಲ ಎಂಬ ಸಿದ್ಧಾಂತಕ್ಕೆ ಧಕ್ಕೆ ಬರುವುದಿಲ್ಲ. ಅದ್ವೈತದ ಮಾಯಾವಾದವು ಇದನ್ನೇ ಪ್ರತಿಪಾದಿಸುತ್ತದೆ. ಇಡೀ ವಿಶ್ವವೇ ಕನಸು, ಬಂಧನ ಹಾಗೂ ಮೋಕ್ಷ ಎರಡೂ ಭ್ರಮೆ, ಅಸತ್ಯ, ಅವೆಲ್ಲ ಮಾಯೆಯ ಮೇಲ್ಮೈ ಭ್ರಾಂತಿಯಾಗುವವು. ವಾಸ್ತವವಾಗಿ ಯಾರೂ ಬದ್ಧರೂ ಅಲ್ಲ, ಮುಕ್ತರೂ ಅಲ್ಲ. ಸಾಂಖ್ಯವಾದವು ಹೆಚ್ಚು ಸತ್ಯನಿಷ್ಠವಾಗಿದ್ದು, ಇಡೀ ಅಸ್ತಿತ್ವವೇ ಭ್ರಮೆ ಎಂಬುದನ್ನದು ಒಪ್ಪುವುದಿಲ್ಲ. ಆದ್ದರಿಂದ ಅದು ಈ ಮುಕ್ತಿಯ ಪರಿಹಾರವನ್ನು ಮಾನ್ಯಮಾಡುವುದಿಲ್ಲ. ಸಾಂಖ್ಯರು ಈ ಪ್ರಕಾರವಾಗಿ ಏಕ ಪ್ರಕೃತಿ, ಅನೇಕ ಪುರುಷರು ಎಂಬ ಸಿದ್ಧಾಂತಕ್ಕೆ ತಾನಾಗಿ, ಅನಿವಾರ್ಯವಾಗಿ ಬಂದಿದೆ ಎಂದು ಶ್ರೀ ಅರವಿಂದರು ಹೇಳುತ್ತಾರೆ.

ಗೀತೆಯ ಯೋಗದ ವಿಶ್ಲೇಷಣೆ ಕೂಡ ಹೀಗೆಯೇ ಆರಂಭವಾಗುತ್ತದೆ. ಮೊದಮೊದಲು, ಯೋಗ ಸಿದ್ಧಾಂತವನ್ನು ಪ್ರತಿಪಾದಿಸುವಾಗಲೂ ಸಹ, ಈ ತತ್ವವನ್ನು ಗೀತೆ ಒಪ್ಪಿಕೊಳ್ಳುತ್ತಿರುವಂತೆ ಅನಿಸುತ್ತದೆ. ಗೀತೆಯು ಪ್ರಕೃತಿಯನ್ನು, ಅದರ ತ್ರಿಗುಣಗಳನ್ನು, 24 ತತ್ವಗಳನ್ನು ಒಪ್ಪುತ್ತದೆ. ಎಲ್ಲ ಕಾರ್ಯವನ್ನೂ ಪ್ರಕೃತಿಯ ಮೇಲೆ ಆರೋಪಿಸಲು ಕೂಡ ಗೀತೆ ಒಪ್ಪುತ್ತದೆ. ಪುರುಷನು ನಿಷ್ಕ್ರಿಯನೆಂದು ಹೇಳುತ್ತದೆ. ಈ ವಿಶ್ವದಲ್ಲಿ ಅನೇಕ ಜೀವಿಗಳು, ಅನೇಕ ಪ್ರಜ್ಞಾಯುಕ್ತ ಜೀವಿಗಳಿರುವುದನ್ನು ಗೀತೆ ಒಪ್ಪುತ್ತದೆ. ಅಹಂ–ಭಾವದ ಜೊತೆ

ಗುರುತಿಸಿಕೊಳ್ಳುವುದದನ್ನೂ, ಪ್ರಸಂಗ ಬಂದಾಗ ನಿರಾಕರಿಸುವುದನ್ನೂ ಅದು ಒಪ್ಪುತ್ತದೆ. ಬುದ್ಧಿಯ ವಿವೇಚನಾ ಶಕ್ತಿ, ಸಂಕಲ್ಪಶಕ್ತಿ, ತ್ರಿಗುಣಾತೀತನಾಗಿ ಮಾಡಬೇಕಾದ ಕಾರ್ಯವನ್ನು ಕೂಡ ಗೀತೆ ಹೇಳುತ್ತದೆ. ತದನು ಜೀವಿ ಮುಕ್ತನಾಗುವ ಬಗೆಯನ್ನೂ ಅದು ವಿವರಿಸುತ್ತದೆ. ಅರ್ಜುನನಿಗೆ ಆರಂಭದಲ್ಲಿ ಯೋಗವನ್ನು ಅನುಷ್ಠಾನ ಮಾಡಲು ಹೇಳುವುದು ಬುದ್ಧಿಯೋಗವನ್ನು, ಸಂಕಲ್ಪ ಸಿದ್ಧಿಯನ್ನು. ಆದರೆ ಸ್ವಲ್ಪ ವ್ಯತ್ಯಾಸವಿದೆ ಮತ್ತು ಆ ವ್ಯತ್ಯಾಸವು ಅತಿ ಮಹತ್ವದ ಅಂಶವಾಗಿದೆ. ಪುರುಷನು ಅನೇಕನಲ್ಲ. ಒಬ್ಬನೇ ಆಗಿದ್ದಾನೆ; ಗೀತೆಯ ಪುರುಷನು ಸ್ವತಂತ್ರನು, ಅಲೌಕಿಕನು. ನಿಶ್ಚಲನು, ಶಾಶ್ವತನು ಹಾಗೂ ಅವಿಕಾರಿಯು; ಆದರೆ ಸಾಂಖ್ಯರ ಪ್ರಕಾರ ಕೂಡ ಪುರುಷನು ನಿಷ್ಕ್ರಿಯನು, ಅಚಲನು, ಅವಿಕಾರಿಯು, ವ್ಯತ್ಯಾಸವಿರುವುದು ಪುರುಷನು ಏಕನೋ ಅನೇಕನೋ ಅನ್ನುವುದರಲ್ಲಿ ಮಾತ್ರ. ಆದರೆ ವಾಸ್ತವವಾಗಿ ಪುರುಷನು ಅನೇಕ ಅಲ್ಲ, ಏಕನೇ, ಹೀಗಿರುವಾಗ ಯಾವ ಪರಿಕಲ್ಪನೆಯ ಮೂಲಕ (ಸಾಂಖ್ಯರ ಅನೇಕ ಪುರುಷವಾದ) ಸಮಸ್ಯೆ ಪರಿಹಾರವಾಗಿತ್ತೋ ಅದನ್ನು ಪರಿಹಾರ ಮಾಡಲು ಗೀತೆಯು ಹೊಸ ಹಾದಿ ಹುಡುಕಬೇಕಾಗುತ್ತದೆ. ಅಂತೆಯೇ ಗೀತೆಯು ವೇದಾಂತಿಕ ಸಾಂಖ್ಯದಲ್ಲಿ ವೇದಾಂತಿಕ ಯೋಗದ ತತ್ವಗಳನ್ನು ಅಳವಡಿಸಿ, ಸಮರಸಗೊಳಿಸಿ ನಮಗೆ ನೀಡುತ್ತದೆ.

ನಾವು ಕಾಣುವ ಮೊದಲ ಹೊಸ ಹಾಗೂ ಅತಿ ಮುಖ್ಯ ಅಂಶವೆಂದರೆ ಗೀತೆಯು ಹೇಳುವ ಪುರುಷನ ಅಸ್ತಿತ್ವ – ಪ್ರಕೃತಿಯು ಪುರುಷನ ಸುಖ ಸಂತೋಷಕ್ಕಾಗಿ ಎಲ್ಲ ಕ್ರಿಯೆಗಳನ್ನು ಮಾಡುತ್ತದೆ. ಆದರೆ ಆ ಸುಖ, ಸಂತೋಷವೆನ್ನುವುದು ಯಾವುದರ ಮೇಲೆ ನಿರ್ಧಾರವಾಗುವುದು? ಅದರ ಮಾನದಂಡವೇನು? ಸಾಂಖ್ಯರ ಅತಿ ಕಠಿಣ ವಿಶ್ಲೇಷಣೆಯ ಪ್ರಕಾರ ಅದು, ಅಂದರೆ ಪುರುಷನ ಸಂತೋಷವಿರುವುದು ಪ್ರಕೃತಿಯ ಕ್ರಿಯೆಗಳಿಗೆ ಅನುಮತಿ ನೀಡುವುದರಲ್ಲಿ, ಸಾಕ್ಷಿಯಾಗಿ ನಿಂತು ಪ್ರಕೃತಿಯ ಚಲನೆ, ಕಾರ್ಯಗಳನ್ನು ನೋಡುವುದರಲ್ಲೇ ಸಂತೋಷವಿದೆ. ಪುರುಷನು ಉದಾಸಕ್ತ ಭಾವದಿಂದ ಸಾಕ್ಷಿಯಾಗಿ ಬುದ್ಧಿಯ ಸಂಕಲ್ಪದ ಕಾರ್ಯಗಳಿಗೆ ಅನುಮತಿ ನೀಡುತ್ತಾನೆ. ಅಹಂಭಾವದ ಚಲನೆಗೆ ಆಸ್ಪದ ನೀಡುತ್ತಾನೆ. ಅದೇ ರೀತಿ ಅಹಂನ ಚಲನೆಯಿಂದ, ಕ್ರಿಯೆಯಿಂದ ನಿರಾಸಕ್ತಿಯಿಂದಲೇ ನಿವೃತ್ತನಾಗುತ್ತಾನೆ. ಅವನು ಸಾಕ್ಷಿ ಮಾತ್ರ, ಅವನು ಎಲ್ಲ ಚಲನೆಗಳ ಅನುಮಂತಾ ಮಾತ್ರ ಅವನು ಪ್ರಕೃತಿಯ

ಚಲನೆಗಳ ಭರ್ತಾ ಕೂಡ ಹೌದು. ಅದಕ್ಕಿಂತ ಹೆಚ್ಚಿನ ಪಾತ್ರ ಅವನಿಗಿಲ್ಲ. ಆದರೆ ಗೀತೆಯು ವಿವರಿಸುವ ಪುರುಷನು ಪ್ರಕೃತಿಯ ಪ್ರಭುವಾಗಿದ್ದಾನೆ. ಅವನು ಈಶ್ವರನು, ಬುದ್ಧಿಯ ಸಂಕಲ್ಪದ ಕ್ರಿಯೆಗಳು ಪ್ರಕೃತಿಗೆ ಸಂಬಂಧಪಟ್ಟಿದ್ದರೆ. ಸಂಕಲ್ಪದ ಶಕ್ತಿ ಮತ್ತು ಕಾರ್ಯಗಳು ಪುರುಷನಿಂದಲೇ, ಪ್ರಜ್ಞಾಯುಕ್ತ ಆತ್ಮನಿಂದಲೇ. ಅವನು ಪ್ರಕೃತಿಯ ಒಡೆಯನಾಗಿದ್ದಾನೆ. ಪರಾತ್ಪರ ಸಂಕಲ್ಪದ ಕಾರ್ಯವು ಪ್ರಕೃತಿಯದಾಗಿದ್ದರೆ ಸಂಕಲ್ಪದ ಬುದ್ಧಿಯ ಬೆಳಕು ಹಾಗೂ ಮೂಲ ಇದೇ ಪುರುಷನಿಂದಲೇ ಬರುತ್ತವೆ. ಅವನು ಕೇವಲ ಸಾಕ್ಷಿಯಲ್ಲ. ಅವನು ಒಡೆಯನು, ಜ್ಞಾತೃವು ಅರಿಯುವವನು, ಜ್ಞಾನದ ಪ್ರಭುವು ಅವನು ಪ್ರಕೃತಿಯ ಕಾರ್ಯಗಳ ಪರಮ ಪ್ರಭು. ಕಾರ್ಯನಿವೃತ್ತಿಯ ಪ್ರಭು ಕೂಡ ಅವನೇ. ಸಾಂಖ್ಯರ ಪ್ರಕಾರ ಪುರುಷ ಮತ್ತು ಪ್ರಕೃತಿ ಈ ದ್ವೈತ ತತ್ವವೇ ಸೃಷ್ಟಿಯ ಮೂಲ. ಆದರೆ ಈ ಸಮನ್ವಯದ ಸಾಂಖ್ಯದ ಪ್ರಕಾರ ಪುರುಷನು ತನ್ನದೇ ಆದ ಪ್ರಕೃತಿಯ ಮೂಲಕ ಈ ವಿಶ್ವದ ಕಾರಣ ಕರ್ತೃವಾಗಿದ್ದಾನೆ. ಪಾರಂಪರಿಕ ಸಾಂಖ್ಯರ ಕಠೋರ ವಿಶ್ಲೇಷಣೆಯಿಂದ ನಾವೆಷ್ಟು ದೂರ ನಡೆದು ಬಂದಿದ್ದೇವೆ ಎಂಬುದು ನಮಗೀಗ ಅರಿವಾಗುತ್ತದೆ.

ಆದರೆ ಗೀತೆಯು ಆರಂಭದಲ್ಲೇ ಆತ್ಮ(ಪುರುಷ)ನು ಒಬ್ಬನೇ, ಅವನು ಅವ್ಯಯ, ಅವಿಕಾರಿ, ಅಚಲ, ನಿತ್ಯ, ಸ್ವತಂತ್ರ ಮತ್ತು ಶಾಶ್ವತ ಎಂದು ಹೇಳಿದೆ, ಆ ಆತ್ಮದ ಕಥೆ ಏನು? ಆತ್ಮವು ಯಾವುದೇ ರೀತಿಯ ಬದಲಾವಣೆಯನ್ನೂ ಹೊಂದುವುದಿಲ್ಲ. ಅದು ಅವಿಕಾರಿ, ಅಜಾತ, ಅವ್ಯಕ್ತ ಅದೇ ಬ್ರಹ್ಮ. ಇಡೀ ವಿಶ್ವವೆಲ್ಲ ಅದರಿಂದಲೇ ವಿಸ್ತಾರವಾಗಿದೆ. ಗೀತೆಯು ಹೇಳುವುದನ್ನು ನೋಡಿದರೆ ಈ ಬ್ರಹ್ಮನಲ್ಲಿಯೇ ಈಶ್ವರತ್ವ ಅಂತರ್ಭೂತವಾಗಿದೆ. ಬ್ರಹ್ಮನು ಅಚಲನು, ಆದರೂ, ಸಹ ಅವನೇ ಎಲ್ಲ ಚಲನೆಗಳ, ಕ್ರಿಯೆಗಳಿಗೆ ಮೂಲ ಕಾರಣನು ಎಂದು ಅರ್ಥವಾಗುವುದು. ಆದರೆ ಇದು ಹೇಗೆ ಸಾಧ್ಯ? ವಿರೋಧವಾಗುವುದಿಲ್ಲವೇ? ಅಲ್ಲದೇ ವಿಶ್ವದಲ್ಲಿ ಅನೇಕ ಪುರುಷರಿದ್ದಲ್ಲಿ ಅದನ್ನು ಹೇಗೆ ಸಮೀಕರಿಸುವುದು? ಅವರಾರೂ ವಿಶ್ವದ ಪ್ರಭುಗಳಲ್ಲ 'ಅನೀಶ'ರಾಗಿದ್ದಾರೆ. ಏಕೆಂದರೆ ಅವರು ತ್ರಿಗುಣಗಳ ಕಾರ್ಯಗಳಿಗೆ ಬದ್ಧರಾಗಿದ್ದಾರೆ. ಇಂದ್ರಿಯಗಳ ಅಹಂಜನ್ಯ ಜ್ಞಾನದಿಂದ ಭ್ರಮಿತರಾಗಿದ್ದಾರೆ. ಗೀತೆಯು ಅವರೆಲ್ಲರೂ ಒಂದೇ ಆತ್ಮ ಎಂದು ಹೇಳುತ್ತದೆಯಾದರೆ ಈ ವಿಕಾಸ, ಅಧೀನತೆ, ಭ್ರಮೆ ಇವೆಲ್ಲ ಬಂದದ್ದು ಹೇಗೆ? ಪುರುಷನು ನಿರಾಸಕ್ತ ತತ್ವವಾಗಿದ್ದಾನೆ ಎಂದು ಹೇಳದ ಹೊರತು ಈ

ಸಮಸ್ಯೆಯನ್ನೂ ಪರಿಹರಿಸುವುದೆಂತು? ಈ ಅನೇಕತೆ ಹೇಗೆ ನಿರ್ಮಾಣವಾಗಿದೆ? ಒಂದು ಶರೀರದಲ್ಲಿರುವ ಆತ್ಮವು ಮುಕ್ತಿಯನ್ನು ಹೊಂದುತ್ತದೆ, ಆದರೆ ಮತ್ತೊಂದು ಮನ ಶರೀರಗಳಲ್ಲಿರುವ ಆತ್ಮವು ಬಂಧನದಲ್ಲಿರುತ್ತದೆ, ಭ್ರಮೆಯಲ್ಲಿರುತ್ತದೆ ಎಂದು ಪ್ರತಿಪಾದಿಸುವುದು ಅನರ್ಥವಾಗುವುದಿಲ್ಲವೇ? ಇವೆಲ್ಲ ಸಮಸ್ಯೆಗಳಿಗೆ ಸಮಾಧಾನ ಹೇಳಿಯೇ ಮುಂದುವರಿಯಬೇಕಾಗುತ್ತದೆ.

ಮುಂದಿನ ಕೆಲ ಅಧ್ಯಾಯಗಳಲ್ಲಿ ಗೀತೆಯು ಈ ಪ್ರಶ್ನೆಗೆ ಅತಿ ಸಮಾಧಾನಕರ ಉತ್ತರವನ್ನು ನೀಡುತ್ತದೆ. ಉತ್ತರ ನೀಡುವ ಉದ್ದೇಶದಿಂದಲೆ ಗೀತೆಯು, ಪುರುಷ ಮತ್ತು ಪ್ರಕೃತಿಗಳನ್ನು ಈ ಅಧ್ಯಾಯದಲ್ಲಿ ಪೃಥಕ್ಕರಣ ಮಾಡುತ್ತದೆ ಮತ್ತು ವೇದಾಂತದ ಯೋಗವನ್ನು ಅನುಸರಿಸಿ, ಪಾರಂಪರಿಕ ಸಾಂಖ್ಯರಿಗೆ ಅಪರಿಚಿತವಾಗಿರುವ ಅನೇಕ ಹೊಸ ತತ್ವಗಳನ್ನು ನಮ್ಮ ಮುಂದಿರಿಸುತ್ತದೆ. ಮೂವರು ಪುರುಷರಿದ್ದಾರೆ, ಅಥವಾ ಓರ್ವನೇ ಪುರುಷನ ಮೂರು ಅವಸ್ಥೆಗಳಿವೆ ಎಂದು ಗೀತೆ ಹೇಳುತ್ತದೆ. ಸಾಂಖ್ಯ ಸಿದ್ಧಾಂತವನ್ನು ಕುರಿತು ವಿಚಾರ ಮಾಡುವಾಗ ಉಪನಿಷತ್ತು ಕೆಲಸಲ ಇಬ್ಬರು ಪುರುಷರು ಎಂದು ಹೇಳುತ್ತದೆ. ಓರ್ವ ಪುರುಷನು ಅಜನು, ಅವನಿಗೆ ಮೂರು ಬಣ್ಣಗಳು ಎಂದು ಉಪನಿಷತ್ ಹೇಳುತ್ತದೆ; ಶಾಶ್ವತ ಸ್ತ್ರೀ ತತ್ವವಾದ ಪ್ರಕೃತಿಯು ತನ್ನ ತ್ರಿಗುಣಗಳ ಮೂಲಕ ಸದಾ ಸೃಷ್ಟಿಯಲ್ಲಿ ತೊಡಗಿರುತ್ತದೆ; ಇನ್ನು ಉಳಿದ ಇಬ್ಬರು ಅವರು ಕೂಡ ಅಜರೇ, ಹುಟ್ಟಿಲ್ಲದವರೇ; ಅವರ ಪೈಕಿ ಓರ್ವನು ಭೋಗಾಸಕ್ತನಾಗಿದ್ದಾನೆ, ಇನ್ನೋರ್ವನು ಪ್ರಕೃತಿಯ ಎಲ್ಲ ಭೋಗಗಳನ್ನು ನಿರಾಕರಿಸಿದ್ದಾನೆ. ತ್ಯಜಿಸಿದ್ದಾನೆ. ಬೇರೊಂದು ಉಪನಿಷತ್ತಿನಲ್ಲಿ ಇವರನ್ನು ಎರಡು ಪಕ್ಷಿಗಳಿಗೆ ಹೋಲಿಸಿ ಹೇಳಿದ್ದಾರೆ. ಒಂದೇ ಗಿಡದ ಶಾಖೆಯ ಮೇಲೆ ಕುಳಿತ ಎರಡು ಪಕ್ಷಿಗಳು, ಅವು ಪರಸ್ಪರ ಆಪ್ತ ಸ್ನೇಹಿತರು, ಅವುಗಳಲ್ಲಿ ಒಂದು ಹಣ್ಣುಗಳನ್ನು ಭುಂಜಿಸುವುದರಲ್ಲಿ ನಿರತವಾಗಿದೆ. ಇನ್ನೊಂದು ಕೇವಲ ಸಾಕ್ಷಿಯಾಗಿ ನೋಡುತ್ತಿದೆಯೇ ವಿನಃ ಏನನ್ನೂ ಭುಂಜಿಸುವುದಿಲ್ಲ. ಪ್ರಕೃತಿ ಬದ್ಧನಾದ ಪುರುಷನು ಪ್ರಕೃತಿಯ ಭೋಗಗಳಲ್ಲಿ ನಿರತರಾಗಿದ್ದರೆ, ಇನ್ನೊಬ್ಬನು ಯಾವ ಭೋಗದಲ್ಲೂ ನಿರತನಾಗಿಲ್ಲ, ನಿರಾಸಕ್ತನಾಗಿದ್ದಾನೆ. ಮೊದಲನೆಯ (ಭೋಗಾಸಕ್ತ) ಪುರುಷನು ಎರಡನೆಯ (ಎಲ್ಲವನ್ನೂ ತ್ಯಾಗ ಮಾಡಿದ) ಪುರುಷನನ್ನು ನೋಡಿ, ಅವನ ಮಹಿಮೆಯನ್ನರಿತಾಗ, ಅವನೂ ದುಃಖದಿಂದ ದೂರಾಗುತ್ತಾನೆ. ಈ ಎರಡೂ ಮಂತ್ರಗಳಲ್ಲಿನ ದೃಷ್ಟಿಕೋನ ಭಿನ್ನವಾಗಿದೆ ಅನ್ನುವುದರಲ್ಲೇನೂ ಸಂದೇಹವಿಲ್ಲ.

ಆದರೆ ಅವುಗಳ ಮೂಲ ಅರ್ಥ ಮಾತ್ರ ಒಂದೇ ಆಗಿದೆ. ಎರಡು ಪಕ್ಷಿಗಳ ಪೈಕಿ ಒಂದು ಶಾಂತವಾಗಿದೆ. ಅಚಲವಾಗಿದೆ. ಪ್ರಕೃತಿಗೆ ಬದ್ಧವಾಗಿಲ್ಲ. ಇಡೀ ವಿಶ್ವವೆಲ್ಲವೂ ಅವನದೇ ವಿಸ್ತರಣೆ, ಆದರೆ ತಾನು ಮಾತ್ರ ಸರ್ವವಿನಿರ್ಮುಕ್ತನಾಗಿ ವ್ಯವಹರಿಸುತ್ತಾನೆ. ಇನ್ನೋರ್ವ ಪುರುಷನು ಪ್ರಕೃತಿಗೆ ಬದ್ಧನಾಗಿದ್ದಾನೆ. ಎರಡರ ಪೈಕಿ ಮೊದಲನೆಯ ಮಂತ್ರವು ಹೇಳುವಂತೆ ಇಬ್ಬರೂ ಒಂದೇ, ಕೇವಲ ಬೇರೆ ಬೇರೆ ಅವಸ್ಥೆಗಳನ್ನು ಪ್ರತಿನಿಧಿಸುತ್ತಾರೆ. ಬದ್ಧ ಮತ್ತು ಮುಕ್ತ ಎರಡೂ ಒಬ್ಬನೇ ಪ್ರಜ್ಞಾಯುಕ್ತನ ಅವಸ್ಥಾಂತರಗಳು. ಎರಡನೆಯ ಪುರುಷನು ಅಜನಾಗಿದ್ದು ಪ್ರಕೃತಿಯ ಚುಟವಟಿಕೆಗಳ ಮಧ್ಯೆ ಇಳಿದು ಬಂದರೂ ಅವುಗಳಿಂದ ದೂರವಾಗಿದ್ದಾನೆ. ಎರಡನೆಯ ಮಂತ್ರವು ಮೊದಲಿನ ಮಂತ್ರದಲ್ಲಿ ಅನುಕ್ತವಾಗಿರುವ ಅರ್ಥವನ್ನು ವಿವೇಚಿಸುತ್ತದೆ. ಪುರುಷನು ತನ್ನ ಅತ್ಯಂತಿಕ ಪರಮೋಚ್ಚ ಏಕತೆಯ ಸ್ಥಿತಿಯಲ್ಲಿ ಸದಾ ಸ್ವತಂತ್ರನು, ಅಚಲನು, ನಿಷ್ಕ್ರಿಯನು. ನಿರಾಸಕ್ತನು; ಆದರೆ ತನ್ನ ನಿಮ್ನ ಅವಸ್ಥೆಯಲ್ಲಿ ಮಾತ್ರ ಪ್ರಕೃತಿಗೆ ಅಧೀನನು, ಬದ್ಧನು, ಅನೇಕ ಜೀವಿಗಳಲ್ಲಿಳಿದು ಬಂದು ನಿರರ್ಥಕ ಭೋಗದಿಂದ ಬೇಸತ್ತು ಭೋಗ ಜೀವನದಿಂದ ವಿಮುಖನಾಗಿ ಶ್ರೇಷ್ಠ ಅವಸ್ಥೆಯಾದ ಏಕತೆಗೆ ಮರಳುತ್ತಾನೆ. ಉಪನಿಷತ್ತಿನ ಕಲ್ಪನೆಯಾದ ಏಕಮೇವ ಸಚೇತನ ಪುರುಷನ ವಿಭಿನ್ನ ಅವಸ್ಥೆಗಳ ವಿವರಣೆಯ ನಮ್ಮ ಗೊಂದಲವನ್ನು ಪರಿಹರಿಸುತ್ತದೆ. ಆದರೆ ಏಕ ಪುರುಷನು ಅನೇಕ ಹೇಗಾಗುತ್ತಾನೆ ಎಂಬುದು ಮಾತ್ರ ಅಸ್ಪಷ್ಟವಾಗಿ ಉಳಿಯುತ್ತದೆ.

ಗೀತೆಯು ಬೇರೆ ಬೇರೆ ಉಪನಿಷತ್ ಮಂತ್ರಗಳ ಇಂಗಿತಾರ್ಥವನ್ನು ಗ್ರಹಿಸಿ ಇಬ್ಬರ ಬದಲಾಗಿ ಮೂವರು ಪುರುಷರ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳುತ್ತದೆ. ಅವನನ್ನು ಅದು ಪುರುಷೋತ್ತಮ ಎಂದು ಕರೆಯುತ್ತದೆ. ಸಮಸ್ತ ವಿಶ್ವವು ಅವನ ಅಭಿವ್ಯಕ್ತಿಯ ಮಹಿಮೆ – "ಮಹಿಮಾನಂ ಅಸ್ಯ" ಕ್ಷರ, ಅಕ್ಷರ ಹಾಗೂ ಉತ್ತಮ ಈ ರೀತಿ ಮೂವರು ಪುರುಷರು ಎಂಬುದು ಗೀತೆಯ ಸಿದ್ಧಾಂತವಾಗಿದೆ. ಕ್ಷರ ಅಂದರೆ ಚಲ, ಚಂಚಲ, ವಿಕಾರಿ, ಕ್ಷಯ ಹೊಂದುವವನು, ವಿನಾಶ ಹೊಂದುವವನು ಎಂದು ಅರ್ಥ. ಪ್ರಕೃತಿಯ ಸ್ವಭಾವಕ್ಕನುಗುಣವಾಗಿ ಆತ್ಮನು ಅನೇಕ ರೂಪ ತಾಳುವುದೆಂದರೆ ಈ ಕ್ಷರ ಪುರುಷನಾಗುವುದು ಅಂತಲೇ ಅರ್ಥ. ಪುರುಷನು ಏಕನಾಗಿದ್ದರೂ ಪ್ರಕೃತಿಯಲ್ಲಿ ಬಹುತ್ವ ತಾಳುತ್ತಾನೆ. ಅನೇಕನಾಗುತ್ತಾನೆ. ಇವನು ಪ್ರಕೃತಿಯಿಂದ ಸ್ವತಂತ್ರನಲ್ಲ. ಇವನು ಪ್ರಕೃತಿಸ್ಥನು. ಪ್ರಕೃತಿಗೆ

ಅಧೀನನಾಗಿರುವ ಪುರುಷನು. ಅಕ್ಷರ ಪುರಷನು ಅಚಲ, ಅಚಂಚಲ, ಅವಿಕಾರಿ, ನಿಷ್ಕ್ರಿಯನು, ದಿವ್ಯ ಪುರುಷನ ಏಕತೆಯ ಅವಸ್ಥೆ ಇದು. ಇವನು ಪ್ರಕೃತಿಯ ಎಲ್ಲ ಕ್ರಿಯೆಗಳಿಗೆ ಸಾಕ್ಷಿಯಾಗಿ ಇರುವವನು. ಅಂದರೆ ಪ್ರಕೃತಿಯ ವ್ಯಾಪಾರಗಳಲ್ಲಿ ತೊಡಗಿಕೊಂಡಿಲ್ಲ. ಪ್ರಕೃತಿಯ ಎಲ್ಲ ಕ್ರಿಯೆ, ಭೋಗ, ಕಾರ್ಯಗಳಿಂದ ನಿರಾಸಕ್ತನಾಗಿರುವ ಅವಸ್ಥೆ ಇದು. ಮೂರನೆಯವನು ಉತ್ತಮ ಪುರುಷ ಅಥವಾ ಪುರುಷೋತ್ತಮ ಇವನು ಪರಬ್ರಹ್ಮ, ಪರಮಾತ್ಮ, ಅಕ್ಷರನ ಏಕತೆ, ಕ್ಷರನ ಅನೇಕತೆ ಎರಡೂ ಅವಸ್ಥೆಗಳನ್ನು ಒಳಗೊಂಡಿರುವ, ಎರಡಕ್ಕೂ ಮೂಲ ಆಶ್ರಯವಾಗಿರುವ ಆತ್ಮ ಇವನು. ಪ್ರಕೃತಿಯು ಅವನ ಶಕ್ತಿಯೇ, ಕ್ರಿಯಾಶೀಲ ಹಾಗೂ ಗತಿಶೀಲವಾಗಿರುವ ತನ್ನ ಪ್ರಕೃತಿ ಶಕ್ತಿಯ ಮೂಲಕ, ತನ್ನ ಸಂಕಲ್ಪದಂತೆ ತಾನೇ ತನ್ನನ್ನು ವಿಶ್ವದಲ್ಲಿ ಪ್ರಕಟಪಡಿಸಿಕೊಳ್ಳುತ್ತಾನೆ. ಇಡೀ ಸೃಷ್ಟಿಯೇ ಅವನ ಅಭಿವ್ಯಕ್ತಿ. ತನ್ನದೇ ಆದ ಶಕ್ತಿಯ ಎಲ್ಲ ಚಲನೆ, ಕ್ರಿಯೆಗಳಿಂದ ತಾನು ಅಲಿಪ್ತನಾಗಿ ಉಳಿಯುತ್ತಾನೆ. ಪುರುಷೋತ್ತಮನು ಪ್ರಕೃತಿಗೆ ಅತೀತನಾಗಿ ಇರುತ್ತಾನೆ. ಅಕ್ಷರ ಪುರುಷನು ಪ್ರಕೃತಿಯ ಕಾರ್ಯಗಳಿಗೆ ಸಾಕ್ಷಿಯಾಗಿ ಇರುತ್ತಾನೆ. ಕ್ಷರ ಪುರುಷನು ಪ್ರಕೃತಿ ವಶನಾಗಿ ಕಾರ್ಯ ಮಾಡುತ್ತಾನೆ. ಉಪನಿಷತ್ತುಗಳ ಅಸ್ಪಷ್ಟ ಕಲ್ಪನೆಗೆ ಗೀತೆಯ ಅತಿ ಸ್ಪಷ್ಟವಾದ, ವ್ಯವಸ್ಥಿತವಾದ ರೂಪಕೊಟ್ಟು ಒಂದು ಸುಸಂಬದ್ಧನಾದ ಸಿದ್ಧಾಂತವಾಗಿ ಪ್ರಸ್ತುತ ಪಡಿಸುತ್ತದೆ. ಉಪನಿಷತ್ತುಗಳಲ್ಲಿ ಹೇಳಿದ ಅಸ್ಪಷ್ಟ ಪರಿಕಲ್ಪನೆಯು ಕಾಲಾಂತರದಲ್ಲಿ ಸಂಪೂರ್ಣ ಮರೆಯಾಗಿಬಿಟ್ಟಿತ್ತು. ಅದನ್ನು ಗೀತೆಯು ಹೊಸ ರೂಪದಲ್ಲಿ ಸುಸಂಬದ್ಧವಾದ ರೂಪದಲ್ಲಿ ಮಂಡಿಸಿದ್ದರಿಂದ ಮುಂದಿನ ಭಾರತೀಯ ಧಾರ್ಮಿಕ ಪ್ರಜ್ಞೆಯ ಬೆಳವಣಿಗೆಯಲ್ಲಿ ಬಹಳ ಮಹತ್ತರ ಪಾತ್ರ ವಹಿಸಿದೆ. ಇದು ಭಕ್ತಿಯೋಗದ ಆಧಾರವೂ ಆಗಿದೆ; ಭಕ್ತಿಯೋಗವು ಅತಿ ಕಠೋರ ಅದ್ವೈತದ ತತ್ವಯೋಗವನ್ನು ದಾಟಿ ಪರಮಾತ್ಮನ ಬಗೆಗಿನ ಅಖಂಡ ಪ್ರೇಮವನ್ನು ಪ್ರದರ್ಶಿಸಲು ಈ ಪರಿಕಲ್ಪನೆಯೇ ಆಧಾರಭೂತವಾಗಿದೆ. ಭಕ್ತಿ ಪ್ರಧಾನ ಪುರಾಣಗಳ ಹಿನ್ನೆಲೆ ಕೂಡ ಇದೇ ಆಗಿದೆ.

ಗೀತೆಯು ಸಾಂಖ್ಯರ ವಿಶ್ಲೇಷಣೆಯನ್ನು ಒಪ್ಪುವುದಿಲ್ಲವೆಂದೇನಲ್ಲ. ಒಪ್ಪುತ್ತದೆ. ಆದರೆ ಪ್ರಕೃತಿಯ ವಿಶ್ಲೇಷಣೆಗೆ ಸೀಮಿತವಾಗಿ ನಿಂತು ಬಿಡುವುದಿಲ್ಲ. ಏಕೆಂದರೆ ಈ ರೀತಿಯ ವಿಶ್ಲೇಷಣೆಯು ಅಹಂ ಭಾವದ ಪುಷ್ಟೀಕರಣ ಮಾಡುವುದೇ ಹೊರತು ಅನೇಕ ಪುರುಷರ ಪರಿಕಲ್ಪನೆಯನ್ನು ವಿವರಿಸುವುದಿಲ್ಲ. ಏಕೆಂದರೆ ಅಹಂ ಭಾವವು ಪ್ರಕೃತಿಯ ಭಾಗವಾಗಿರಬಹುದು. ಆದರೆ (ಅನೇಕ) ಪುರುಷರು

ಪ್ರಕೃತಿಯ ಭಾಗವಲ್ಲ. ಪ್ರಕೃತಿಯಿಂದ ಪುರುಷನು (ಯಾವಾಗಲೂ) ಭಿನ್ನನಲ್ಲ. ಇನ್ನೂ ಹೇಳಬೇಕೆಂದರೆ ಇದಕ್ಕೆ ವಿಪರೀತವಾಗಿ ಗೀತೆಯು ಈಶ್ವರನೇ ತನ್ನ ಪ್ರಕೃತಿಯ ಮೂಲಕ ಜೀವ (ರೂಪ) ತಾಳಿದ್ದಾನೆ ಎಂದು ಹೇಳುತ್ತದೆ. ಪ್ರಕೃತಿಯಲ್ಲಿ ಇರುವ ತತ್ವಗಳೇ 24, ಅದಕ್ಕಿಂತ ಹೆಚ್ಚಿಗಂತೂ ಇಲ್ಲ; ಹೀಗಿರುವಾಗ ಪುರುಷರು ಅನೇಕ ಆದದ್ದು ಹೇಗೆ ಎಂಬ ಸಂದೇಹ ಬರುತ್ತದೆ ಮತ್ತು ಸಾಂಖ್ಯರ ವಿಶ್ಲೇಷಣೆಯಿಂದ ಅದಕ್ಕೆ ಸಮಾಧಾನ ದೊರೆಯುವುದಿಲ್ಲ. ಈ ವಿಷಯದಲ್ಲಿ ಗೀತೆಯ ವಿವರಣೆ ಬೇರೆ ಇದೆ ಮತ್ತು ಸಯುಕ್ತಿಕ ಹಾಗೂ ತಾರ್ಕಿಕವಾಗಿದೆ. ವಿಶ್ವ ಪ್ರಕೃತಿಯು ತನ್ನ ತ್ರಿಗುಣಗಳ ಮೂಲಕ ಯಾವ ರೀತಿ ವಿಶ್ವದ ವ್ಯಾಪಾರವನ್ನು ನಡೆಸಿಕೊಂಡು ಹೋಗುತ್ತದೆ ಅನ್ನುವುದನ್ನು ಸಾಂಖ್ಯರು ವಿವರಿಸುವ ರೀತಿ ಸರಿಯಾಗಿದೆ. ಪುರುಷ ಮತ್ತು ಪ್ರಕೃತಿಯರ ನಡುವಿನ ಸಂಬಂಧವನ್ನು ಕುರಿತು ಅವರು ಹೇಳುವ ವಿಷಯ ಕೂಡ ವ್ಯಾವಹಾರಿಕವಾಗಿ ಉಪಯುಕ್ತವೇ ಆಗಿದೆ. ಪುರುಷನು ಪ್ರಕೃತಿಯ ಗುಣಗಳಲ್ಲಿ ಮುಳುಗಿ ಹೋಗಿ ತನ್ನನ್ನೇ ತಾನು ಮರೆತು ಬಿಡುವುದು ಮತ್ತು ಜಾಗೃತನಾಗಿ ಬಿಡುಗಡೆಹೊಂದುವುದು ಈ ವಿವರಣೆ ಕೂಡ ಉಪಯುಕ್ತವೇ ಆಗಿದೆ. ಆದರೆ ಇದು ನಿಮ್ನ ಪ್ರಕೃತಿಯ ವಿವರಣೆ ಮತ್ತು ತ್ರಿಗುಣಗಳು ಹಾಗೂ ಅಚೇತನವಾದ, ದೃಶ್ಯಮಾನ ಕೆಳ ಸ್ತರದ ಪ್ರಕೃತಿಗೆ ಸರಿಹೊಂದುವ ವಿವರಣೆ. ಆದರೆ ಉನ್ನತವಾದ, ಶ್ರೇಷ್ಠವಾದ, ಪ್ರಜ್ಞಾಯುಕ್ತವಾದ, ಸಚೇತನವಾದ ದೈವೀ ಪ್ರಕೃತಿಯೊಂದಿದೆ. ಈ ಪ್ರಕೃತಿಯೇ ಪ್ರತ್ಯೇಕ ಆತ್ಮವಾಗಿ, ಜೀವವಾಗಿ ಪ್ರಕಟವಾಗಿದೆ. ನಿಮ್ನ ಪ್ರಕೃತಿಯಲ್ಲಿ ಪ್ರತಿ ಜೀವವೂ ಅಹಂ ಆಗಿಯೇ ತೋರುತ್ತದೆಯಾದರೂ, ಉನ್ನತ ಸ್ತರದಲ್ಲಿ ಪುರಷನೇ ಪ್ರತ್ಯೇಕ ಜೀವನಾಗಿ, ಆತ್ಮನಾಗಿ ಪ್ರಕಟವಾಗಿದ್ದಾನೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಅನೇಕತೆಯು ಏಕೈಕ ಪುರುಷನ ಆಧ್ಯಾತ್ಮಿಕ ಸ್ವಭಾವ ಅಥವಾ ಪ್ರಕೃತಿಯೇ ಆಗಿದೆ. ಶ್ರೀ ಕೃಷ್ಣನೇ ಸ್ವತಃ ಗೀತೆಯಲ್ಲಿ ಹೀಗೆ ಹೇಳುತ್ತಾನೆ "ಜೀವಿಗಳಲ್ಲಿರುವ ಪುರುಷನು (ಅಂತರಾತ್ಮನು) ನಾನೇ ಆಗಿದ್ದೇನೆ. ಈ ಸೃಷ್ಟಿಯಲ್ಲಿ ಅದು ನನ್ನ ಭಾಗಶಃ ಪ್ರಕಟನೆಯಾಗಿದೆ ಮತ್ತು ಆ ಪ್ರಕಟನೆಗೆ ನನ್ನ ಎಲ್ಲ ಶಕ್ತಿ ಸಾಮರ್ಥ್ಯಗಳಿವೆ. ಅದು ಸಾಕ್ಷಿ, ಅನುಮಂತಾ, ಭರ್ತಾ, ಜ್ಞಾತೃ ಹಾಗೂ ಈಶ್ವರ. ಅಪರಾ ಪ್ರಕೃತಿಯಲ್ಲಿಳಿದು ಬಂದ ಅದು ತಾನು ಕರ್ಮ ಬಂಧನದಲ್ಲಿದ್ದೇನೆ ಎಂದು ಭಾವಿಸುತ್ತದೆ. ಅಪರಾ ಪ್ರಕೃತಿಯ ಭೋಗಗಳನ್ನು ಭೋಗಿಸಲು ಇಂಥ ಸ್ಥಿತಿ ಅವಶ್ಯವಿದೆ. ಸಮಯ ಬಂದಾಗ ಅದು ಪ್ರಕೃತಿಯಿಂದ ಹಿಂದೆ ಸರಿದು ನಿಂತು, ನಿರಾಸಕ್ತನಾಗಿದ್ದುಕೊಂಡು

ಎಲ್ಲ ಕರ್ಮಗಳಿಂದ ನಿರ್ಲಿಪ್ತವಾಗಿ ಬಿಡುತ್ತದೆ. ಅದು ತ್ರಿಗುಣಗಳನ್ನು ಮೀರಿ ಬೆಳೆಯಬಲ್ಲದು; ಕರ್ಮ ಬಂಧನದಿಂದ ಮುಕ್ತನಾದ ಅದು ಅವಶ್ಯವಾದ ವಿಹಿತ ಕರ್ಮಗಳನ್ನು ಮಾಡುತ್ತಲೇ ಜೀವಿಸುತ್ತದೆ. ನಾನೀಗ ಎಲ್ಲ ತರಹ ಕರ್ಮಗಳನ್ನು ಮಾಡುತ್ತಿಲ್ಲವೇ? ನಿಜವಾಗಿ ನನಗೆ ಯಾವ ಕರ್ಮಗಳನ್ನೂ ಮಾಡುವ ಅವಶ್ಯಕತೆ ಇಲ್ಲ; ಆದರೂ ಮಾಡುತ್ತೇನೆ. ಮಾಡಿಯೂ ಮಾಡದಂತೆ ಇರುತ್ತೇನೆ. ಅಂಥ ಸ್ಥಿತಿ ಸಾಧ್ಯವಿದೆ. ಪುರುಷೋತ್ತಮನ ಜೊತೆ ತಾದಾತ್ಮ್ಯ ಹೊಂದಿ ಅವನ ದಿವ್ಯ ಪ್ರಕೃತಿಯ ಆನಂದವನ್ನು ವಿಹಿತ ಕರ್ಮಗಳನ್ನು ಮಾಡುವುದರ ಮೂಲಕ ಪಡೆಯುತ್ತ ಇರಲು ಸಾಧ್ಯವಿದೆ" ಮತ್ತು ಹಾಗೆ ಇರಬೇಕು ಕೂಡ.

ಗೀತೆಯ ವಿಶ್ಲೇಷಣೆ ಈ ರೀತಿ ಇದೆ. ಅದು ಕೇವಲ ವಿಶ್ವದ ಗೋಚರ ಪ್ರಕ್ರಿಯೆಗೆ ಮಾತ್ರ ಅದು ಸೀಮಿತವಾಗಿ ಬಿಡುವುದಿಲ್ಲ. ಅತಿಚೇತನ ಪ್ರಕೃತಿಯ ನಿಗೂಢ ರಹಸ್ಯಗಳನ್ನು (ಉತ್ತಮಂ ರಹಸ್ಯಂ) ಭೇದಿಸುತ್ತದೆ; ವೇದಾಂತ, ಸಾಂಖ್ಯ ಮತ್ತು ಯೋಗಗಳ ತತ್ವಗಳನ್ನು ಸಮನ್ವಯ ಮಾಡುತ್ತದೆ, ಜ್ಞಾನ–ಭಕ್ತಿ–ಕರ್ಮ ಮೂರನ್ನೂ ಏಕಾತ್ಮಗೊಳಿಸಿ ತನ್ನ ಸಮನ್ವಯ ಸಿದ್ಧಾಂತವನ್ನು ಮಂಡಿಸುತ್ತದೆ. ಕೇವಲ ಶುದ್ಧ ಸಾಂಖ್ಯದ ಮೂಲಕ ಕೂಡ ಕರ್ಮಗಳನ್ನು ಯೋಗದ ಭಾಗಗಳೆಂದು ಶಾಶ್ವತವಾಗಿ ಮುಂದುವರಿಸುವುದು ಹಾಗೂ ಪೂರ್ಣಜ್ಞಾನ, ಮುಕ್ತಿ ಮತ್ತು ತಾದಾತ್ಮ್ಯ ಹೊಂದಿದ ಮೇಲೆಯೂ ಭಕ್ತಿಯಲ್ಲಿ ನಿರತನಾಗಿ ಮುಂದುವರಿಯುವುದು ಅಸಾಧ್ಯವಾಗುವುದು ಅಥವಾ ಹಾಗೆ ಹೇಳುವುದು ತಾರ್ಕಿಕ ಬುದ್ಧಿಗೆ ಒಪ್ಪದ ಮಾತು ಎಂದು ಹೇಳಬೇಕಾಗುವುದು. ಗೀತೆಯು ಸಾಂಖ್ಯ ಜ್ಞಾನದ ಮತ್ತು ಯೋಗ–ಪದ್ಧತಿಯ ಈ ಎಲ್ಲ ಅಡಚಣೆಗಳನ್ನು ದೂರ ಮಾಡುತ್ತದೆ. ಅವುಗಳ ಮೇಲೆ ವಿಜಯ ಸಾಧಿಸುತ್ತದೆ.

(ಸಶೇಷ)

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 09–04–2022 ರಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಜ್ಯೋತಿ ಪ್ರಸರಣ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಜ್ಯೋತಿ ಬೆಳಗುವ ಮೂಲಕ ಶಾಲೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಯುತ ಸೆಲ್ವ ಕುಮಾರ್, ಐ.ಎ.ಎಸ್. – ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಹಾಗೂ ಶ್ರೀಮತಿ ವೀಣಾರಾವ್, ಐ.ಎ.ಎಸ್. – ನಿವೃತ್ತ ಕಾರ್ಯದರ್ಶಿ, ಭಾರತ ಸರ್ಕಾರ ಮತ್ತು ಹಾಲಿ ನಿರ್ದೇಶಕರು, ಶ್ರೀ ಅರವಿಂದೋ ಸೊಸೈಟಿ, ಆರೋ ಸೆಂಟರ್ ಫಾರ್ ಪಬ್ಲಿಕ್ ನ್ಯೂಟ್ರಿಷನ್ ಇವರು ಕಾರ್ಯಕ್ರಮಕ್ಕೆ ಆಗಮಿಸಿದರು. 2022–23 ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಕ ವೃಂದ ಜ್ಯೋತಿ ಹಸ್ತಾಂತರಿಸಿದರು, ನಂತರ 10ನೇ ತರಗತಿ ವಿದ್ಯಾರ್ಥಿಗಳು ಆ ಜ್ಯೋತಿಯನ್ನು 9ನೇ ತರಗತಿ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಿದರು. ಶಾಲೆಯ ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಆನಂತರ, ಮುಖ್ಯ ಅತಿಥಿಗಳು ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಚಟುವಟಿಕೆ ಆಧಾರಿತ ಸಮಗ್ರ ಶಿಕ್ಷಣ ಪೂರ್ವ ಪ್ರಾಥಮಿಕ ಹಂತದವರೆಗೂ ತಯಾರಿಸಿದ ಶಿಕ್ಷಕರ ಮಾರ್ಗದರ್ಶಿ ಹೊತ್ತಗೆಯನ್ನು ಬಿಡುಗಡೆ ಮಾಡಿದರು. ನಂತರ 2021–22ನೇ ಸಾಲಿನ ಉನ್ನತ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಶಾಲೆ ಪ್ರಾಂಶುಪಾಲರು ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದರು. ಶಾಲೆಯ ಶಿಕ್ಷಕಿಯರು ಕಾರ್ಯಕ್ರಮವನ್ನು ನಿರೂಪಿಸಿದರು. ವಂದನಾರ್ಪಣೆ–ಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

ದಿನಾಂಕ 09–04–2022 ಶನಿವಾರ ಸಂಜೆ 4.00 ರಿಂದ 5.30 ಗಂಟೆಯ ವರೆಗೆ ಶ್ರೀ ಶ್ರೀನಿವಾಸ್ ಮುಲುಗು, ಶ್ರೀ ಅರವಿಂದೋ ಸೊಸೈಟಿ, ಹೈದರಾಬಾದ್ ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "Sri Aurobindo: A Versatile Genius" ಎಂಬ ವಿಷಯವಾಗಿ ಆನ್‌ಲೈನ್ ಮೂಲಕ ಪ್ರವಚನ ನೀಡಿದರು. ಜೂಮ್ ಲಿಂಕ್/ಯುಟ್ಯೂಬ್ ಮೂಲಕ

ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಆಸಕ್ತಿಯಿಂದ ಭಾಗವಹಿಸಿದರು.

ಭಾನುವಾರ, ದಿನಾಂಕ 17–04–2022 ರಿಂದ ಶನಿವಾರ, ದಿನಾಂಕ 23–04–2022 ರವರೆಗೆ 'ಸಾವಿತ್ರಿ ಯಜ್ಞ' ಆಯೋಜಿಸಲಾಗಿತ್ತು. ಇದರ ಅಂಗವಾಗಿ ಬೆಳಿಗ್ಗೆ 11.00 ರಿಂದ 12.30 ರವರೆಗೆ ಶ್ರೀ ಎಸ್.ಎಸ್. ಲಹರಿ, ಧರ್ಮದರ್ಶಿ, ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್, ಬೆಂಗಳೂರು ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "Arise O soul, and vanquish Time and Death" ಎಂಬ ವಿಷಯವಾಗಿ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು.

ದಿನಾಂಕ 24–04–2022 ಭಾನುವಾರ ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ರಿಂದ 10.20 ಗಂಟೆಯವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. 10.30 ರಿಂದ 12:00 ಗಂಟೆಯ ವರೆಗೆ ಶ್ರೀ ಶ್ರೀಕಾಂತ್ ಜಮದಗ್ನಿ, ಬೆಂಗಳೂರು ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "Vedanta as The Religion of Humanity - Prospects & Challenges" ಎಂಬ ವಿಷಯವಾಗಿ ಶ್ರೀ ಅರವಿಂದೋ ಸಂಕೀರ್ಣದಲ್ಲಿ ಉಪನ್ಯಾಸ ನೀಡಿದರು. ಆನ್‌ಲೈನ್ ಮೂಲಕ ಸಹ ಆಸಕ್ತರು ಉಪನ್ಯಾಸದಲ್ಲಿ ಭಾಗವಹಿಸಿದರು.

"Integral Yogic Visions of Light" ವಿಷಯ ಕುರಿತು ದಿನಾಂಕ 20ನೇ ಏಪ್ರಿಲ್ 2022 ರಿಂದ 10ನೇ ಜೂನ್ 2022 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.

ದಿನಾಂಕ 30–04–2022 ಶನಿವಾರ ಸಂಜೆ 4.00 ರಿಂದ 5.30 ಗಂಟೆಯ ವರೆಗೆ ಶ್ರೀ ಅರುಳ್ ದೇವ್, ಅತಿಥಿ ಅಧ್ಯಾಪಕರು, ಐಐಟಿ, ಮದ್ರಾಸ್ ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "The Flame Within" ಎಂಬ ವಿಷಯವಾಗಿ ಆನ್‌ಲೈನ್ ಮೂಲಕ ಪ್ರವಚನ ನೀಡಿದರು. ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.



ಫೋಟೋ: ಇಮೇಜಿಂಗ್ ಸಾವಿತ್ರಿ

**ಅಹಾನಾ** (ಪುಟ 30)

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ನಮ್ಮಲ್ಲು ಸಹಿತ ಬೋಧಿಪ್ರತ್ಯಯದ ದಿವ್ಯಾಗ್ನಿ–ಜ್ಯೋತಿ–ಸತತ
ಕರ್ತೃತ್ವದಲ್ಲಿ ಪ್ರತಿನಿಧಿಸುತೀಗ ಮಿಂಚು–ಮಾಲೆಯಲಿ ನಿರತ,
ನಮ್ಮ ಹೃದಯಗಳ ಮಂಡಳವ ತುಂಬಿ ಕುಂಡಳದ ಗೋಷ್ಠಿಯೀಗ
ಸ್ವರ್ಲೋಕ ತಾಣದೆಡೆಗಳವು ಅದರ ಸ್ವಗೃಹದ ವಾಸವಾಗ
ಆ ದಿವ್ಯ–ಸ್ವರ್ಗ–ಸೌಂದರ್ಯ–ಪ್ರಜ್ಞೆ ಸರ್ವವನು ಇಲ್ಲಿ ತಂದು
ಅವತರಣಗೊಂಡು, ಭವ ಪಥದಲಿಂದು ಅನುಭಾವ ನೆಲೆಸಲೆಂದು.

– ಪುಟ್ಟು ಕುಲಕರ್ಣಿ
(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 2 ಪುಟ 112)

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.